ಹುಕ್ಕೇರಿ ಹಿರೇಮಠದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು

(ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ)

◆ ಸಂಶೋಧಕರು ◆

ಶ್ರೀಮತಿ ಎಸ್. ಎಸ್. ಹಿರೇಮಠ

ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ

ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಹುಕ್ಕೇರಿ

◆ ಮಾರ್ಗದರ್ಶಕರು ◆

ಡಾ. ವ್ಹಿ. ಎಸ್. ಮಾಳಿ

ನಿರ್ದೇಶಕರು,

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ ಹಾರೂಗೇರಿ. ಜಿಲ್ಲೆ: ಬೆಳಗಾವಿ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ ಹಾರೂಗೇರಿ.

ಜಿಲ್ಲೆ: ಬೆಳಗಾವಿ

ಮಾನ್ಯತೆ ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨-೨೦೧೩

ಹುಕ್ಕೇರಿ ಹಿರೇಮಠದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು

[ಕನ್ನಡ ವಿಶ್ವವಿದ್ಯಾಲಯಕ್ಕೆ ಎಂ.ಫಿಲ್. ಪದವಿಗಾಗಿ ಅರ್ಪಿಸಿದ ನಿಬಂಧ]

ಸಂಶೋಧಕರು
ಶ್ರೀಮತಿ. ಎಸ್.ಎಸ್. ಹಿರೇಮಠ
ಅತಿಥಿ ಉಪನ್ಯಾಸಕರು, ಕನ್ನಡ ವಿಭಾಗ
ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ಹುಕ್ಕೇರಿ
ತಾ. ಹುಕ್ಕೇರಿ, ಜಿ. ಬೆಳಗಾವಿ
BRDSHKS-00642

ಮಾರ್ಗದರ್ಶಕರು
ಡಾ. ವಿ.ಎಸ್. ಮಾಳಿ
ನಿರ್ದೇಶಕರು
ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ

ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿ ಜಿ. ಬೆಳಗಾವಿ

ಮಾನ್ಯತೆ : ಕನ್ನಡ ವಿಶ್ವವಿದ್ಯಾಲಯ, ಹಂಪಿ

೨೦೧೨-೧೩

ಪ್ರಮಾಣ ಪತ್ರ

ಹುಕ್ಕೇರಿ ಹಿರೇಮಠದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು ಎಂಬ ಶೀರ್ಷಿಕೆಯ ನಿಬಂಧವನ್ನು ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ ನಿರ್ದೇಶಕರಾದ ಡಾ. ವಿ.ಎಸ್. ಮಾಳಿ ಅವರ ಮಾರ್ಗದರ್ಶನಲ್ಲಿ ಸಿದ್ಧಪಡಿಸಲಾಗಿದೆ. ಈ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಪದವಿಯಾಗಿ ಅಥವಾ ಇತರೆ ಯಾವುದೇ ಉದ್ದೇಶಗಳಿಗಾಲಿ ಬಳಸಿಕೊಂಡಿರುವುದಿಲ್ಲವೆಂದೂ ಹಾಗೂ ಇಡಿಯಾಗಿ ಇಲ್ಲವೆ ಬಿಡಿಯಾಗಿ ಪ್ರಕಟಿಸಿರುವುದಿಲ್ಲವೆಂದೂ ಘೋಷಿಸುತ್ತೇನೆ.

ಸ್ಥಳ : ಹಾರೂಗೇರಿ

ದಿನಾಂಕ : ೨೨/೦೭/೨೦೧೩

ಶ್ರೀಮತಿ ಎಸ್.ಎಸ್. ಹಿರೇಮಠ

ಸಂಶೋಧಕರು

ಅತಿಥಿ ಉಪನ್ಯಾಸಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು

ಹುಕ್ಕೇರಿ

ದೃಢೀಕರಣ ಪತ್ರ

ಶ್ರೀಮತಿ ಎಸ್.ಎಸ್. ಹಿರೇಮಠ ಇವರು **ಹುಕ್ಕೇರಿ ಹಿರೇಮಠದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೊಡುಗೆಗಳು** ಎಂಬ ಶೀರ್ಷಿಕೆಯ ಸಂಶೋಧನಾ ಪ್ರಬಂಧವನ್ನು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧದ ಯಾವುದೇ ಭಾಗವನ್ನು ಈ ಮೊದಲು ಬೇರೆ ಯಾವುದೇ ಉದ್ದೇಶ ಅಥವಾ ಪದವಿಗಾಗಲಿ ಬಳಸಿಕೊಂಡಿಲ್ಲವೆಂದು ದೃಢೀಕರಿಸುತ್ತೇನೆ

ಸ್ಥಳ : ಹಾರೂಗೇರಿ

ದಿನಾಂಕ : ೨೨/೦೭/೨೦೧೩

ಡಾ. ವಿ.ಎಸ್. ಮಾಳಿ
ಮಾರ್ಗದರ್ಶಕರು
ಶ್ರೀ ಬಿ.ಆರ್. ದರೂರ ಸಂಶೋಧನಾ ಕೇಂದ್ರ
ಹಾರೂಗೇರಿ

ಪರಿವಿಡಿ

ಅಧ್ಯಾಯ – ೧

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

ಅಧ್ಯಾಯ ೧ ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ ಮತ್ತು ವೈಧಾನಿಕತೆ

೧.೧ ಉದ್ದೇಶ :

ಕರ್ನಾಟಕದ ಇತಿಹಾಸವನ್ನು ಮಗುಚಿದಾಗ ಸಮಾಜೋಧಾರ್ಮಿಕ ಸುಧಾರಣೆಯಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸಿದಂಥವುಗಳು ಮಠಗಳೆಂಬುದು ತಿಳಿದು ಬರುತ್ತದೆ. ಎಂದಿನಿಂದಲೂ ಧರ್ಮಕಾರ್ಯಗಳೊಂದಿಗೆ ಶಿಕ್ಷಣ, ಸಾಹಿತ್ಯ, ಸಾಮಾಜಿಕ, ಸಂಸ್ಕೃತಿ ಪ್ರಸರಣದಂತಹ ಜನೋಪಯೋಗಿ ಕಾರ್ಯಗಳಲ್ಲಿ ತೊಡಗಿಕೊಂಡು, ಕರ್ನಾಟಕದ ಇತಿಹಾಸವೆಂದರೆ ಮಠಗಳ ಇತಿಹಾಸವೆನ್ನುವಷ್ಟರ ಮಟ್ಟಿಗೆ ಕಾರ್ಯನಿರ್ವಹಿಸಿದ್ದು ತಿಳಿದು ಬರುತ್ತದೆ. ಇಂತಹ ಮಹತ್ವದ ಸೇವೆಯ ಆಧಾರದ ಮೇಲೆ ಮಠಗಳನ್ನು ಎರಡು ರೀತಿಯಲ್ಲಿ ವಿಂಗಡಿಸಲಾಗುತ್ತದೆ. ಒಂದು, ಪಂಚಪೀಠಗಳ ಗುರುಸ್ಥಲದ ಮಠಗಳು. ಇನ್ನೊಂದು, ವಿರಕ್ತ ಮಠಗಳು. ಪಂಚಪೀಠದ ಆಧಾರದಲ್ಲಿ ಗುರುವರ್ಗದ ಮಠ ಮತ್ತು ಶಿಷ್ಯವರ್ಗದ ಮಠ, ಪುತ್ರವರ್ಗದ ಮಠಗಳೆಂದು ವರ್ಗೀಕರಿಸಿದರೆ ಶಿವಶರಣರಿಂದ ರಚನೆಯಾದ ಮಠಗಳನ್ನು ವಿರಕ್ತ ಮಠಗಳೆಂದು ವಿಭಾಗಿಸಲಾಗಿದೆ.

೧೨ನೇ ಶತಮಾನದ ಶರಣರಲ್ಲಿ ಪ್ರಮುಖರಾದ ಅಲ್ಲಮ ಪ್ರಭುಗಳು. ಬಸವಣ್ಣನವರು ಸ್ಥಾಪಿಸಿದ ಶೂನ್ಯಮಠವೇ ಮೊದಲ ವಿರಕ್ತಮಠ. ಪ್ರಮುಖರಾದ ಅಲ್ಲಮ ಪ್ರಭುಗಳು ಭಾರತದಾದ್ಯಂತ ಸಂಚರಿಸಿ ಲಿಂಗಾಂಗಿ, ಶಿವ ತತ್ವವನ್ನು ಪ್ರಚಾರ ಮಾಡಿದಾಗ ವರ್ಣಭೇದ, ಲಿಂಗಭೇದ, ಜಾತಿಭೇದ ನೀತಿಗಳನ್ನು ದೂರಸರಿಸಿ ಮಹಾಮಾನವತೆಯ ತತ್ವಚಿಂತಕರ, ಸಮಾಜ ಕಲ್ಯಾಣವನ್ನು ಮಾಡುವ ಕಾಮಧೇನು–ಕಲ್ಪವೃಕ್ಷಗಳಾಗಿ ವಿರಕ್ತ ಮಠಗಳು ರಚನೆಯಾದವು. ಇಂದಿಗೂ ಕರ್ನಾಟಕದಲ್ಲಿ ವಿರಕ್ತ ಮಠಗಳು ತಮ್ಮದೇ ಆದ ವಿಶಿಷ್ಟ ಅಸ್ತಿತ್ವವನ್ನು ಒಳಗೊಂಡಿವೆ.

ಗುರುಸ್ಥಲ ಪೀಠಗಳಿಗಿಂತ ಮೊದಲು ಶೈವಯತಿಗಳಿಂದ ರಚನೆಯಾದ ಶೈವ ದೇವಾಲಯಗಳ ಪರಂಪರೆ ಕ್ರಿ.ಶ. ೬ನೇ ಶತಮಾನದಿಂದ ೧೪ನೇ ಶತಮಾನದವರೆಗೆ ದೊರೆತಿರುವ ಶಾಸನಗಳಲ್ಲಿ ದೊರೆಯುತ್ತದೆ. "ಭಾರತದಾದ್ಯಂತ ಪ್ರಾಚೀನ ಕಾಲದಿಂದಲೂ ಶೈವ ಧರ್ಮವು ಅಸ್ತಿತ್ವದಲ್ಲಿದ್ದುದು ಲಾಕುಳ, ಪಾಶುಪತ, ಕಾಳಾಮುಖಗಳೆಂಬ ಹೆಸರುಗಳಿಂದ ಗುರುತಿಸಲ್ಪಟ್ಟಿದೆ. ಕ್ರಿ.ಶ. ೬೦೨ರಲ್ಲಿ ಲಾಕುಳ ಶೈವರು ಬಾದಾಮಿಯ ಬಳಿ ಮಹಾಕೋಟೇಶ್ವರ ದೇವಾಲಯ ನಿರ್ಮಿಸಿದ್ದು ಇಂದಿಗೂ ಪ್ರಚಲಿತ. ಶೈವ ಯತಿಗಳು ತಾವು ನಿರ್ಮಿಸಿದ ದೇವಾಲಯಗಳಲ್ಲಿಯೇ ವಾಸಿಸುತ್ತ ಓದಿನೊಂದಿಗೆ ಜಪ–ತಪಗಳನ್ನು ಮಾಡುತ್ತಾ ಆಧ್ಯಾತ್ಮ ಸಾಧನೆ ಮಾಡುತ್ತಿದ್ದರು. ಆ ದೇವಸ್ಥಾನಗಳಿಗೆ 'ಸ್ಥಾನ' ಎಂದು ಕರೆಯುತ್ತಿದ್ದರು. ಮುಖ್ಯಸ್ಥ ಮುನಿಗೆ 'ಸ್ಥಾನಿಕ' ಎಂದು ಕರೆಯುತ್ತಿದ್ದರು. ಭಾಷೆ, ನಾಟಕ, ಜ್ಯೋತಿಷ್ಯ, ಸಾಹಿತ್ಯ ಧರ್ಮ ಇವೇ ಮೊದಲಾದ ವಿಷಯಗಳನ್ನು ಅಲ್ಲಿ ಬೋಧಿಸುತ್ತಿದ್ದರು. ಶೈವ ಯತಿಗಳು ನಿರ್ಮಿಸಿದ ದೇವಾಲಗಳು ಮಠಗಳೆಂಬುದು ಅನೇಕ ವಿದ್ವಾಂಸರ ಮತ. ದೇವಾಲಯ (ಮಠ) ಯತಿಗಳು (ಗುರುಗಳು) ವಿದ್ಯಾರ್ಜನೆ (ಶಿಷ್ಯವೃಂದ) ಇವೆಲ್ಲವುಗಳ ಪೂರಕ ಅಂಶವೇ ಇಲ್ಲಯ ಪ್ರಧಾನ ಅಂಶ"[೧]. ಇದೇ ನೆಲೆಯಲ್ಲಿಯೇ ಪಂಚಾಚಾರ್ಯರಾದ ರೇವಣಸಿದ್ಧರು, ಮರುಳಾರಾಧ್ಯರು,

ಏಕೋರಾಮಾರಾಧ್ಯರು, ಪಂಡಿತಾರಾಧ್ಯರು, ವಿಶ್ವಾರಾಧ್ಯರು ಸ್ಥಾಪಿಸಿದ ಜ್ಞಾನ ಸಿಂಹಾಸನ ಪೀಠಗಳು ವೀರಶೈವ ಮಠಗಳಿಗೆ ಮೂಲಸ್ವರೂಪಗಳು. ನಂತರದಲ್ಲಿ ಈ ಪೀಠಗಳ ಪರಂಪರೆಯನ್ನು ಮುಂದುವರೆಸಿಕೊಂಡು ಬಂದ ಜಗದ್ಗುರುಗಳು ಭಾರತದಾದ್ಯಂತ ಸಂಚರಿಸಿ ವೀರಶೈವ ಧರ್ಮವು ಶಾಶ್ವತವಾಗಿ ನೆಲೆಗೊಳ್ಳುವಂತೆ ಮಾಡಿದ್ದಾರೆ. ಮುಂದಿನ ಹಂತಗಳಲ್ಲಿ ಗುರುಮಠಗಳು ವೈಚಾರಿಕತೆಯನ್ನು ರೂಢಿಸಿಕೊಳ್ಳುತ್ತ ಶಿವಶರಣರ ಪ್ರಭಾವದಿಂದ ವಿರಕ್ತ ಮಠಗಳು ರಚನೆಯಾದಾಗ ಅವರ ತತ್ವ ಚಿಂತನೆಗಳನ್ನು, ಲಿಂಗಪೂಜೆ ಕಾಯಕ-ದಾಸೋಹದಂತಹ ಶ್ರೇಷ್ಠ ವಿಚಾರಗಳನ್ನು ಗುರುಸ್ಥಲದ ಮಠಗಳು ಸ್ವೀಕರಿಸಿ ಕಾಲಾನುಕ್ರಮಕ್ಕೆ ತಕ್ಕಂತೆ ಬದಲಾವಣೆ ಹೊಂದುತ್ತಾ ವ್ಯವಸ್ಥೆಯಲ್ಲಿ ಉತ್ತಮ ಅಸ್ತಿತ್ವವನ್ನು ಉಳಿಸಿಕೊಂಡು ನಡೆದಿವೆ. ಈ ನೆಲೆಯಲ್ಲಿಯೇ ವೀರಶೈವ ಪಂಚಾಚಾರ್ಯ ಪರಂಪರೆಯ ಮಠಗಳಲ್ಲಿ ಒಂದಾದ ಹುಕ್ಕೇರಿಯ "ಶ್ರೀ ಗುರು ಶಾಂತೇಶ್ವರ ಹಿರೇಮಠ"ವು "ಗುರು ಪರಂಪರೆ ಮತ್ತು ಬಸವಾದಿ ಶರಣರ ತಾತ್ವಿಕ ಚಿಂತನೆಗಳನ್ನು ಅಳವಡಿಸಿಕೊಂಡು ತ್ರಿವಿಧ ದಾಸೋಹ ನಡೆಸುತ್ತಿರುವ"[೨] ಸ್ವರೂಪವನ್ನು ಈ ಅಧ್ಯಯನ ಒಳಗೊಂಡಿದೆ.

೧.೨ ಅಧ್ಯಯನದ ಉದ್ದೇಶ :

ಕರ್ನಾಟಕದ ಮುಖ್ಯ ಜಿಲ್ಲೆಯಾದ ಬೆಳಗಾವಿಯ ಪಶ್ಚಿಮಕ್ಕೆ ಹಬ್ಬಿಕೊಂಡಿರುವ ಹುಕ್ಕೇರಿ, ತಾಲೂಕಾ ಪ್ರದೇಶ. ಐತಿಹಾಸಿಕವಾಗಿ ವೈಶಿಷ್ಟ್ಯ ಪೂರ್ಣವಾಗಿ ಬೆಳೆದು ಸರ್ವಧರ್ಮ ಸಮನ್ವಯತೆಯನ್ನು ಒಡಲೊಳಗಿಟ್ಟುಕೊಂಡು ಪಾಲಿಸುತ್ತಿದೆ. ೯ನೇ ಶತಮಾನದಲ್ಲಿಯೇ ಪಂಚಪೀಠ ಸಂಸ್ಥಾಪಕರಲ್ಲಿ ಒಬ್ಬರಾದ ರೇಣುಕಾಚಾರ್ಯರು ಬೆಳಗಾವಿಯ ಗಡಿಭಾಗದಲ್ಲಿ ಸಂಚರಿಸುವುದರ ಮುಖಾಂತರ ಧರ್ಮ ಜಾಗೃತಿಗೈದರು. ತಮ್ಮ ಅನುಯಾಯಿಗಳಲ್ಲಿ ಒಬ್ಬರಾದ ಶ್ರೀ ಗುರು ಶಾಂತೇಶ್ವರರಿಗೆ ಜರಜಂಗಮ ತತ್ವಾನ್ವಯ ಪಾಲಿಸುತ್ತ, ಧರ್ಮ ಜಾಗೃತಿ, ಜನಸೇವೆ, ಸಾಮಾಜಿಕ ಸ್ವಾಸ್ತ್ಯಗಳನ್ನು ಕಾಪಾಡಲು ಸೂಚಿಸಿದರು. ನಿಮ್ಮ ಚರಜಂಗಮದ ಮುದ್ರೆಗಳು

ವೀರಶೈವದ ಜ್ಯೋತಿಯಾಗಿ ಈ ಭಾಗದಲ್ಲಿ ಆಚಂದ್ರಾರ್ಕ ಬೆಳಗಲೆಂದು ಹಾರೈಸಿದ ಫಲವೇ ಇಂದಿನ ಹುಕ್ಕೇರಿಯ ಹಿರೇಮಠ.

ಹನ್ನೆರಡನೇ ಶತಮಾನದ ವೀರಶೈವ ಪ್ರಾಬಲ್ಯಕ್ಕೆ ಒಳಗಾದ ಪಂಚಾಚಾರ್ಯ ಪರಂಪರೆಯ ಪೀಠಗಳಲ್ಲಿ ಒಂದಾದ ಶ್ರೀಮದ್ ರಂಭಾಪುರಿ ವೀರ ಸಿಂಹಾಸನ ಪೀಠದ ಶಾಖಾಮಠವಾದ ಹುಕ್ಕೇರಿಯ ಶ್ರೀಗುರು ಶಾಂತೇಶ್ವರ ಸಂಸ್ಥಾನ ಹಿರೇಮಠದ ಐತಿಹಾಸಿಕ ಹೆಜ್ಜೆಗಳು, ಲಿಂಗಾಯತ ಮಠದ ಪರಂಪರೆ, ಪ್ರಸ್ತುತ ಹುಕ್ಕೇರಿ ಮಠದ ಗುರು ಪರಂಪರೆ, ಮಠದ ಧಾರ್ಮಿಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ ಸೇವಾ ಸಾಧನೆಯನ್ನು ಈ ಅಧ್ಯನಯವು ಒಳಗೊಂಡಿದೆ.

೧.೩ ಅಧ್ಯಯನದ ವ್ಯಾಪ್ತಿ :

ಒಂದು ನಿರ್ಧಿಷ್ಟ ಮಿತಿಗೊಳಪಟ್ಟು ಈ ಅಧ್ಯಯನದ ವ್ಯಾಪ್ತಿಯಿದೆ. ಪ್ರಸ್ತುತ ಹುಕ್ಕೇರಿಯ ಗುರು ಶಾಂತೇಶ್ವರ ಹಿರೇಮಠವು (೯) ಒಂಬತ್ತನೇ ಶತಮಾನದಿಂದ ಇಲ್ಲಿಯುವರೆಗಿನ ಸಾಧನೆ, ಗುರು ಪರಂಪರೆ, ಸಾಂಸ್ಕೃತಿಕ ಸಾಮಾಜಿಕ, ಶೈಕ್ಷಣಿಕ, ಸಾಹಿತ್ಯಕ ಹರವನ್ನು ಗಮನಿಸಲಾಗಿದೆ. ಈಗಾಗಲೇ 'ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ'ವನ್ನು ಡಾ. ಕೆ.ರವೀಂದ್ರರವರು ಹಾಗೂ 'ಬೆಂಗಳೂರು ನಗರ, ವೀರಶೈವ ಮಠಗಳ ಒಂದು ಸಂಸ್ಕೃತಿಕ ಅಧ್ಯಯನ'ವನ್ನು ಡಾ. ಬಿ.ಸಿ. ವೀರಪ್ಪನವರು ಹಾಗೂ ಕರ್ನಾಟಕ ವೀರಶೈವ ಮಠಗಳು – ಚಂದ್ರಶೇಖರ ನಾಗಣೂರವರೂ ಅಲ್ಲದೇ ಕನ್ನಡ ಜಾಗೃತಿ ಕೇಂದ್ರ ಚಿಂಚಣಿ ಮಠ ಎಂಬ ಪ್ರತ್ಯೇಕ ಮಠವನ್ನು ಕುರಿತ ಅಧ್ಯಯನ ಶ್ರೀ ಶ್ರೀಶೈಲ ಮಠಪತಿ ಇವರಿಂದ ನಡೆದಿವೆ. ಈ ಜಾಡಿನಲ್ಲಿಯೇ 'ಶ್ರೀ ಗುರು ಶಾಂತೇಶ್ವರರ ದೀಪ್ತಿ' ಎಂಬ ಪುಸ್ತಕವೊಂದನ್ನು – ಡಾ. ಡಿ.ವ್ಹಿ. ಪುರಾಣಿಕರವರು ಪ್ರಕಟಿಸಿದ್ದಾರೆ. ಆದರೆ ಒಂದು ನಿರ್ಧಿಷ್ಟ ಕ್ರಮಬದ್ಧ ಅಧ್ಯಯನಕ್ಕೊಳಪಟ್ಟು ಈಗ ಎಂ.ಫಿಲ್ ಪದವಿಗಾಗಿ

"ಹುಕ್ಕೇರಿ ಹಿರೇಮಠದ ಸಾಮಾಜಿಕ ಮತ್ತು ಸಂಸ್ಕೃತಿಕ ಕೊಡುಗೆ"ಯ ಅಧ್ಯಯನವು ಗಮನಾರ್ಹ ಪ್ರಯತ್ನವಾಗಿದೆ.

ಕರ್ನಾಟಕದ ಗಡಿಭಾಗದಲ್ಲಿ ಬೆಳಗಾವಿ ಜಿಲ್ಲೆಯ ಪಶ್ಚಿಮಕ್ಕೆ ಹರಡಿಕೊಂಡಿರುವ "ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠ"ವು ಗಡಿಭಾಗದಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿರುವ ಹಾಗೂ ಶಿಕ್ಷಣ ಸಾಹಿತ್ಯದೊಂದಿಗೆ ಸಂಘ-ಸಂಸ್ಥೆಗಳ ಬೆಳವಣಿಗೆ, ಸಂಸ್ಕೃತ ಪಾಠಶಾಲೆಯನ್ನು ನಡೆಸುತ್ತ ಆಧ್ಯಾತ್ಮಿಕ ಸಾಧನೆಯನ್ನು ಮಾಡುತ್ತ ಗಡಿಭಾಗದ ಜನರಲ್ಲಿ ಕನ್ನಡತನವನ್ನು ಉಳಿಸುತ್ತಿರುವ ಕನ್ನಡ ಸೇವೆಯನ್ನು ಪರಿಚಯಿಸುವ ಆಶಯವನ್ನು ಈ ಅಧ್ಯಯನ ಒಳಗೊಂಡಿದೆ.

೧.೪ ಅಧ್ಯಯನದ ಸ್ವರೂಪ :

ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತುತ ವಿಷಯವನ್ನು ಏಳು (೬) ಅಧ್ಯಾಯಗಳಲ್ಲಿ ವಿಭಜಿಸಿಕೊಳ್ಳಲಾಗಿದೆ.

೧. ಅಧ್ಯಯನದ ಸ್ವರೂಪ

೨. ಲಿಂಗಾಯತ ಮಠ ಪರಂಪರೆ

೩. ಹುಕ್ಕೇರಿ ಹಿರೇಮಠ

೪. ಗುರು ಪರಂಪರೆ ಮತ್ತು ಗುರು ಶಾಂತೇಶ್ವರರು

೫. ಶ್ರೀ ಮಠದ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳು

೬. ಸಮಾರೋಪ

೧. **ಒಂದನೇ ಅಧ್ಯಾಯದಲ್ಲಿ** : ಅಧ್ಯಯನದ ಸ್ವರೂಪ ಉದ್ದೇಶ ವ್ಯಾಪ್ತಿಯನ್ನು ಕುರಿತು ವಿವೇಚಿಸಲಾಗಿದೆ. ಸಮಾಜೋಧಾರ್ಮಿಕ ಸುಧಾರಣೆಯಲ್ಲಿ ಮಠಗಳು ವಹಿಸಿದ ಪಾತ್ರ, ಪಂಚ ಪೀಠದ ಮಠಗಳು, ವಿರಕ್ತ ಮಠಗಳು ೧೨ನೇ ಶತಮಾನದ ನಂತರ ಪಂಚ

ಪೀಠಗಳು ಶರಣರ ತತ್ವಸಿದ್ಧಾಂತಗಳಿಗೆ ಮಾರುಹೋಗಿ ಅವುಗಳನ್ನು ತಮ್ಮ ಮಠದ ಸಂಪ್ರದಾಯದಲ್ಲಿ ಅಳವಡಿಸಿಕೊಂಡು ಪಾಲಿಸುವಲ್ಲಿ ಹುಕ್ಕೇರಿಯ ಶ್ರೀ ಗುರು ಶಾಂತೇಶ್ವರ ಹಿರೇಮಠವು ಒಂದೆಂಬುದನ್ನು ವಿವೇಚಿಸುತ್ತಾ ಅಧ್ಯಾಯಗಳ ವಿಭಜನೆ ಮತ್ತು ವಿಷಯಗಳನ್ನು ತಿಳಿಸಲಾಗಿದೆ.

೨. **ಎರಡನೇ ಅಧ್ಯಾಯದಲ್ಲಿ** : ಮಠ ಪದದ ಅರ್ಥ ಹಾಗೂ ಪ್ರಾಚೀನತೆ, ಶೈವ ಮಠಗಳಲ್ಲದೆ ಇನ್ನುಳಿದ ಧರ್ಮದ ಮಠಗಳು, ಶೈವ ಯತಿಗಳಿಂದ ನಿರ್ಮಿತ ದೇವಾಯಲಗಳು ಶಂಕರಾಚಾರ್ಯರು ಮತ್ತು ಪಂಚಾಚಾರ್ಯರ ಮಠಗಳು ೧೨ನೇ ಶತಮಾನದ ಶರಣರ ತತ್ವಗಳಿಂದ ವಿರಕ್ತ ಸಂಪ್ರದಾಯವನ್ನು ಹೊಂದಿ ಸೇವೆ ಸಲ್ಲಿಸುತ್ತಿರುವ ಸಂದರ್ಭವನ್ನು ತಿಳಿಸುವ ಪ್ರಯತ್ನ ಮಾಡಲಾಗಿದೆ.

೩. **ಮೂರನೇ ಅಧ್ಯಾಯದಲ್ಲಿ** : ಹುಕ್ಕೇರಿ ಹಿರೇಮಠ ಐತಿಹಾಸಿಕ ಭೌಗೋಳಿಕ ಪರಿಚಯದೊಂದಿಗೆ ಸರ್ವಧರ್ಮ ಸಮನ್ವಯದ ಸಂದರ್ಭ ಹಾಗೂ ಹಿರೇಮಠದ ಸ್ಥಾಪನೆ ಕುರಿತು ವಿವೇಚಿಸಲಾಗಿದೆ.

೪. **ನಾಲ್ಕನೇ ಅಧ್ಯಾಯದಲ್ಲಿ** : ಗುರು ಪರಂಪರೆ ಮತ್ತು ಗುರು ಶಾಂತೇಶ್ವರ ಶ್ರೀಗಳು ಹುಕ್ಕೇರಿಯ ಹಿರೇಮಠದ ಸ್ಥಾಪನೆಯ ವಿವೇಚನೆಯೊಂದಿಗೆ ಶ್ರೀ ಗುರು ಶಾಂತೇಶ್ವರರಿಂದ ಇಂದಿನವರೆಗಿನ ಪರಂಪರೆಯ ವಿಶ್ಲೇಷಣೆ ಮಾಡಲಾಗಿದೆ.

ಅಧ್ಯಾಯ ೫ರಲ್ಲಿ ಶ್ರೀ ಮಠದ ಸಂಸ್ಕೃತಿಕ ಸೇವೆ. ಪ್ರಸ್ತುತ ಹಿರೇಮಠದ ಪೀಠಾಧಿಪತಿಯವರ ಮೂಲಕ ಶ್ರೀ ಗುರು ಶಾಂತೇಶ್ವರ ಮಠದ ಸಾಂಸ್ಕೃತಿಕ ಚಟುವಟಿಕೆಗಳು, ಗಡಿಭಾಗದಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿರುವ 'ಮಹಾನವಮಿಯ' ವಿಶಿಷ್ಟ ಆಚರಣೆಗಳನ್ನು ವಿಶ್ಲೇಷಿಸಲಗಿದೆ.

ಸಾಮಾಜಿಕ ಕಾರ್ಯಗಳು. ಹುಕ್ಕೇರಿಯ ಶ್ರೀ ಗುರು ಶಾಂತೇಶ್ವರ ಹಿರೇಮಠದ ಪ್ರಾರಂಭದಿಂದ ಇಲ್ಲಿಯವರೆಗಿನ ಸಾಮಾಜಿಕ ಕಾರ್ಯಗಳಾದ ಧರ್ಮ ಜಾಗೃತಿ, ಶಿಕ್ಷಣ, ಸಾಹಿತ್ಯಗಳನ್ನು ಕುರಿತು ವಿವೇಚಿಸಲಾಗಿದೆ.

ಆರನೇ ಅಧ್ಯಾಯ ಸಮಾರೋಪ. ಒಟ್ಟು ಆರು ಅಧ್ಯಾಯಗಳಲ್ಲಿ ವಿವೇಚಿಸಲಾದ ವಿಚಾರಗಳನ್ನು ಕುರಿತು ವಿವೇಚಿಸುತ್ತಾ ಅಧ್ಯಯನದ ಉದ್ದೇಶವು ಈಡೇರಿದ ಬಗೆಗೆ ಸಂಕ್ಷಿಪ್ತ ವಿಚಾರಗಳನ್ನು ಹೇಳಲಾಗಿದೆ. ಒಟ್ಟಾರೆ ಈ ಪ್ರಬಂಧವು ಹುಕ್ಕೇರಿ ಹಿರೇಮಠದ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಗಳನ್ನು ಪರಿಚಯಿಸುವುದರೊಂದಿಗೆ ಲಿಂಗಾಯತ ಮಠಗಳ ಪರಂಪರೆ, ಹುಕ್ಕೇರಿ ಹಿರೇಮಠದ ಗುರು ಪರಂಪರೆಯನ್ನು ವಿವರಿಸುತ್ತಾ ನಿರ್ಧಿಷ್ಟ ಚೌಕಟ್ಟಿನಲ್ಲಿ ವಿಷಯ ವಿಶ್ಲೇಷಣೆ ಮಾಡುತ್ತಾ ಕರ್ನಾಟಕದ ಗಡಿಭಾಗದಲ್ಲಿ ಹುಕ್ಕೇರಿ ಮಠವು ತನ್ನದೇ ಆದ ಅಸ್ತಿತ್ವವನ್ನು ಹೊಂದಿದ ಸಂದರ್ಭವನ್ನು ಪರಿಚಯಿಸಲಾಗಿದೆ.

ಈ ಅಧ್ಯಯನವು ಬೇರೆ ಬೇರೆ ದೃಷ್ಠಿಕೋನಗಳನ್ನು ಹೊಂದಿ ಇದುವರೆಗೆ ಮಠದ ಕುರಿತು ಬರೆದಿರುವ ಪ್ರಕಟಣೆಗಳನ್ನು ಗುರುತಿಸುತ್ತಾ, ಮಠದ ಕುರಿತು ರಚನೆಯಾದ ಭಕ್ತಗೀತೆಗಳು, ಮಠದ ವೈಭವದ ಕುರಿತು ರಚನೆಯಾದ ಭಕ್ತಿಗೀತೆಗಳು, ಸುಪ್ರಭಾತಗಳು, ಶ್ರೀ ರುದ್ರಪಾಠಗಳು, ಸ್ತೋತ್ರ ಹಾಗೂ ಮಂಗಳಾರತಿ ಪದಗಳು ಗೀತ ಕುಸುಮಗಳು, ಸ್ತೋತ್ರ ನಾಮಾವಳಿಗಳು ಅಲ್ಲದೇ ವಚನ ಎಲ್ಲ ಸಾಹಿತ್ಯವನ್ನು ಗುರುತಿಸುವುದರೊಂದಿಗೆ ಮಠದ ವಿಹಂಗಮ ನೋಟಗಳನ್ನು ಇಲ್ಲಿ ಕೊಡಲಾಗಿದೆ.

ಒಟ್ಟಾರೆ ಈ ಅಧ್ಯಯನದಿಂದ ತಿಳಿದು ಬರುವುದೇನೆಂದರೆ ಕರ್ನಾಟಕದ ಗಡಿಭಾಗದಲ್ಲಿ ಧರ್ಮ ಜಾಗೃತಿಯೊಂದಿಗೆ ಸಾಮಾಜಿಕ ಶೈಕ್ಷಣಿಕ ಕಾರ್ಯಗಳನ್ನು ಮಾಡುತ್ತಾ ಕನ್ನಡ ಸಂಸ್ಕೃತಿಯನ್ನು ಜೀವಂತವಿರಿಸುವ ಕಾರ್ಯವನ್ನು "ಹುಕ್ಕೇರಿ ಶ್ರೀ ಗುರು ಶಾಂತೇಶ್ವರ

ಹಿರೇಮಠ"ವು ನಿರಂತರವು ಮಾಡುತ್ತಿದ್ದೆ ಎಂಬುದು ಶ್ರೋತೃಳ ಗಮನಕ್ಕೆ ಬಂದರೆ ಈ ಸಂಶೋಧನೆಯು ಸಾರ್ಥಕಗೊಂಡಂತಾಗುತ್ತದೆ.

ಅಡಿ ಟಿಪ್ಪಣಿ ::

೧. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ

೨. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ

*****

ಅಧ್ಯಾಯ – ೨

ಲಿಂಗಾಯತ ಮಠ ಪರಂಪರೆ

ಅಧ್ಯಾಯ ៖ ಎರಡು

ಲಿಂಗಾಯತ ಮತ ಪರಂಪರೆ

ಮನುಷ್ಯ ಅನಾದಿಕಾಲದಿಂದಲೂ ನಿರಂತರ ಬದುಕಿಗಾಗಿ ಹೋರಾಡುತ್ತಲೇ ಪ್ರಗತಿಯನ್ನು ಸಾಧಿಸುತ್ತಲೇ ಬಂದಿದ್ದಾನೆ. ಕೆಲವೊಮ್ಮೆ ಸಾಧನೆಯ ಹಾದಿಯಲ್ಲಿ ನೈತಿಕತೆಯನ್ನು ಕಳೆದುಕೊಂಡು ಅಧೋಗತಿಯ ಹಾದಿಯನ್ನು ಹಿಡಿದಾಗ ಅದಾವುದೋ ಅಲೌಕಿಕ ಶಕ್ತಿಯೊಂದು ಮಾನವನ ಮನದಲ್ಲಿ ಹೊಕ್ಕು, 'ದೇವರು' – 'ಭಕ್ತಿ' – ಎಂಬ ಸೂತ್ರಗಳನ್ನು ಕಂಡುಕೊಂಡು ಭಯದಿಂದ ಶಾಂತನಾಗಲು ದಯವನ್ನು ಪಾಲಿಸತೊಡಗಿರಬೇಕು. ಈ ನೆಲೆಯಲ್ಲಿಯೇ ತಪಸ್ಸು, ಯಜ್ಞ–ಯಾಗಾದಿಗಳು ನಡೆದು ವೇದ–ಉಪನಿಷತ್ತುಗಳಂತಹ ವೈಚಾರಿಕ ಕ್ರಾಂತಿ ಇಡೀ ಜಗತ್ತಿನಲ್ಲಿ ನಡೆದು ವಿವಿಧ ಧರ್ಮಗಳು ಹುಟ್ಟಿಕೊಂಡವು. ಏಸುವಿನಿಂದ ಕ್ರೈಸ್ತ ಧರ್ಮವೂ, ಬುದ್ಧನಿಂದ ಬೌದ್ಧ ಧರ್ಮವೂ, ಮೊಹಮ್ಮದ ಪೈಗಂಬರರಿಂದ ಇಸ್ಲಾಂ ಧರ್ಮವೂ, ಮಹಾವೀರನಿಂದ ಜೈನ ಧರ್ಮವೂ, ಗ್ರೀಸ್‌ನ ಸಾಕ್ರೇಟಿಸ್, ಪ್ಲೇಟೋ, ಅರಿಸ್ಟಾಟಲ್‌ರಂತಹವರ ಮುಕ್ತ ಚರ್ಚೆಯಿಂದ ಜೀವನ ಶೈಲಿಯೇ ಬದಲಾಯಿತು. ಕ್ರಮೇಣ ಮನುಷ್ಯನ 'ಮತಿ' ಚುರುಕಾದಾಗ ಹೆಚ್ಚು ಹೆಚ್ಚು ಧರ್ಮ–ದೇವರನ್ನು ಕುರಿತು ಚಿಂತಿಸತೊಡಗಿದನು. ಶಿವಧ್ಯಾನವನ್ನೇ

ಮುಖ್ಯವಾಗಿಟ್ಟುಕೊಂಡು ಪಂಚಾಚಾರ್ಯ ಅವತರಣವಾಯಿತು. ದೇಶದಾದ್ಯಂತ ಸಂಚಾರ ಕೈಕೊಂಡು ಮಾನವನ ಲೌಕಿಕ ಅಭೀಪ್ಸೆಯನ್ನು ಕಳೆಯಲು ಧರ್ಮ ಜಾಗೃತಿ ಮಾಡತೊಡಗಿದರು. ತಮ್ಮ ವಾಸಕ್ಕಾಗಿ ಕಟ್ಟಿಕೊಂಡ ಆಶ್ರಯದಲ್ಲಿ ಜಪ, ತಪ, ಆಧ್ಯಾತ್ಮ ಸಾಧನೆ ಮಾಡುತ್ತ ಯೋಗ ಸಿದ್ಧಿಯನ್ನು ಪಡೆದು ತಾವಿರುವ 'ಆಶ್ರಯ'ಕ್ಕೆ ಮಠವೆಂದು ಕರೆದರು. ಧ್ಯಾನ, ಜಪ-ತಪಗಳೊಂದಿಗೆ ನ್ಯಾಯ-ನೀತಿ, ಧರ್ಮ-ಸಂಸ್ಕೃತಿಯಂತಹ ಉತ್ತಮ ಮೌಲ್ಯಗಳ ಅನುಷ್ಠಾನಕ್ಕಾಗಿ ಲಿಂಗಪೂಜೆಯನ್ನು ಆಚರಿಸುತ್ತ ಬಂದರು. ಈಗಲೂ ಈ ಚರಜಂಗಮ ಮಠಗಳಿವೆ.

೨.೧ 'ಮಠ' ಪದದ ಅರ್ಥ :

ವೇದ ಕಾಲದಲ್ಲಿ ಋಷಿಮುನಿಗಳು ಅರಣ್ಯವಾಸಿಗಳಾಗಿರುತ್ತಿದ್ದು, ಜ್ಞಾನಾರ್ಜನೆಗೆ ತಮ್ಮಲ್ಲಿ ಬಂದ ಶಿಷ್ಯರಿಗೆ ಇರಲು ನೀಡಿದ ಆಶ್ರಯವೇ 'ಗುರುಕುಲ'ವಾಯಿತು. ಸತ್ಯ-ಶೀಲ-ಸೇವಾ ಭಾವನೆಯನ್ನು ಹೊಂದಿ ಗುರುಸೇವೆ ಮಾಡುತ್ತ ಜ್ಞಾನಾರ್ಜನೆ ಮಾಡುವುದೇ ಗುರುಕುಲದ ಮುಖ್ಯ ಲಕ್ಷಣವಾಯಿತು. ಇದರ ಪರ್ಯಾಯ ನಾಮವೇ 'ಮಠ'ವಾಯಿತು. ಸಂಸ್ಕೃತದಲ್ಲಿ 'ಮಠ'ವೆಂದರೆ ವಾಸಿಸು, ಶಾಲೆ, ಕಾಲೇಜು, ವಿದ್ಯಾ ಕೇಂದ್ರ, ದೇವಾಲಯ ಎಂಬರ್ಥಗಳಿವೆ. ಅಮರಸಿಂಹನು ತನ್ನ ಅಮರಕೋಶದಲ್ಲಿ ಮಠವನ್ನು ಕುರಿತು "ಮಠಃ ಛಾತ್ರಾದಿ ನಿಲಯ!" ಎಂದಿದ್ದಾರೆ. ಪ್ರಾಚೀನ ಗ್ರೀಸ್‌ನಲ್ಲಿ ಮಠಗಳನ್ನು 'ಜಿಮ್ನಾಸಿಯಂ' ಎನ್ನುತ್ತಾರೆ. ಮೂರನೇ ಶತಮಾನದ ಅಶ್ವಘೋಷನು "ಬ್ರಹ್ಮಘೋಷೋ ಭವೇತ್ ಯತ್ರಯತ್ರ ಬ್ರಹ್ಮಾಶ್ರಯಸ್ಥಿತಃ। ದೇವಸ್ಯ ಪೂಜನಂ ದಾನಂ ಮಠಮಿತ್ಯಭಿಧೀಯತೆ" ಎಂದು ಹೇಳಿದ್ದಾರೆ. ಎಲ್ಲಿ ಜಪ-ತಪ ವೇದಾಧ್ಯಯನಗಳು ನಡೆಯುತ್ತ ಸನ್ಯಾಸಿಗಳಿಗೆ ವಾಸಿಸಲು ಯೋಗ್ಯ ಸ್ಥಳವಿರುತ್ತದೆಯೋ ಅದುವೇ 'ಮಠ' ಎನ್ನುತ್ತಾರೆ. ಶ್ರೀಮಾನ್ಯ ಆಪ್ಟೆಯವರು 'ಮಠ'ವನ್ನು ಕುರಿತು ಒಂಬತ್ತು ಅರ್ಥ ಹೇಳಿದ್ದಾರೆ. "ಕುಠೀರ, ಸಾಧಕರ ನಿವಾಸ, ವಿಹಾರ, ಶಿಕ್ಷಾಲಯ, ವಿದ್ಯಾಮಂದಿರ, ಮಹಾವಿದ್ಯಾಲಯ, ಜ್ಞಾನಪೀಠ, ಮಂದಿರ ದೇವಾಲಯವೆಂದು ಹೇಳಿದರೆ,

ಪಾಶ್ಚಾತ್ಯ ವಿದ್ವಾಂಸಕ ಮೇಕಡೊನೆಲ್‌ರವರು ತಮ್ಮ ಸಂಸ್ಕೃತ ಶಬ್ದಕೋಶದಲ್ಲಿ ಒಟ್ಟು ಸನ್ಯಾಸಿಯ ಹಾಗೂ ವಿದ್ಯಾರ್ಥಿಗಳ ಕುಟೀರ, ಧಾರ್ಮಿಕ ಪಾಠಶಾಲೆ, ಗುರುಕುಲ" ಎಂದು ಹೇಳಿದ್ದಾರೆ. ಡಾ. ಬಾಬು ರಾಜೇಂದ್ರ ಪ್ರಸಾದರವರು ಹುಬ್ಬಳ್ಳಿಯ ಮೂರು ಸಾವಿರ ಮಠಕ್ಕೆ ಭೇಟ್ಟಿ ನೀಡಿದ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ರಾಮಕೃಷ್ಣ ಮರಾಠೆಯವರು 'ದಾಸೋಹ' ಎಂಬ ಪುಸ್ತಕದಲ್ಲಿ ಸಂಗ್ರಹಿಸಿದ್ದಾರೆ. "ಮಠವೆಂದರೆ ಕೇವಲ ಒಂದು ಭವ್ಯ ಕಟ್ಟಡ ಮಾತ್ರವಲ್ಲ, ಅದೊಂದು ಧಾರ್ಮಿಕ ಸೌಧವಾಗಿ ಸಮಸ್ತ ಸಮಾಜವೇ ಸಾಂಘೀಕವಾಗಿ ವಿಕಾಸಗೊಳ್ಳುವಂತೆ ಮಾಡುವ ಪೂಜಾಗೃಹ ಎನ್ನಬಹುದು. ಮಠಗಳು ಮಾನವ ಕುಲದ ನಂದಾದೀಪಗಳು ಮಠಗಳಿಂದಲೇ ಭಾರತದ ಸಂಸ್ಕೃತಿ ಉಳಿದಿರುವುದು"[೧] ಎಂಬ ಮಾತಿನಲ್ಲಿ ಭಾರತ ದೇಶದ ಉಜ್ವಲ ಸಂಸ್ಕೃತಿಕ ಸಂಪತ್ತಿದೆ. ಅದನ್ನು ತಲೆಮಾರಿನಿಂದ ತಲೆಮಾರಿಗೆ ಉಳಿಸಿಕೊಂಡು ಹೋಗುವ ಜವಾಬ್ದಾರಿಯನ್ನು ಮಠಗಳು ಹೊತ್ತಿವೆ ಎಂಬುದು ಸತ್ಯ. ಹೀಗೆ ಭಾರತೀಯ ಮತ್ತು ಪಾಶ್ಚಾತ್ಯ ವಿವಿಧ ವಿದ್ವಾಂಸರ ವಿಚಾರಗಳಲ್ಲಿ 'ಮಠ'ದ ಅರ್ಥ ವ್ಯಾಪ್ತಿ ಕುರಿತು ಒಮ್ಮತವಿರುವುದು ತಿಳಿದು ಬರುತ್ತದೆ. "ಮೂಲತಃ ಧಾರ್ಮಿಕ ವಿಧಿವಿಧಾನಗಳನ್ನು ಆಚರಿಸುವ ಧಾರ್ಮಿಕ ಕೇಂದ್ರಗಳಾಗಿ ಸಮಾಜದ ಒಳಿತಿಗಾಗಿ ದುಡಿಯುತ್ತ ಬಂದಿವೆ. ಅವುಗಳ ಧಾರ್ಮಿಕ ವಲಯವನ್ನು ದಾಟಿ ಸಾಮಾಜಿಕ ವಲಯವನ್ನು ವ್ಯಾಪಿಸಿಕೊಂಡಿತು"[೨]. ಈ ಹಿನ್ನೆಲೆಯಲ್ಲಿ ಕ್ರಮೇಣ ಮಠಗಳು "ವಿದ್ಯಾ ಪ್ರಸಾರ, ಧರ್ಮ ಪ್ರಸಾರ, ದಾಸೋಹ, ಸಾಮಾಜಿಕ ಸೇವೆ, ಸಾಂಸ್ಕೃತಿಕ ಪರಂಪರೆ ಪಂಚಾಚಾರ್ಯರ ಬೋಧೆ ಅನುಭವ ಮಂಟಪದ ಕಾಳಜಿ ಕಳಕಳಿಯ ಅನುಷ್ಠಾನ"ಗಳ ಮುಖಾಂತರ ಮನುಕುಲದ ಏಳ್ಗೆಯತ್ತ ಗಮನ ಹರಿಸುವುದು ಶ್ಲಾಘನೀಯ.

'ಮಠ' ಪದದ ಪರಂಪರೆ ವೇದಕಾಲದವರೆಗೆ ತನ್ನ ಹೆಸರನ್ನು ಬೆಳೆಸಿಕೊಂಡರೆ ಕ್ರಿ.ಶ. ೬ನೇ ಶತಮಾನದಿಂದ ೧೪ನೇ ಶತಮಾನದ ಅವಧಿಯಲ್ಲಿ ಶೈವ ದೇವಾಲಯಗಳ ಪರಂಪರೆ ಕುರಿತು ಶಾಸನಗಳು ದೊರೆತು, ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಶೈವಧರ್ಮ

ಅಸ್ತಿತ್ವದಲ್ಲಿದ್ದುದನ್ನು ಕಾಣಬಹುದು. ಕಾಳಾಮುಖ ಪಾಶುಪತ ಲಾಕುಳ ಎಂಬ ಹೆಸರಿನಿಂದ ಪ್ರಚಾರದಲ್ಲಿದ್ದು ಕ್ರಿ.ಶ. ೬೦೨ರಲ್ಲಿ ಲಾಕುಳ ಶೈವರು ಬಾದಾಮಿಯ ಬಳಿ ಮಹಾಕೋಟೇಶ್ವರ ದೇವಾಲಯವನ್ನು ನಿರ್ಮಿಸಿದ್ದು ಶೈವಧರ್ಮದ ಪ್ರಾಚೀನತೆಯನ್ನು ತಿಳಿಸುತ್ತದೆ. ಅದರ ಆಧ್ಯಾತ್ಮಿಕ ಸಾಧನೆಗೆ ಬಳಸಿದ ಆಶ್ರಯವೇ 'ಮಠ'ವೆಂಬುದನ್ನು ವಿದ್ವಾಂಸರು ಒಪ್ಪಿದ್ದಾರೆ. ಇಂಥ ಸ್ವರೂಪದ ಮಠಗಳು ಭಾರತದಲ್ಲಿ ನಿರ್ಧಿಷ್ಟವಾಗಿ ರಚನೆಗೊಂಡಿದ್ದು ೮ನೇ ಶತಮಾನದಲ್ಲಿ ಅಧ್ವೈತ ಪರಂಪರೆಯ ಶಂಕರಾಚಾರ್ಯರು ಅಪ್ರತಿಮ ಪಾಂಡಿತ್ಯವನ್ನೊಳಗೊಂಡ ಮೇಧಾವಿಗಳು, ವೈರಾಗ್ಯ ಸಂಪನ್ನರು, ತರ್ಕ ಪಾಂಡಿತ್ಯವನ್ನೊಳಗೊಂಡವರು. ಅಖಂಡ ಭಾರತವನ್ನು ಸಂಚರಿಸಿ ಭಾರತದ ಉತ್ತರದಲ್ಲಿ 'ಭದರಿ'ಯನ್ನು, ದಕ್ಷಿಣದಲ್ಲಿ 'ಶೃಂಗೇರಿ' ಮಠವನ್ನು, ಪೂರ್ವದಲ್ಲಿ 'ಪುರಿ' ಮಠವನ್ನು, ಪಶ್ಚಿಮದಲ್ಲಿ 'ದ್ವಾರಕ' ಮಠವನ್ನು ಪ್ರಾರಂಭಿಸಿದ್ದು, ಭಾರತದಲ್ಲಿ ಮಠ ಸ್ಥಾಪನೆಗೊಂದು ಭದ್ರ ಬುನಾದಿಯಾಯಿತು. ಇವರಿಗೆ ಉಪನಿಶತ್ತುಗಳಲ್ಲಿ ದೊರೆತ ಶೃತಿ, ಸ್ಮೃತಿ, ಶಿವಾಗಮಗಳು ಪ್ರೇರಕವಾದವು. "ವೀರಶೈವ ಸಿದ್ಧಾಂತದ ಪರಮೋದ್ದೇಶಗಳಾದ ಅಷ್ಟಾವರಣ, ಪಂಚಾಚಾರ ಷಟಸ್ಥಲಗಳ ತ್ರಿಕೂಟ, ಲಿಂಗಾಂಗ ಸಾಮರಸ್ಯ, ದಾಸೋಹ, ಶಿವಯೋಗ ಮೊದಲಾದ ಘನ ಮೌಲ್ಯಗಳನ್ನು ಧಾರಾಳವಾಗಿ ಒಪ್ಪಿದರು. ೯ನೇ ಶತಮಾನದಲ್ಲಿ ಪಂಚಾಚಾರ್ಯರುಗಳಾದ ರೇವಣಸಿದ್ಧರು ರಂಭಾಪುರಿ (ಬಾಳೆಹೊನ್ನೂರು)ಯಲ್ಲಿ ಸ್ಥಾಪಿಸಿದ ವೀರಸಿಂಹಾಸನ ಪೀಠ, ಏಕೋರಾಮರಾಧ್ಯರು ಕೇದಾರದಲ್ಲಿ ಸ್ಥಾಪಿಸಿದ ವೈರಾಗ್ಯಪೀಠ. ಪಂಡಿತಾರಾಧ್ಯರು ಶ್ರೀಶೈಲದಲ್ಲಿ ಸ್ಥಾಪಿಸಿದ ಸೂರ್ಯಸಿಂಹಾಸನ ಪೀಠ ವಿಶಾರಾಧ್ಯರು ಕಾಶಿಯಲ್ಲಿ ಸ್ಥಾಪಿಸಿದ ಜ್ಞಾನ ಸಿಂಹಾಸನ ಪೀಠಗಳು ವೀರಶೈವ ಪರಂಪರೆಯ ತಾಯಿ ಬೇರುಗಳು"೩.

ಭಾರತದಲ್ಲಿ ಕೇವಲ ಶೈವ ಸಂಪ್ರದಾಯದ ಮಠಗಳು ಮಾತ್ರವಲ್ಲದೆ ಕ್ರಿ.ಶ. ಪೂರ್ವದ ಮೂರನೆಯ ಶತಮಾನದಲ್ಲಿಯೇ ಗುರುಕುಲ ಅಥವಾ ಮಠವನ್ನು ಹೋಲುವ ಬೌದ್ಧ ವಿಹಾರಗಳು, ಜೈನ ಬಸದಿಗಳು ಇದ್ದ ಉಲ್ಲೇಖಗಳನ್ನು ಇತಿಹಾಸದಲ್ಲಿ ನೋಡಬಹುದು. ಬೌದ್ಧ

ಸನ್ಯಾಸಿಗಳು ಗ್ರಾಮಗಳಲ್ಲಿ ವಾಸಿಸಿದರೆ ಅದನ್ನು ಆವಾಸವೆಂತಲೂ ನಗರ ಪ್ರದೇಶದ ವಾಸಕ್ಕೆ 'ಆರಾಮ'ವೆಂತಲೂ ಇವುಗಳೇ ಮುಂದೆ ಸನ್ಯಾಸಿಗಳ ಮಠಗಳಾಗಿ ಪರಿವರ್ತನೆಯಾದವು ಇವುಗಳನ್ನೇ 'ಸಂಘರಾಮ'ಗಳೆಂದು ಕರೆಯುತ್ತಿದ್ದರು. ಅಂದರೆ ಬೌದ್ಧ 'ಪಾರಿವ್ರಾಜರಕ' ವಾಸ ಸ್ಥಾನಗಳೂ, ಜೈನ ಸನ್ಯಾಸಿಗಳು (ಸವಣರು) ವಾಸಿಸುವ ಬಸದಿ ಅಥವಾ ಚೌತ್ಯಾಹಾರಗಳು ಮಠದ ಸ್ವರೂಪಗಳೇ. ಅಲ್ಲಿಯು ಗುರು-ಶಿಷ್ಯರು, ಸಾಧು-ಸಂತರು ಒಟ್ಟಿಗೆ ಜೀವಿಸುತ್ತಿದ್ದ ಮಠಗಳೇ ಆಗಿದ್ದು ಮುಂದಿನ ಶೈವ ಧರ್ಮದ 'ಮಠ' ಪರಂಪರೆಗೆ ಪ್ರೇರಕ ಶಕ್ತಿಗಳಾದವು ಎಂಬುದರಲ್ಲಿ ಎರಡು ಮಾತಿನಲ್ಲಿ.

೧೨ನೇ ಶತಮಾನದ ವಿರಕ್ತ ಪರಂಪರೆಗೆ ಮೊದಲು ಮಠಗಳು ಅಸ್ತಿತ್ವದಲ್ಲಿದ್ದವು ಎನ್ನುವುದಕ್ಕೆ ಆಧ್ಯವಚನಕಾರರಾದ ಜೇಡರ ದಾಸಿಮಯ್ಯನವರ ವಚನವೊಂದು 'ಮಠದ' ಅಸ್ತತ್ವವನ್ನು ತಿಳಿಸುತ್ತದೆ.

"ಬರುಶಟಗನ ಭಕ್ತಿ ದಿಟವೆಂದು ನಚ್ಚಲುಬೇಡಾ

ಮಠದೊಳಗಣ ಬೆಕ್ಕು ಇಲಿಯ ಕಂಡು

ಪುಟನೆಗೆದಂತಾಯ್ತು ಕಾಣಾರಾಮನಾಥ"

ಎಂಬಲ್ಲಿ ಮಠಗಳು ವಚನಕಾರರಿಗಿಂತ ಮೊದಲು ಅಸ್ತಿತ್ವದಲ್ಲಿದ್ದು ಅಲ್ಲಿ ಶಾಸ್ತ್ರ ಪುರಾಣಗಳನ್ನು ಹೇಳುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ.

ಪಂಚಪೀಠಗಳ ಪರಂಪರೆಯಿಂದ ಗುರು ಮಠಗಳು, ಶರಣರ ಪರಂಪರೆಯಿಂದ ವಿರಕ್ತ ಮಠಗಳು ಶೈವ ಪಂಥಕ್ಕೆ ಹೊಸ ಆಯಾಮ ಒದಗಿಸಿತು. ಬಸವಾದಿ ಶಿವ ಶರಣರ ಧಾರ್ಮಿಕ ಸಾಮಾಜಿಕ, ಸಾಹಿತ್ಯಕ ಕ್ರಾಂತಿ, ಅನುಭವ ಮಂಟಪ, ಶೂನ್ಯ ಸಂಪಾದನೆ, ಶೂನ್ಯ ಸಿಂಹಾಸನಾಧೀಶ ಅಲ್ಲಮ್ಮ ಪ್ರಭುದೇವರು ದೇಶ ಪರ್ಯಟನೆಗೊಂಡು, ಕನ್ಯಾಕುಮಾರಿಯಿಂದ ಓಿಮಾಚಲದವರೆಗೂ ಸಂಚಾರ ಬೆಳೆಸಿ ಜನರಲ್ಲಿ ವೀರಶೈವ ಲಿಂಗಾಂಗಿ ಧರ್ಮದ ತತ್ವವನ್ನು

ಬಿತ್ತಿದ ಪರಿಣಾಮವಾಗಿ ಎಲ್ಲ ವರ್ಗದ ಜನತೆ ವೀರಶೈವ ತತ್ವಗಳನ್ನೂ, ಶರಣರ ಭಕ್ತಿ ಜ್ಞಾನ ವೈರಾಗ್ಯ, ನಿರಹಂಕಾರ ನಿಸ್ವಾರ್ಥ ಸೇವೆ ಸಾಮಾಜಿಕ ಕಳಕಳಿ, ಕಾಯಕ-ದಾಸೋಹದಂತಹ ತತ್ವಗಳನ್ನು ಮೆಚ್ಚಿಕೊಂಡರು. ತತ್ಪರಿಣಾಮ ಕನ್ನಡ ನಾಡಿನಾದ್ಯಂತ ಅನೇಕ ವೀರಕ್ತ ಮಠಗಳು ರಚನೆಗೊಂಡವು. ಕೇವಲ ಆಧ್ಯಾತ್ಮ, ಧಾರ್ಮಿಕ ವಿಧಿವಿಧಾನಗಳಿಗೆ ಮೀಸಲಾದ ಮಠಗಳು ಸಾಮಾಜಿಕ ಸೇವೆಯತ್ತ ಮೈಚಾಚಿದವು. ಶಿಕ್ಷಣ, ಸಾಹಿತ್ಯಕ್ಕೆ ಅಗಮ್ಯ ಸೇವೆ ಸಲ್ಲಿಸಲು ಬದ್ಧವಾದವು. ನಾಡಿನ ಭಾಷೆ-ಸಂಸ್ಕೃತಿಯನ್ನು ಉಳಿಸಿ ಬೆಳೆಸುವಲ್ಲಿ ಅವಿರತವಾಗಿ ಶ್ರಮಿಸುತ್ತಿರುವುದು ಇಂದಿನ ಸತ್ಯ. ಈ ನಿಟ್ಟಿನಲ್ಲಿ ಪ್ರಸ್ತುತ ಅವಧಿಯಲ್ಲಿ ಕನ್ನಡ ನಾಡಿನಾದ್ಯಂತ ಅನೇಕ ಮಠಗಳು ಈ ಕಾರ್ಯ ಮಾಡುತ್ತಿವೆ. 'ಯಡೆಯೂರು ಸಿದ್ಧಲಿಂಗೇಶ್ವರರ ಮಠ', 'ಸಿದ್ಧಗಂಗಾ' ವಿರಕ್ತ ಮಠ, ಗದುಗಿನ 'ವೀರಶೈವ ಪುಣ್ಯಾಶ್ರಮ', ಹೊಸಪೇಟೆಯ ಕೊಟ್ಟೂರು ಮಠ, ಶಿವಮೊಗ್ಗ ಜಿಲ್ಲೆಯ ಆನಂದಪುರದ ಮುರಘರಾಜೇಂದ್ರ ಸಂಸ್ಥಾನ ಮಠ, 'ಯಲಬುರ್ಗಾ ಸಿದ್ಧರಾಮೇಶ್ವರ' ಮಠ, ಗಡಿಭಾಗದ ನಾಗನೂರು ರುದ್ರಾಕ್ಷಿ ಮಠ, ನಿಡಸೋಸಿಯ ಸಿದ್ಧ ಸಂಸ್ಥಾನ ಮಠ ಹೀಗೆ ಅನೇಕ ವಿರಕ್ತ ಮಠಗಳು ಸಮಾಜೋಧಾರ್ಮಿಕ ಕಾರ್ಯಗಳನ್ನು ಮಾಡುತ್ತಿವೆ.

ವಿರಕ್ತ ಮಠಗಳ ತತ್ವಗಳನ್ನು ಪಂಚಪೀಠದ ಪರಂಪರೆಯ ಮಠಗಳು ತಮ್ಮಲ್ಲಿ ಅಳವಡಿಸಿಕೊಂಡು ಅನುಷ್ಠಾನಕ್ಕೆ ತಂದವು. ಕಾಲಮಾನಕ್ಕನುಸಾರವಾಗಿ ಬದಲಾವಣೆಗಳನ್ನು ಮೈಗೂಡಿಸಿಕೊಳ್ಳುತ್ತಾ ವೀರಶೈವಕ್ಕೆ ಚ್ಯುತಿಬರದಂತೆ ಮುಂದುವರೆದಿದ್ದಾರೆ. ಈ ನೆಲೆಯಲ್ಲಿಯೇ ಹುಕ್ಕೇರಿ "ಶ್ರೀ ಗುರು ಶಾಂತೇಶ್ವರ ಹಿರೇಮಠ"ವು ಮುಂದುವರೆದು, ಸರ್ವಧರ್ಮ ಸಮಾನತೆಯನ್ನು ಪಾಲಿಸುತ್ತ ಕರ್ನಾಟಕದ ಗಡಿನಾಡಿನಲ್ಲಿ ಕನ್ನಡ ಸಂಸ್ಕೃತಿಯನ್ನು ಉಳಿಸಿ ಬೆಳೆಸಿದಂತಹ ಮಹತ್ತರ ಕಾರ್ಯಗಳನ್ನು ಮಾಡುತ್ತಿರವುದು ಶ್ಲಾಘನೀಯವಾದುದು. ಇಂಥ ಹುಕ್ಕೇರಿ ಹಿರೇಮಠವನ್ನು ಮುಂದಿನ ಅಧ್ಯಾಯದಲ್ಲಿ ಸ್ಥೂಲವಾಗಿ ಗಮನಿಸಲಾಗಿದೆ.

ಅಡಿ ಟಿಪ್ಪಣಿ ::

೧. ರಾಮಕೃಷ್ಣ ಮರಾಠೆ : ದಾಸೋಹ : ಪುಟ : ೧೨೬

೨. ಕೆ. ರವೀಂದ್ರನಾಥ : ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ : ಪುಟ : ೩೭

೩. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ

*****

ಅಧ್ಯಾಯ – ೩

ಹುಕ್ಕೇರಿ ಹಿರೇಮಠ

ಅಧ್ಯಾಯ ៖ ಮೂರು

ಹುಕ್ಕೇರಿ ಹಿರೇಮಠ

೧೨ನೇ ಶತಮಾನದ ಶರಣರ ಕ್ರಾಂತಿ ಸಮಾಜದ ಮೇಲೆ ವಿವಿಧ ಪರಿಣಾಮಗಳನ್ನು ಬೀರಿತು. ಆಧ್ಯಾತ್ಮ ಸಾಧನೆ, ಭಕ್ತಿ ವಲಯದಲ್ಲಿ ಹೊಸನೀತಿಯನ್ನು ತಂದಿತು. ಶರಣರಿಂದುಂಟಾದ ವಿರಕ್ತ ಮಠದ ಪರಂಪರೆ, ಪಂಚಾಚಾರ್ಯರ ಪರಂಪರೆಯ ಮೇಲೂ ಪ್ರಭಾವ ಬೀರಿತು. ಎರಡೂ ಪರಂಪರೆಯ ಗುರಿಯೊಂದೆಯಾದಾಗ ಆಚರಣೆಗಳೆಲ್ಲ ಒಂದೇ ಎಂದು ಭಾವಿಸಿದರು. ಇದರಿಂದ ವೀರಶೈವದ ಹರವು ವಿಶಾಲವಾಯಿತು. ವಿರಕ್ತ ಮಠಗಳ ಬೆಳವಣಿಗೆಯೊಂದಿಗೆ ಪಂಚಾಚಾರ್ಯ ಮಠಗಳು ಬೆಳೆದವು. ಭಕ್ತಿಜ್ಞಾನ, ತ್ಯಾಗ-ವೈರಾಗ್ಯ, ನಿಸ್ವಾರ್ಥ-ನಿರಾಹಂಕಾರ, ಸಾಮಾಜಿಕ ಸೇವಾ ಕಳಕಳಿ, ಕಾಯಕ, ದಾಸೋಹದಂತಹ ಕ್ರಿಯಾಜ್ಞಾನ ಸಾಮರಸ್ಯವನ್ನು ತಮ್ಮ ಮಠದ ಘನ ಮೌಲ್ಯಗಳನ್ನಾಗಿ ಹೊಂದಿ ಮಠಗಳು ಬೆಳೆಯತೊಡಗಿದವು.

ಪಂಚಾಚಾರ್ಯ ಪರಂಪರೆಯ ಪೀಠಗಳಲ್ಲಿ ಒಂದಾದ ಶ್ರೀಮದ್ ರಂಭಾಪುರಿ ವೀರ ಸಿಂಹಸನ ಪೀಠದ ಶಾಖಾ ಮಠವಾದ ಹುಕ್ಕೇರಿಯ "ಶ್ರೀ ಗುರು ಶಾಂತೇಶ್ವರ ಸಂಸ್ಥಾನ ಹಿರೇಮಠ" ಒಂದು. ಈ ಮಠದ ಸಾಂಸ್ಕೃತಿಕ, ಸಾಮಾಜಿಕ ಕೊಡುಗೆಗಳ ಅಧ್ಯಯನದಲ್ಲಿ

ಹುಕ್ಕೇರಿಯ ಭೌಗೋಳಿಕ ಮತ್ತು ಐತಿಹಾಸಿಕ ಪರಿಚಯವನ್ನು ಮಾಡಿಕೊಡುವುದು ಸೂಕ್ತವೆನಿಸುತ್ತದೆ.

೩.೧ ಭೌಗೋಳಿಕ ಹಿನ್ನೆಲೆ :

ಕರ್ನಾಟಕದ ಗಡಿಭಾಗಗಳಲ್ಲಿ ಉತ್ತರದ ಬೆಳಗಾವಿ ಜಿಲ್ಲೆಯು ಒಂದು ಪ್ರಮುಖ ಜಿಲ್ಲೆ. ಬೆಳಗಾವಿ ಜಿಲ್ಲೆಯ ಹತ್ತು ತಾಲೂಕುಗಳಲ್ಲಿ ಖಾನಾಪೂರ, ಹುಕ್ಕೇರಿ, ಚಿಕ್ಕೋಡಿ, ರಾಯಬಾಗ ಮತ್ತು ಅಥಣಿ ತಾಲೂಕುಗಳು ಮಹಾರಾಷ್ಟ್ರ ಗಡಿಭಾಗದಲ್ಲಿವೆ. ಈ ಭಾಗದ ಜನತೆ ಸದಾಕಾಲವೂ ದ್ವಂದ್ವ ಮನಸ್ಸಿನಿಂದ ಕೂಡಿದವರಾಗಿ ಪರಭಾಷೆ, ಪರಸಂಸ್ಕೃತಿಯ ಆಕರ್ಷಣೆ ಮತ್ತು ಆಮಿಶಕ್ಕೆ ಒಳಗಾಗಿ, ತಾಯ್ನಾಡಿನಿಂದ ಯಾವುದೇ ಸಹಾಯ ಸಹಕಾರಗಳು ದೊರೆಯದೇ ಗಡಿನಾಡು ಮಹಾರಾಷ್ಟ್ರದ ನೆರಳನ್ನಾಶ್ರಯಿಸಿ ತಾಯ್ನೆಲ ಮತ್ತು ತಾಯ್ನುಡಿಯ ಅರಿವಿಲ್ಲದೆ ನಿರ್ವೀರ್ಯರಾಗಿ ಬಾಳುತ್ತಿದ್ದಾರೆ.

ಪ್ರಸ್ತುತ 'ಹುಕ್ಕೇರಿ ಬೆಳಗಾವಿ ಜಿಲ್ಲೆಯ ಮುಖ್ಯ ತಾಲೂಕಾ ಪ್ರದೇಶ. ಬೆಳಗಾವಿ ಜಿಲ್ಲೆಯಿಂದ ಪಶ್ಚಿಮಕ್ಕೆ ವ್ಯಾಪಿಸಿಕೊಂಡಿದೆ. ಗಡಿಭಾಗದ ಆಯಕಟ್ಟಿನ ಸ್ಥಳವಾಗಿದ್ದು, ತನ್ನ ಪೂರ್ವಕ್ಕೆ ಗೋಕಾಕನ್ನು, ಪಶ್ಚಿಮಕ್ಕೆ ಮಹಾರಾಷ್ಟ್ರ ಪ್ರದೇಶವನ್ನು, ಉತ್ತರಕ್ಕೆ ಚಿಕ್ಕೋಡಿ ತಾಲೂಕು ಹಾಗೂ ದಕ್ಷಿಣಕ್ಕೆ ಬೆಳಗಾವಿ ತಾಲೂಕು ಹಬ್ಬಿಕೊಂಡಿದೆಯಲ್ಲದೆ, "ಹುಕ್ಕೇರಿ ಸಮುದ್ರ ಮಟ್ಟದಿಂದ ೯೯೦ ಮೀಟರ್ ಎತ್ತರದಲ್ಲಿದ್ದು, ಹುಕ್ಕೇರಿಯ ಪೂರ್ವ ಭಾಗ ಇಳಿಜಾರಾಗಿದ್ದು ಸಮುದ್ರ ಮಟ್ಟದಿಂದ ೭೮೦ ಕಿ.ಮೀ ಎತ್ತರದಲ್ಲಿದೆ"[೧]

೩.೨ ಐತಿಹಾಸಿಕ ಹಿನ್ನೆಲೆ :

ಕವಿರಾಜ ಮಾರ್ಗಕಾರನು ಕರ್ನಾಟಕವನ್ನು ಕಾವೇರಿಯಿಂದ ಗೋದಾವರಿವರೆಗೆ ಗುರುತಿಸಿದ್ದಾನೆ. ಅವನ ಹೇಳಿಕೆಗೆ ತಕ್ಕಂತೆ ಉಲ್ಲೇಖಗಳು ದೊರೆತಿವೆ. ಮಹಾರಾಷ್ಟ್ರದಲ್ಲಿ ಸ್ಥಳನಾಮಗಳು, ಭಾಷೆಯಲ್ಲಿಯ ಕನ್ನಡ ಪದಗಳು ಸಾಕ್ಷಿಯಾಗಿವೆ. ಒಂದು ರೀತಿಯಲ್ಲಿ

ಮಹಾರಾಷ್ಟ್ರವು ಕರ್ನಾಟಕವೇ ಆಗಿತ್ತು ಎಂದು ಖ್ಯಾತ ಸಂಶೋಧಕರಾದ ಶಂಭಾ ಜೋಷಿ ಹಾಗೂ ಎಂ.ಎಂ. ಕಲಬುರ್ಗಿಯವರು ಪ್ರತಿಪಾದಿಸುತ್ತಾರೆ. "ವಿಜಯ ನಗರ ಸಾಮ್ರಾಜ್ಯದ ಅವನತಿಯ ನಂತರ ಕನ್ನಡದ ಭೂಪ್ರದೇಶಗಳು, ಹಲವು ಆಡಳಿತ ಘಟನೆಗಳಲ್ಲಿ ಹಂಚಿ ಹೋದವು. ಇಲ್ಲಿ ಆಳ್ವಿಕೆ ಮಾಡುತ್ತಿದ್ದ ಪ್ರಭುಗಳು ಕನ್ನಡಕ್ಕೆ ಪೋಷಕರಾಗಿ ನಿಂತರು. ಆದರೆ ಆದಿಲ್‌ಶಾಹಿ ಮತ್ತು ಬಹುಮನಿ ಸುಲ್ತಾನರ ಆಳ್ವಿಕೆಯ ಪ್ರಭಾವದಿಂದಾಗಿ ಇಂದಿನ ಉತ್ತರ ಕರ್ನಾಟಕ ಹಾಗೂ ಕೊಲ್ಹಾಪೂರ, ಸಾಂಗ್ಲಿ ಭಾಗಗಳಲ್ಲಿ ಮರಾಠಿಗರು ಪ್ರಭಲರಾದರು. ಇಲ್ಲಿ ಉರ್ದು ಮತ್ತು ಮರಾಠಿ ಭಾಷೆಗಳು ಹೆಚ್ಚು ಪ್ರಚಲಿತಗೊಂಡು"[೨] ಇವುಗಳ ಮಧ್ಯೆ ಉಸಿರಾಡಬೇಕಾದ ಸ್ಥಿತಿ ಕನ್ನಡಿಗರಿಗೆ ಒದಗಿತು. ಮರಾಠಾ ಪೆಶ್ವೇಯರ ಮತ್ತು ಮಹಮ್ಮದೀಯರ ಆಳ್ವಿಕೆಯಿಂದಾಗ ಕನ್ನಡಿಗರ ಭಾಷೆ ಮತ್ತು ಸಂಸ್ಕೃತಿಗೆ ಧಕ್ಕೆಯೊದಗಿ ಮರಾಠಿ ಮತ್ತು ಉರ್ದು ಆಡಳಿತ ಭಾಷೆಯಲ್ಲಿ, ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿಕೊಳ್ಳಲು ಹೋರಾಡಬೇಕಾಯಿತು. ೧೮ನೇ ಶತಮಾನದಲ್ಲಿ ಆಳ್ವಿಕೆಯಲ್ಲಿದ್ದ ಬ್ರಿಟಿಷರು ಕೂಡಾ ಮರಾಠಿಯನ್ನೇ ಆಡಳಿತ ಭಾಷೆಯನ್ನಾಗಿ ಬಳಸುತ್ತಿದ್ದರು. ಕನ್ನಡಿಗರು ಮತ್ತು ಕನ್ನಡ ಭಾಷೆಯನ್ನು ಹೀನಾಯವಾಗಿ ಕಾಣುತ್ತಿದ್ದರು. ಈ ಸಂದರ್ಭದಲ್ಲಿ "ವಸಾಹತು" ಕಾಲದ ಕರ್ನಾಟಕದ ಕಲ್ಪನೆಗೆ ಪ್ರೇರಕರಾಗಿ ಮುಂಬೈ ಕನ್ನಡಿಗರು ನಿಂತರು"[೩] ಈ ಭಾಗದಲ್ಲಿ ೧೯೫೬ರ ಕರ್ನಾಟಕ ಏಕೀಕರಣದವರೆಗೂ 'ಮರಾಠಿ'ಯೇ ಪ್ರಬಲವಾಗಿತ್ತು. "೧೯ನೇ ಶತಮಾನದ ಮರಾಠಿಗರ ಪುನರುತ್ತಾನ ಹಾಗೂ ರಾಷ್ಟ್ರೀಯ ಚಳವಳಿಯ ಪ್ರಭಾವದಿಂದ ಈ ಭಾಗದಲ್ಲಿ ತಾತ್ಪೂರ್ತಿಕವಾಗಿ ದಕ್ಷಿಣ ಮಹಾರಷ್ಟ್ರವೇ ಆಗಿತ್ತು"[೪] ಮುಂದೆ ಬ್ರಿಟೀಷರು ನಮ್ಮ ದೇಶವನ್ನು ಆಕ್ರಮಿಸಿಕೊಳ್ಳುತ್ತ, ತಮ್ಮ ಆಡಳಿತದ ಅನುಕೂಲಕ್ಕಾಗಿ ಜನಾಂಗ, ಭಾಷೆ, ಸಂಸ್ಕೃತಿಯೊಂದನ್ನೂ ಲಕ್ಷಿಸದೆ ಪ್ರದೇಶಗಳನ್ನು ವಿಭಾಗಿಸಿದರು. ಆ ಸಂದರ್ಭದಲ್ಲಿ ಕರ್ನಾಟಕ ಛಿದ್ರ-ಛಿದ್ರವಾಯಿತು. ಈ ಪರಿಣಾಮ ಕನ್ನಡ ಭಾಷೆ ಸಂಸ್ಕೃತಿಯ ಮೇಲೆ ಆಗಾಧವಾಗಿ ಪರಿಣಾಮವಾಯಿತು. ಆದರೂ

ಜನತೆ ಆಯಾ ಕಾಲಕ್ಕೆ ತಮ್ಮನ್ನು ಒಗ್ಗೂಡಿಸಿಕೊಂಡು ತಮ್ಮ ಮನ–ಮನೆಗಳಲ್ಲಿ, ಮಠಮಾನ್ಯಗಳಲ್ಲಿ ಕನ್ನಡ ಭಾಷೆ, ಸಂಸ್ಕೃತಿಯನ್ನು ಉಳಿಸಿಕೊಂಡು ಈ ಅವಧಿಯಲ್ಲಿ ಅವುಗಳನ್ನು ಪುನರುತ್ಥಾನಗೊಳಿಸುತ್ತಿರುವುದು ಶ್ಲಾಘನೀಯ. ಆದರೆ ಸರ್ಕಾರವಾಗಲಿ, ರಾಜಕೀಯ ಧುರಿಣರಾಗಲಿ ಗಡಿನಾಡ ಕನ್ನಡಿಗರನ್ನು, ಭಾಷೆಯನ್ನೂ, ಸಂಸ್ಕೃತಿಯನ್ನೂ ಕಡೆಗಣಿಸಿರುವುದರಿಂದ ಅತ್ತ ಮರಾಠಿಗರೂ ಅಲ್ಲದೆ, ಇತ್ತ ಕನ್ನಡಿಗರೂ ಅಲ್ಲದಂತಹ ತ್ರಿಶಂಕು ಸ್ಥಿತಿಯಲ್ಲಿದ್ದಾಗಲೂ ಗಡಿ ನಾಡಿನಲ್ಲಿರುವ ಕೆಲವು ಪಂಚಾಚಾರ್ಯ ಮಠಗಳು ವಿರಕ್ತ ಮಠಗಳು ಕನ್ನಡ ಭಾಷೆ, ಸಂಸ್ಕೃತಿ ಸಾಹಿತ್ಯವನ್ನು ಉಳಿಸುತ್ತಿರುವುದು ಶ್ಲಾಘನೀಯ.

'ಹುಕ್ಕೇರಿ'ಯನ್ನು ಕರ್ನಾಟಕದ ಅರಸು ಮನೆತನಗಳಾದ ಕದಂಬರು, ರಾಷ್ಟ್ರಕೂಟರು, ಚಾಲುಕ್ಯರು ಆಳಿರುವುದು ಇತಿಹಾಸದಿಂದ ತಿಳಿದು ಬರುತ್ತದೆ. ಪೆಶ್ವೇಯರ ನಂತರ ಬಹುಕಾಲದವರೆಗೆ ಮಹಮ್ಮದೀಯ ಆಳ್ವಿಕೆಗೆ ಒಳಪಟ್ಟಿದ್ದರಿಂದ ಹುಕ್ಕೇರಿಯಲ್ಲಿ ಮಹಮ್ಮದೀಯ ಸ್ಮಾರಕಗಳ ಸಂಖ್ಯೆ ಹೆಚ್ಚಾಗಿದೆ. ಶ್ರೇಷ್ಠ ಗುಮ್ಮಟಗಳಿವೆ. ಕಾಳಭೈರವ ಮಂದಿರವಿದೆ. ಕೋಟೆಯಲ್ಲಿ ವಿಠ್ಠಲ ಮಂದಿರವಿದೆ. ಮೂರು ಜೈನ ಬಸದಿಗಳಿವೆ. ಇತ್ತಿಚಿಗೆ ಹಿಂದೂ ಧರ್ಮದ ಸಂಪ್ರದಾಯಕ್ಕೆ ಸಂಬಂಧಿಸಿದಂತೆ ಗಣಪತಿ ದೇವಾಲಯ ಮುಂತಾದ ಅನೇಕ ದೇವಾಲಯಗಳು ಸ್ಥಾಪಿತವಾಗಿವೆ.

ಐತಿಹಾಸಿಕವಾಗಿ ಏನೇ ಘಟನೆಗಳು ಸಂಭವಿಸಿದ್ದರೂ ಧಾರ್ಮಿಕವಾಗಿ ಮಾತ್ರ ಸರ್ವಧರ್ಮ ಸಮನ್ವಯತೆಯನ್ನು ಉಳಿಸಿಕೊಂಡು ಬಂದ ಹುಕ್ಕೇರಿಯಲ್ಲಿ ೯ನೇ ಶತಮಾನದಲ್ಲಿಯೇ ಪಂಚಾಚಾರ್ಯ ರೇವಣಸಿದ್ಧರಿಂದ ಅನುಗ್ರಹಿತವಾಗಿ ಮಠ ಸ್ಥಾಪನೆಯಾಗಿ ಇಂದಿಗೂ ಶ್ರೀ ಗುರುಶಾಂತೇಶ್ವರ ಮಠವು ಉತ್ತರೋತ್ತರ ಬೆಳವಣಿಗೆಯನ್ನು ಹೊಂದುತ್ತ ಸಾಮಾಜಿಕ ಸಾಂಸ್ಕೃತಿಕ ಆಧ್ಯಾತ್ಮಿಕ ಸೇವಯನ್ನು ನಿರಂತರ ಮಾಡುತ್ತ ಬಂದಿರುವುದೊಂದು ಆಶ್ಚರ್ಯವೇ!

೩.೩ ಹುಕ್ಕೇರಿ: ಸ್ಥಳ–ನಾಮ :

ಹುಕ್ಕೇರಿ ಪೇಶ್ವೇಯವರ ನಂತರ ಬಹುಕಾಲದವರೆಗೆ ಮುಹಮ್ಮದೀಯ ಸರದಾರರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ಈ ಹಿಂದೆ ನೋಡಿದ್ದೇವೆ. ಅವರ “ಆಳ್ವಿಕೆಯ ಸಂದರ್ಭದಲ್ಲಿ ಹುಕ್ಕೇರಿಯಲ್ಲಿ ೩೬ ಕಾರಂಜಿಗಳು”[೫] ಇದ್ದುದ್ದನ್ನು ಪ್ರೊ.ಆರ್.ಆರ್. ಮುತಾಲಿಕವರು (ಹುಕ್ಕೇರಿ ತಾಲೂಕಾ ದರ್ಶನ – ಪುಟ – ೨೧) ಗುರುತಿಸಿದ್ದಾರೆ. ಹುಕ್ಕೇರಿ ಸಮೀಪದಲ್ಲಿರುವ ಎಲಿಮುನ್ನೋಳಿ ಗ್ರಾಮದ ಮರಡಿ (ಮಡ್ಡಿ)ಯ ಹತ್ತಿರ ನೀರು ಇಂಗುವಂತೆ ಮಾಡಿ ಹಂಚಿನ ಕೊಳವೆಗಳ ಮುಖಾಂತರ ಕಾರಂಜಿಗಳಿಗೆ ನೀರು ತರುವ ವ್ಯವಸ್ಥೆ ಮಾಡಲಾಗಿತ್ತು. ಅವುಗಳೆಲ್ಲ ತುಂಬಿ ಚಿಮ್ಮುತ್ತ ಹುಕ್ಕೇರಿಗೊಂದು ಸೊಬಗು ಮಾಡಿತ್ತು. ಕಾರಂಜಿಯಿಂದ ಸಾಕಷ್ಟು ಪ್ರಮಾಣದಲ್ಲಿ ಹರಿದು ಬರುವ ನೀರಿನಿಂದ ಹುಕ್ಕೇರಿ ಸುತ್ತ–ಮುತ್ತೆಲ್ಲ ಹೂ–ಬನಗಳು ಮೈದುಂಬಿ ಬೆಳೆಯುತ್ತಿದ್ದವು. ಕಣ್ಣು ಹಾಯಿಸಿದ ಕಡೆಗೆಲ್ಲ ಹೂ–ಬನ–ಹೂ–ರಾಶಿಗಳೇ ಇದ್ದು ನೋಡುವ ಕಣ್ಣುಗಳನ್ನು ತಣಿಸುತ್ತಿದ್ದವು. ಹೀಗೆ ಹೂಬೆಳೆಯುವ ಊರೇ ಹೂವಿನಕೇರಿ ಎಂದು ರೂಢಿಯಲ್ಲಿ ಬಂದು, ನಂತರದಲ್ಲಿ ಹೂವಿನಕೇರಿ, ಹೂಕೇರಿ ಆಗಿ ಆಡುಭಾಷೆಯಲ್ಲಿ ‘ಹುಕ್ಕೇರಿ’ ಆಗಿದೆ ಎಂಬುದು ವಿದ್ವಾಂಸರ ವಿಚಾರವಾಗಿದೆ. ಹುಕ್ಕೇರಿಯಲ್ಲಿ ಕಾರಂಜಿಗಳಿಗೂ ‘ಹುಕ್ಕೇರಿ’ ಸ್ಥಳ ನಾಮಕ್ಕೂ ಸಂಬಂಧವಿದೆ. ಈಗ ಕಾಲಮಾದ ವೈಪರೀತ್ಯ ಮತ್ತು ಜನರ ನಿಷ್ಕಾಳಜಿಯಿಂದ ಕಾರಂಜಿಗಳೆಲ್ಲ ಬತ್ತಿ ಹೋಗಿವೆ. ಕೇವಲ ಅವುಗಳ ಕುರುಹು ಮಾತ್ರ ಹಿಂದಿನ ಇತಿಹಾಸವನ್ನು ತಿಳಿಸುತ್ತದೆ. ವಿಶೇಷವೆಂದರೆ ಕಾರಂಜಿಗಳು ಮೊಹಮ್ಮದೀಯರ ಆಡಳಿತಾವಧಿಯಲ್ಲಿ ನಿರ್ಮಿಸಿದವುಗಳಾಗಿದ್ದವು. ಈಗ ಅವುಗಳು ಅಳಿದು ‘ಹುಕ್ಕೇರಿ’ ಎಂಬ ಹೆಸರು ಮಾತ್ರ ಉಳಿದಿದೆ.

೩.೪ ಹುಕ್ಕೇರಿ ಹಿರೇಮಠ :

ಹೂವಿನಕೇರಿ ಎಂಬ ಹುಕ್ಕೇರಿಯಲ್ಲಿ ಅರಳಿ ಇಂದಿನವರೆಗೆ ತನ್ನ ಅಸ್ತಿತ್ವನ್ನು ಗಟ್ಟಿಯಾಗಿ ಉಳಿಸಿಕೊಂಡು ಬಂದಿರುವ ಶ್ರೀ ಗುರು ಶಾಂತೇಶ್ವರ ಹಿರೇಮಠದ ಅಸ್ತಿತ್ವದ ವಿಶ್ಲೇಷಣೆ ಬಹುಮುಖ್ಯವಾದುದು.

ವೀರಶೈವ ಸಿದ್ಧಾಂತದ ಪರಮೋದ್ದೇಶ, ಅಷ್ಟಾವರಣ ಷಟಸ್ಥಲ ಸಿದ್ಧಾಂತ, ಲಿಂಗಾಂಗ ಸಾಮರಸ್ಯ, ಶಿವಯೋಗ, ದಾಸೋಹ ಮೊದಲಾದ ಮೌಲ್ಯಗಳನ್ನೇ ಹೊಂದಿದ ಪಂಚಾಚಾರ್ಯರ ಪರಂಪರೆಯನ್ನು ಹೊಂದಿದ ಹಿರೇಮಠದ ಅಸ್ತಿತ್ವವು ವಿಶಿಷ್ಟವಾದುದು. "ಮಠಗಳ ಮಠಾಧೀಪತಿಗಳ ಐತಿಹಾಸಿಕ ದಾಖಲೆ ಎಂದರೆ ಅದೊಂದು ಅದ್ಭುತ ಪುಟಗಳ ದಿವ್ಯ ಸಂಪುಟ. ಲೋಕವನ್ನೇ ಬೆಳಗಿದವರ ಬೆಳಗುತ್ತಿರುವವರ, ಬೆಳಗುವವರ, ಬೆಳಗಿನಲೊಂದಾಗಿ ಆನಂದಿಸುವ ಮಹಾದಾನಂದ ಮಹತ್ತರ ಜೀವನ ದರ್ಶನ ಅದರ ಜೀವಿತಾವಧಿಗೆ ಮಾತ್ರ ಸೀಮಿತವಾದುದಲ್ಲ ಅದು ದೇಶಕಾಲಾತೀತವಾಗಿ ಚಲಿಸುವಂತಹುದು. ಅವರ ದಿವ್ಯ ಜೀವನ ಸಂಸ್ಕೃತಿಯ ಗಂಗೋತ್ರಿ, ಸಾವಿರ ವರುಷಗಳ ಭವ್ಯ ಪರಂಪರೆಯ ಆ ಮಹಾಮಠ ತನ್ನ ಸೇವಾ ಕ್ಷೇತ್ರಗಳ ವ್ಯಾಪ್ತಿ ವಿಸ್ತರಣೆಯಿಂದ ಮಾನವ ಜನಾಂಗಕ್ಕೆ ಸ್ಮರಣೀಯ ಕೊಡುಗೆ ನೀಡುತ್ತ ಬಂದಿದ್ದರೂ ಆ ಸಮಗ್ರ ದಾಖಲೆಗಳು ನಮಗಿಂದು ಉಪಲಬ್ಧವಾಗುತ್ತಿಲ್ಲ. ಇಂದು ಆ ಮಠ ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಈ ಮೊದಲಾದ ಘನಮೌಲ್ಯಗಳ ಕೇಂದ್ರ ತಾಣವಾಗಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಬಹು ಮಹತ್ತರ ಕೊಡುಗೆ ನೀಡುತ್ತಿದೆ"

ಗಡಿನಾಡ ಭಾಗದಲ್ಲಿ ಇಂಥ ಮಹತ್ತರ ಸೇವೆಯನ್ನು ಸಲ್ಲಿಸುತ್ತಿರುವ ಹುಕ್ಕೇರಿಯ ಹಿರೇಮಠವು ಶ್ರೀಮದ್ ರಂಭಾಪುರಿ ವೀರಸಿಂಹಾಸನ ಪೀಠದ ಶಾಖಾಮಠವಾಗಿ ಸಾವಿರಕ್ಕೂ ಅಧಿಕ ವರ್ಷಗಳ ಐತಿಹಾಸಿಕ ಪರಂಪರೆಯಲ್ಲಿ ಅನೇಕ ವಿಷಯಗಳು ಕಾಲಗರ್ಭದಲ್ಲಿ ಹೂತುಹೋಗಿವೆ.

ಈಗ ಪ್ರಸ್ತುತವಿರುವ ಸಂಗತಿಯೆಂದರೆ ಹುಕ್ಕೇರಿಯ ಹಿರೇಮಠವು ೯ನೇ ಶತಮಾನದಲ್ಲಿ ಜನ್ಮ ತಳೆಯಿತೆಂಬುದು.

ವೀರಶೈವ ಸಂಸ್ಥಾಪಕರಾದ ರೇಣುಕಾಚಾರ್ಯರು ಕರ್ನಾಟಕದ ಗಡಿಭಾಗಗಳಲ್ಲಿ ಸಂಚರಿಸುತಿದ್ದಾಗ ಅವರ ಅನುಯಾಯಿಗಳಾದ ಗುರು ಶಾಂತೇಶ್ವರರ ಧಾರ್ಮಿಕ, ಆಧ್ಯಾತ್ಮಿಕ, ಸೌಜನ್ಯತೆಗಳನ್ನೂ, ಸೇವಾ ಭಾವನೆಯನ್ನು ಗುರುತಿಸಿದ ರೇಣುಕಾಚಾರ್ಯರು ಗುರು ಶಾಂತೇಶ್ವರರಿಗೆ ಚರಜಂಗಮ ತತ್ವವನ್ನು ಪಾಲಿಸುತ್ತ ಜನರಲ್ಲಿ ಧರ್ಮ ಜಾಗೃತಿಯನ್ನು ಮಾಡುತ್ತ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುವಂತೆ ಅನುಗ್ರಹಿಸಿದರು. ಈ ಭಾಗದಲ್ಲಿ ಚರಜಂಗಮ ಮುದ್ರೆಗಳು ವೀರಶೈವ ಜ್ಯೋತಿಯಾಗಿ ಬೆಳಗುತ್ತಾ ಸೂರ್ಯ-ಚಂದ್ರರಿರುವವರೆಗೆ ನೆಲೆಸಲೆಂದು ಹಾರೈಸಿದರು. ಅವರ ಆಶೀರ್ವಾದದಿಂದ ಅನುಗ್ರಹಿತರಾದ ಜ್ಯೋತಿಯಿಂದೊಂದು ಜ್ಯೋತಿ ಉದ್ಭವಿಸಿದಂತೆ "ಶ್ರೀ ಗುರುಶಾಂತೇಶ್ವರರು ಈ ಭಾಗದಲ್ಲಿ (ಹುಕ್ಕೇರಿ) ಸಂಚರಿಸುತ್ತಾ, ಅಲ್ಲಲ್ಲಿ ವಾಸಿಸುತ್ತಾ ವೀರಶೈವ ಮಹತಿ, ತ್ರಿವಿಧದಾಸೋಹ, ಮಾನವೀಯ ಅಂತಃಕರಣ, ದಯಧರ್ಮಗಳ ಮಹತಿ, ಅಷ್ಟಾವರಣ, ಪಂಚಾಚಾರ ಷಟಸ್ಥಲಗಳ ತಾತ್ವಿಕ ವಿವೇಚನೆ ಮೊದಲಾದವುಗಳನ್ನು ಬಿಂಬಿಸುತ್ತ ನೈತಿಕ ಜಾಗೃತಿಗೈಯುತ್ತ ಲೋಕ ಕಲ್ಯಾಣಾರ್ಥ ಸಂಚರಿಸತೊಡಗಿದರು. ಅವರ ಅಗಾಧ ಪಾಂಡಿತ್ಯ, ನೈಷ್ಠಿಕ ಬ್ರಹ್ಮಚರ್ಯ, ಬೇಕುಬೇಡೆಂಬೆರಡು ಭವಬೀಜಗಳ ಹರಿದು ಮಾನವ ಜನಾಂಗದ ಉದ್ಧಾರಕ್ಕಾಗಿ ಸಂಚರಿಸುವ ಪರಿ ಇವೆಲ್ಲವುಗಳನ್ನು ಭಕ್ತವೃಂದ ಗುರುತಿಸಿತು. ಅವರ ಮನದಲ್ಲಿ ಸಾಕ್ಷಾತ್ ಪರಶಿವನೆ ಲೋಕಹಿತಾರ್ಥ ಜಂಗಮರೂಪಧರಿಸಿ ಸಂಚರಿಸುತ್ತಿರುವನೆಂಬ ಭಾವ ಗಟ್ಟಿಗೊಂಡಿತು"[೬] ಶ್ರೀ ಗುರುಶಾಂತೇಶ್ವರರು ಸಾಕ್ಷಾತ್ ವ್ಯಕ್ತಿರೂಪದ ಶಕ್ತಿಯೆಂದರು. ಭಕ್ತಿ-ಭಾವದಿಂದ ಹಣಿಮಣಿದು ಪೂಜಿಸತೊಡಗಿದರು. ಶ್ರೀ ಗುರು ಶಾಂತೇಶ್ವರರಿಗೆ ಇನ್ನು ತಾವು ಸಂಚರಿಸಲಾರೆವು ಎಂಬುದು ಅರಿವಿಗೆ ಬಂದಾಗ ತಮಗೆ ಮುಪ್ಪೊದಗಿದೆಯೆಂದು ಅರಿತು

ಹುಕ್ಕೇರಿಯಲ್ಲಿ ಕುಟೀರವೊಂದನ್ನು ಕಟ್ಟಿಕೊಂಡು ನೆಲೆನಿಂತರು. ಜನಸಾಮಾನ್ಯರಲ್ಲಿಯ ಮ್ಲಾನತೆಯನ್ನು ಕಳೆಯುತ್ತ ಶಿವಧ್ಯಾನ ಸಂಪ್ರೀತರಾದರು. ಜಪ–ತಪ, ಲಿಂಗ–ಪೂಜೆ, ತ್ರಿವಿಧ ದಾಸೋಹ ನಡೆಸುತ್ತ, ಭಕ್ತ ವೃಂದವು ತಣಿಯುವಂತೆ ಪುರಾಣ–ಪ್ರವಚನಗಳನ್ನು ಹೇಳುತ್ತಾ ಶ್ರೀ ಗುರುಶಾಂತೇಶ್ವರರು ಲಿಂಗದಲ್ಲಿ ಬಯಲಾದರು. 'ತಾಯನ್ನು ಅರಸಿಕೊಂಡು ಹೋಗುವ ಕರುವಿನಂತೆ ಭಕ್ತ ಸಮೂಹ ಕಂಗಾಲಾಯಿತು. ಶ್ರೀ ಗುರು ಶಾಂತೇಶ್ವರರು ನಿಂತ ನೆಲೆಯೇ ಪಾವನ ಕ್ಷೇತ್ರವಾಯಿತು. ಭಕ್ತರು ತಮ್ಮ ಆರಾಧ್ಯದೈವ ಶ್ರೀ ಗುರು ಶಾಂತೇಶ್ವರರು ನಿರ್ಮಿಸಿದ ಕುಟೀರವನ್ನೇ "ಶ್ರೀ ಗುರು ಶಾಂತೇಶ್ವರರ ಸಂಸ್ಥಾನ ಹಿರೇಮಠ"ವೆಂದು ಕರೆದು ಅದರ ಕಟ್ಟಡಕ್ಕೆ ಕಾರ್ಯೋನ್ಮುಖರಾದರು. ಹೀಗೆ ಕರ್ನಾಟಕದ ಗಡಿಭಾಗವಾದ ಹುಕ್ಕೇರಿಯಲ್ಲಿ ಹಿರೇಮಠವು ಸ್ಥಾಪಿಸಲ್ಪಟ್ಟಿತ್ತು.

೩.೫ ಹಿರೇಮಠ'ದ ಕಟ್ಟಡದ ಅಸ್ತಿತ್ವ :

ಹುಕ್ಕೇರಿಯಲ್ಲಿ ಶ್ರೀ ಗುರುಶಾಂತೇಶ್ವರರ ಕುಟೀರವೇ 'ಹಿರೇಮಠ'ವಾಗಿ ಕಟ್ಟಡವನ್ನು ಹೊಂದಲು ೯ನೇ ಶತಮಾನದಿಂದ ಕೆಳದಿ ಅರಸರ ಕಾಲದವರೆಗೆ ಮಠವು ಕುಠೀರದಲ್ಲಿಯೇ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡು ಬಂದಿರಬಹುದೆಂದು ಊಹೆಯೊಂದನ್ನು ಮಾತ್ರ ಮಾಡಲು ಸಾಧ್ಯ. ಯಾಕೆಂದರೆ ಯಾವುದೇ ದಾಖಲೆಗಳು ಉಪಲಬ್ಧವಿಲ್ಲ. ಕೆಳದಿ ಅರಸರ ಕಾಲಕ್ಕೆಂಬುದು ಮಠದ ಹೇಳವದರಿಂದ ತಿಳಿದ ಸಂಗತಿಯಾದ್ದರಿಂದ ಯಾವ ಅರಸರ ಕಾಲಕ್ಕೆ ಎಂಬ ಖಚಿತ ದಾಖಲೆಗಳಿಲ್ಲ. ಮಠದಲ್ಲಿಯ ಹಳೆಯ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಮಠದ ಕಟ್ಟಡವು ೫೧ನೇ ಪೀಠಾಧಿಪತಿಗಳಾದ ಶ್ರೀ. ಷ. ಬ್ರ. ರೇಣುಕ ಶಿವಾಚಾರ್ಯರ ಕಾಲದಲ್ಲಿ ಮಠದ ಕಟ್ಟಡವು ಪೂರ್ಣಗೊಂಡ ಕುರಿತು ದಾಖಲೆಗಳು ದೊರೆಯುತ್ತವೆ ಎಂದು ಡಾ. ಡಿ.ವ್ಹಿ. ಪುರಣಿಕರವರು ಹೇಳುತ್ತಾರೆ.

ಕೆಳದಿ ಅರಸರು ವಿಜಯ ನಗರದ ಪಾಳೆ ಪಟ್ಟುಗಳಲ್ಲಿ ಆಳ್ವಿಕೆ ನಡೆಸಿದರು. ವಿಜಯ ನಗರದ ಪತನಾನಂತರ ಸುಮಾರು ೨೫೦ರಿಂದ ೩೦೦ ವರ್ಷಗಳವರೆಗೆ ಅಂದರೆ ೧೬ನೇ ಶತಮಾನದಿಂದ ೧೮ನೇ ಶತಮಾನದ ಮಧ್ಯಭಾಗದವರೆಗೆ ಕರ್ನಾಟಕದಲ್ಲಿ ಆಡಳಿತ ನಡೆಸಿದರು. ಕರ್ನಾಟಕದ ಸಂಸ್ಕೃತಿಕ ಸಂಪತ್ತನ್ನು ವಿಶಿಷ್ಟವಾಗಿ ಉಜ್ವಲಗೊಳಿಸಿದರು. ಹಿಂದಿನ ಚಾಲುಕ್ಯ, ಹೊಯ್ಸಳ, ವಿಜಯನಗರ ವಾಸ್ತುಶಿಲ್ಪದ ಶೈಲಿಗಳಿಗೆ ವಿಶಿಷ್ಟ ಸ್ವರೂಪ ನೀಡಿದ ಕೀರ್ತಿಯೊಂದಿಗೆ ತಮ್ಮದೇ ಆದ "ಮಲೆನಾಡ ವಾಸ್ತುಶಿಲ್ಪ"ವೆಂಬ ಕಲೆಯನ್ನು ದಾಖಲಿಸಿದರು.

ಇವರ ಪಟ್ಟದೇವರುಗಳಲ್ಲಿ ಸಿದ್ಧಬಸಪ್ಪಾ ಅಥವಾ ಶಿವಬಸಪ್ಪನವರು ವೀರಶೈವ ಸಿದ್ಧಾಂತಗಳಲ್ಲಿ ಅಪಾರ ಒಲವನ್ನು ಹೊಂದಿ ವಚನ ಸಾಹಿತ್ಯದೊಂದಿಗೆ ವೇದ–ಆಗಮ ಉಪನಿಷ್ಯತ್ತು, ಸಿದ್ಧಾಂತ ಶಾಖಾಮಣಿಯಂತಹ ಧಾರ್ಮಿಕ ಗ್ರಂಥಗಳನ್ನು ಓದಿಕೊಂಡವರು. ಆಚಾರ–ವಿಚಾರ ಸಂಪನ್ನತೆಯಿಂದ ಕ್ರಿಯಾನಿಷ್ಠರಾಗಿದ್ದರು. ಆದರೆ ಕೆಳದಿ ಅರಸರ ೧೫ ರಾಜರುಗಳಲ್ಲಿ ಇವರು ಯಾವ ರಾಜರ ಆಡಳಿತದಲ್ಲಿ ಪಟ್ಟದೇವರಾಗಿ ಅರಸು ಮನೆತನಗಳ ಧಾರ್ಮಿಕ ಕಾರ್ಯಗಳಿಗೆ ಬದ್ಧರಾಗಿದ್ದರೆಂಬುದಕ್ಕೆ ಖಚಿತವಾದ ದಾಖಲೆಗಳು ದೊರೆತಿಲ್ಲ. ಆದರೆ "ಕಾಲಾಂತರದಲ್ಲಿ ಕೆಳದಿ ಅರಸನೊಂದಿಗೆ ಭಿನ್ನಾಭಿಪ್ರಾಯ ಉಂಟಾಗಲು ಇವರು ಚರಜಂಗಮ ತತ್ವಾನ್ವಯ ಸಂಚರಿಸುತ್ತಾ ೭ ಕಡೆಗಳಲ್ಲಿ ತಂಗಿದ್ದರೆಂಬುದು ತಿಳಿದು ಬರುತ್ತದೆ. ಏಳು ಕಡೆಗಳಲ್ಲಿ ಮಠಗಳನ್ನು ಸ್ಥಾಪಿಸಿದರೆಂದು ವಿಧಿತವಾಗುತ್ತದೆ"[೨] ಡಾ. ಪುರಾಣಿಕವರ ಈ ವಿವರಣೆಯಿಂದ ಬಹುಶಃ ಇವರ ನೇತೃತ್ವದಲ್ಲಿ ಹುಕ್ಕೇರಿ ಹಿರೇಮಠವು ಕಟ್ಟಲ್ಪಟ್ಟಿತೆ? ಎಂದು ಊಹಿಸಬಹುದಷ್ಟೇ. ಯಾಕೆಂದರೆ ಈಗ ಚರಜಂಗಮ ಪರಂಪರೆಯನ್ನು ಮುಂದುವರೆಸಿದ ಮಠಗಳು ಈ ಭಾಗದಲ್ಲಿ ಎರಡು ಮಾತ್ರ, ಒಂದು ಬೈಲಹೊಂಗಲ ಬಳಿ ಇರುವ ಬೈಲವಾಡ ವರ್ತಿಮಠ. ಇನ್ನೊಂದು ಹುಕ್ಕೇರಿ ತಾಲೂಕಿನ ಯಮಕನ ಮರಡಿ ಗ್ರಾಮದಲ್ಲಿರುವ ಹುಣಸಿಕೊಳ್ಳ ಇದು ಶ್ರೀ ಗುರುಶಾಂತೇಶ್ವರ ಹಿರೇಮಠಕ್ಕೆ ೪ ಕಿ.ಮೀ. ಅಂತರದಲ್ಲಿರುವುದರಿಂದ ಇವರಲ್ಲಿಯೇ

ಯಾರಾದರು ಕಟ್ಟಿರಬಹುದೇ? ಎಂದು ವಿಚಾರಿಸಿದರೆ, ಇದರ ಕುರಿತು ಯಾವ ಖಚಿತ ದಾಕಲೆಗಳೂ ದೊರೆಯುವುದಿಲ್ಲ.

೩.೬ ಹಿರೇಮಠದ ಹಿಂದಿನ ಕಟ್ಟಡದ ವಿಹಂಗಮ ನೋಟ :

ಕೆಳದಿ ಅರಸರ ಆಳ್ವಿಕೆಯ ೧೭ನೇ ಶತಮಾನದಲ್ಲಿ ಹುಕ್ಕೇರಿಯ 'ಹಿರೇಮಠ'ದ ಹಳೆಯ ಕಟ್ಟಡವು ಕಟ್ಟಲ್ಪಟ್ಟಿತೆಂಬ ಊಹೆಯಲ್ಲಿಯೇ ಹಳೇ ಕಟ್ಟಡವು ವಿಶಿಷ್ಟವಾಗಿತ್ತೆಂಬುದು ತಿಳಿದು ಬರುತ್ತದೆ. ಮಠಕ್ಕೆ ದೊಡ್ಡ ದೊಡ್ಡ ಎತ್ತರವಾದ ಸಾಗವಾನಿ ಕಟ್ಟಿಗೆಯ ಕಂಬಗಳನ್ನು ಆಧಾರವಾಗಿ ನಿಲ್ಲಿಸಿ ಜಂತಿಗೆ ಬಿದಿರುಗಳನ್ನು ಹೆಣೆದು ಮೇಲೆ ಕರಿ ಹಂಚುಗಳನ್ನು ಹೊದಿಸಲಾಗಿತ್ತು. ಒಟ್ಟು ಹನ್ನೆರಡು ಕೋಣೆಗಳನ್ನು ಹೊಂದಿದ ಬೃಹತ್ ಮಠಕ್ಕೆ ದೊಡ್ಡ ದೊಡ್ಡ ಕಲ್ಲುಗಳನ್ನು ಬಳಸಿ ಹಾಳು ಮಣ್ಣಿನಿಂದ ಕೆಸರು ಕಲಸಿ ಸುಮಾರು ೫-೬ ಪೂಟು ಅಗಲದ ಗೋಡೆಗಳನ್ನು ನಿರ್ಮಿಸಲಾಗಿತ್ತು. ಸುಮಾರು ಮೂರು ಶತಮಾನಗಳ ಹಿಂದೆ ರಚಿತವಾದ ಮಠದ ಅಸ್ತಿತ್ವ ಶಿಥೀಲಗೊಳ್ಳುತ್ತಲಿತ್ತು. ಮೇಲ್ಚಾವಣಿಗೆ ಹಾಕಿದ ಬಿದಿರು ಗಳಗಳನ್ನು ಹುಳುಗಳು ತಿಂದು ಹಾಳು ಮಾಡಿದ್ದವು. ಗೋಡೆಗೆ ಹಾಳು ಮಣ್ಣು ಬಳಸಿದ್ದರಿಂದ ಅದು ತನ್ನ ಸತ್ವವನ್ನು ಕಳೆದುಕೊಂಡು ಗೋಡೆಗಳೆಲ್ಲ ಹಾಳಾಗುತ್ತಿದ್ದವು. ಮಠವೆಲ್ಲ ಸಂಪೂರ್ಣ ಶಿಥೀಲಗೊಂಡಿತ್ತು. ಪ್ರಸ್ತುತ ಪೀಠಾಧಿಪತಿಗಳಾದ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು ತಿಳಿಸಿದಂತೆ 'ಇದ್ದೂ ಇಲ್ಲದಂತಿದ್ದ ಕಿಟಕಿಗಳು, ಕತ್ತಲು ಕೋಣೆಗಳು, ಒಲೆ ಹೊತ್ತಿಸಿದರೆ ಇಡೀ ಕಟ್ಟಡದ ತುಂಬ ಹೊಗೆಯಾಡುತ್ತ ತನಗೆ ದೊರೆತ ಮಾರ್ಗದಿಂದ ಹೊರಗೆ ಹೋಗುತ್ತಲಿತ್ತು. ಮೇಲಿಂದ ಮೇಲೆ ಸಾರಣೆ ಮಾಡದೆ ಇದ್ದರೆ ನೆಲ ಜನರು ತಿರುಗಾಟದ ಮಾರ್ಗದಂತಾಗುತ್ತಿತ್ತು ನೆಲ. ಪಾವಟಿಗೆಗಳನ್ನೇರಿ ಮೇಲಕ್ಕೆ ಹೋಗಬೇಕಾದರೆ ಮೈಯೆಲ್ಲ ಕಣ್ಣಾಗಿ ತೂಕದಿಂದ ಹೆಜ್ಜೆ ಇಡಬೇಕಾದ ಅವಸ್ಥೆಯಿತ್ತು. ಒಮ್ಮೆಯಂತೂ ಹೆಜ್ಜೆ ಇಡುತ್ತಲೇ ಒಂದು ಪಾವಟಿಗೆ ಕುಸಿದು ಬಿತ್ತು. ಅನಾಹುತವು ಸಂಭವಿಸಿತು. ದೊಡ್ಡದಾದ ಕಂಬ ಬದಿಯಲ್ಲೆ ಉರುಳಿ ಬಿತ್ತು. ಶ್ರೀ ಗುರು

ಶಾಂತೇಶ್ವರ ಕೃಪೆಯಿಂದ ಹೆಚ್ಚಿನ ಅನಾಹುತವು ತಪ್ಪಿತು"[೭] ಎಂದು ಡಾ. ಪುರಾಣಿಕರೊಂದಿಗೆ ಮಠದ ಶಿಥೀಲತೆಯನ್ನು ಮಾತಾಡಿದ್ದಾರೆ.

ಸುಮಾರು ಮೂರು ಶತಮಾನಗಳ ಹಿಂದೆ ಅಂದರೆ ೧೭ನೇ ಶತಮಾನದಲ್ಲಿ ರಚನೆಯಾಯಿತೆಂದು ಊಹಿಸಲಾದ ಹುಕ್ಕೇರಿಯ 'ಹಿರೇಮಠ'ವು ಇಲ್ಲಿಯವರೆಗೂ ೫೯ ಜನ ಪೀಠಾಧಿಪತಿಗಳನ್ನು ಹೊಂದಿ ಅವಿರತವಾಗಿ ಧಾರ್ಮಿಕವಾಗಿ ವೀರಶೈವ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡು ಆಯಾ ಕಾಲದ ಜನರ ಭಾವನೆಗಳಿಗನುಗುಣವಾದ ಸಾಮಾಜಿಕ ಸಂಸ್ಕೃತಿಕ ಸೇವೆಯನ್ನು ಸಲ್ಲಿಸುತ್ತ, ಪಂಚಾಚಾರ್ಯರ ಧಾರ್ಮಿಕ ಜಾಗೃತಿ ಕಾಲಾಂತರದಲ್ಲಿ ಬಸವಾದಿ ಶರಣರ ತಾತ್ವಿಕ ಆಚರಣೆಗಳನ್ನು ಮುಕ್ತಮನಸ್ಸಿನಿಂದ ಸ್ವೀಕರಿಸಿ, ಕಾಯಕ–ದಾಸೋಹ, ಕ್ರಿಯಾ–ಜ್ಞಾನ ಸಾಮರಸ್ಯಗಳನ್ನು ಅಳವಡಿಕೊಂಡು ಸಮಾಜದ ಎಲ್ಲ ವರ್ಗದ ಬಾಂಧವರೊಂದಿಗೆ ಬೆರೆತು ಜನರನ್ನು ಭಕ್ತಿ ಪಥದತ್ತ ಒಯ್ಯುತ್ತಿರುವುದು 'ಹಿರೇಮಠ'ದ ಸಾಧನೆಯ ಪಥ.

ಶಿಥೀಲಗೊಂಡ ಹಳೆಯ ಕಟ್ಟಡವನ್ನು ಈಗಿನ ೫೯ನೇ ಪೀಠಾಧಿಪತಿಗಳಾದ ಶ್ರೀ. ಷ. ಬ್ರ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳು, ಕ್ರಿಯಾಶೀಲರೂ, ಧರ್ಮ, ಕಾಯಕ, ದಾಸೋಹ, ಆಧ್ಯಾತ್ಮ, ಕ್ರಿಯಾ ಜ್ಞಾನ ಸಾಮರಸ್ಯವನ್ನು ಹೊಂದಿದವರು. "ಸಾಹಸೇ ವಸತೇ ಲಕ್ಷ್ಮೀ" ಎಂಬ ಉಕ್ತಿಯನ್ನು "ಸಾಹಸೇವಸತೇ ಕ್ರಿಯಾಸಿದ್ಧಿ" ಎಂದರಿತು. ಭಕ್ತರ ಭಕ್ತಿಯನ್ನು ಶಿವಶಕ್ತಿಯಂದರಿತು ಮಠದ ಹಳೆಯ ಕಟ್ಟಡವನ್ನು ಆಮೂಲಾಗ್ರ ಕೆಡವಿ ಹೊಸ ಕಟ್ಟಡವನ್ನು ಕಟ್ಟಿಸುತ್ತಿದ್ದಾರೆ. ಈಗಾಗಲೇ ಶ್ರೀ ಗುರು ಶಾಂತೇಶ್ವರ ಮಂದಿರ, ಮಂದಿರಕ್ಕೆ ಗೋಪುರ, ಪ್ರಸಾದ ನಿಲಯ, ಮಹಾದ್ವಾರ, ಆವರಣದ ಗೋಡೆ ಅನ್ನಪೂರ್ಣೇಶ್ವರಿ ಮಂದಿರಗಳೆಲ್ಲ ಸಿದ್ಧಗೊಂಡಿವೆ. ಆದರೆ ಪೀಠಾಧಿಪತಿಗಳಾದ ಶ್ರೀ. ಷ.. ಬ್ರ. ಚಂದ್ರಶೇಖರ ಶಿವಾಚಾರ್ಯರು ಇನ್ನೂ ಜನೋಪಯೋಗಿ ಕಟ್ಟಡಗಳನ್ನು ಕಟ್ಟಿಸುವ ಯೋಚನೆ ಮತ್ತು ಯೋಜನೆ ಹೊಂದಿದ್ದಾರೆ.

ಅವುಗಳೆಂದರೆ ಮಂಗಲ ಕಾರ್ಯಾಲಯ, ಆಸ್ಪತ್ರೆ, ವಸತಿ ಶಾಲೆಗಳನ್ನು ಕಟ್ಟಿಸಿ ಈ ಮೂಲಕ ಮಠವು "ಭಕ್ತರು, ಮಠ, ಸಾಂಸ್ಕೃತಿಕ ವಿಭವಗಳ ತ್ರಿವೇಣಿ ಸಂಗಮವಾಗಬೇಕೆಂಬುದು" ಶ್ರೀ. ಷ. ಬ್ರ. ಚಂದ್ರಶೇಖರ ಶಿವಾಚಾರ್ಯರ ಸಂಕಲ್ಪ. ಈ ನಿಟ್ಟಿನಲ್ಲಿ ಕಾಯತತ್ಪರಾಗಿದ್ದಾರೆ. ಅವರ ಅಹರ್ನಿಶಿ ಕಾರ್ಯಕ್ಕೆ ಭಕ್ತರ ಭಕ್ತಿ ಪ್ರೇರಕ ಶಕ್ತಿಯಾಗುತ್ತಲಿದೆ. "ಹುಕ್ಕೇರಿ ಹಿರೇಮಠ"ವು ಉತ್ತರೋತ್ತರ ಬೆಳವಣಿಗೆ ಹೊಂದುತ್ತ ನಡೆದಿದೆ.

ಅಡಿ ಟಿಪ್ಪಣಿ ::

೧. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ : ಪುಟ : ೨೧

೨. ಕಾ. ವೆಂ. ಶ್ರೀನಿವಾಸ ಮೂರ್ತಿ : ಕನ್ನಡ ಪರಚಿಂತನೆ ಮತ್ತು ಪರಂಪರೆ ಪುಟ : ೧೨

೩. ಕಾ. ವೆಂ. ಶ್ರೀನಿವಾಸ ಮೂರ್ತಿ : ಕನ್ನಡ ಪರಚಿಂತನೆ ಮತ್ತು ಪರಂಪರೆ ಪುಟ : ೧೨

೪. ಶ್ರೀಶೈಲ ಮಠಪತಿ : ಕನ್ನಡ ಜಾಗೃತಿ ಕೇಂದ್ರ ಚಿಂಚಣಿ : ಪುಟ : ೧೨

೫. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ : ಪುಟ : ೨೧

೬. ಆರ್.ಆರ್. ಮುತಾಲಿಕ : ಹುಕ್ಕೇರಿ ತಾಲೂಕಾ ದರ್ಶನ : ಪುಟ : ೨೧

೭. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ : ಪುಟ : ೨೧

೮. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ : ಪುಟ : ೬೨

*****

ಅಧ್ಯಾಯ - ೪

ಗುರು ಶಾಂತೇಶ್ವರ ಶ್ರೀಗಳು

ಮತ್ತು ಗುರು ಪರಂಪರೆ

ಅಧ್ಯಾಯ ៖ ನಾಲ್ಕು

ಗುರು ಪರಂಪರೆ ಮತ್ತು ಗುರು ಶಾಂತೇಶ್ವರ ಶ್ರೀಗಳು

ಕ್ರಿ.ಶ. ೯ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ರಚನೆಯಾಗಿ ಸುಮಾರು ಸಾವಿರ ವರ್ಷಗಳ ಇತಿಹಾಸವನ್ನುಳ್ಳ "ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಸಂಸ್ಥಾನ ಹಿರೇಮಠ"ವು ಸ್ಥಾಪನೆಯಾದ ಕುರಿತು ಅಧ್ಯಾಯ ೩ರಲ್ಲಿ ವಿವೇಚಿಸಲಾಗಿದೆ. ಪಂಚಾಚಾರ್ಯ ಶ್ರೀ ರಂಭಾಪುರಿ ಪೀಠದ ಜಗದ್ಗುರು ರೇಣುಕಾಚಾರ್ಯರ ಅನುಗ್ರಹದಿಂದ ಕರ್ನಾಟಕದ ಗಡಿಭಾಗ ಹುಕ್ಕೇರಿಯಲ್ಲಿ ಶ್ರೀ ಗುರು ಶಾಂತೇಶ್ವರರಿಂದ ಶ್ರೀಮದ್ ರಂಭಾಪುರಿ ವೀರಸಿಂಹಾಸನ ಪೀಠದ ಶಾಖಾ ಮಠವಾಗಿ ಬೆಳಗಿದ 'ಹಿರೇಮಠ'ಕ್ಕೆ ವಿಶೇಷವಾದ ಗುರು ಪರಂಪರೆಯಿದೆ.

ರೇಣುಕಾಚಾರ್ಯರಿಂದ ಅನುಗ್ರಹಿತರಾದ ಶ್ರೀ ಗುರು ಶಾಂತೇಶ್ವರರು ಗಡಿಭಾಗದಲ್ಲಿ ಸಂಚರಿಸುತ್ತ "ಅಲ್ಲಲ್ಲಿ ವಾಸಿಸುತ್ತ ವೀರಶೈವ ಮಹತಿ, ತ್ರಿವಿದ ದಾಸೋಹ, ಮಾನವೀಯ ಅಂತಃಕರಣ, ದಯ-ಧರ್ಮಗಳ ಮಹತಿ, ಅಷ್ಟಾವರಣ ಪಂಚಾಚಾರ ಷಟಸ್ಥಲಗಳ ತಾತ್ವಿಕ ವಿವೇಚನೆ ಮೊದಲಾದವುಗಳನ್ನು ಬಿಂಬಿಸುತ್ತ ನೈತಿಕ ಜಾಗೃತಿಯತ್ತ ಲೋಕ ಕಲ್ಯಾಣಾರ್ಥ ಸಂಚರಿಸತೊಡಗಿದರು"[೧] ಗುಣಗಳಿಗೆ ತಕ್ಕಂತೆ ಎತ್ತರವಾದ ನಿಲುವು, ಸದೃಢ ಕಾಯ,

ತೇಜಪುಂಜ ಕಣ್ಣುಗಳು, ವೈರಾಗ್ಯದ ಸಂಕೇತವಾಗಿ ಧರಿಸಿದ ಕಾವಿ ಬಟ್ಟೆ ಕೊರಳಲ್ಲಿ ರುದ್ರಾಕ್ಷಿ ಧರಿಸಿ ನೊಸಲಿಗೆ ವಿಭೂತಿ ಧರಿಸಿದ ಪ್ರಶಾಂತ ಮುಖ ಮುದ್ರೆಯುಳ್ಳ ವೈರಾಗ್ಯದ ಪರಾಕಾಷ್ಠೆಯಲ್ಲಿ ಬತ್ತಲೆಯಾದ ಮನವನ್ನು ಹೊಂದಿ ನೋಡಿದವರೆಲ್ಲ ಹಣೆಮಣಿಯುವಂತಿದ್ದರೆ, ಇವರ ಅಗಾಧ ಪಾಂಡಿತ್ಯ ಮತ್ತು ನೈಷ್ಠಿಕ ಬ್ರಹ್ಮಚರ್ಯದಿಂದ ಭೂಮಿಗೆ ಅವತರಿಸಿದ ಭಗವಂತನ ಸ್ವರೂಪವಾಗಿದ್ದರು. ಇವರಿಂದಲೇ ಭಕ್ತ ಸಮೂಹ ಇವರನ್ನು ಸಾಕ್ಷಾತ ಪರಶಿವನೆಂದೇ ಭಾವಿಸಿದ್ದರು. ಅಂತೆಯೇ ಇವರು ನಿಂತ ನೆಲ ಪಾವನವಾಯಿತು. ಗಡಿಭಾಗದಲ್ಲಿ ಧಾರ್ಮಿಕ ಸಂಸ್ಕೃತಿಕ ಸದ್ಭಾವನೆಗಳ ನೆಲೆವೀಡಾಯಿತು. ಜನ-ಮನದ ಕತ್ತಲೆಯನ್ನು ಕಳೆದು ಬೆಳಕನ್ನೀಯುವ ಮಹತ್ವದ 'ಹಿರೇಮಠ'ವಾಯಿತು.

ಇಂಥ ಪವಿತ್ರವಾದ ಮಠಕ್ಕೊಂದು ದೊಡ್ಡ ಗುರು ಪರಂಪರೆಯಿದೆ. ಜನಪದರದೊಂದು ಮಾತಿದೆ "ಗುರುವಿಲ್ಲದ ಮಠ ಮಠವಲ್ಲ, ಹಿರಿಯರಿಲ್ಲದ ಮನೆ ಮನೆಯಲ್ಲ" ಗುರುವಿಲ್ಲದ ಮಠ ಕಳಶವಿಲ್ಲದ ಗೋಪುರ ಅಂತೆಯೇ. ಶ್ರೀಮದ್ ರಂಭಾಪುರಿ, ವೀರಸಿಂಹಾಸನ ಪೀಠದ ಶಾಖಾಮಠವಾದ ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಸಂಸ್ಥಾನ ಹಿರೇಮಠ"ಕ್ಕೆ ಶ್ರೀ ಗುರು ಶಾಂತೇಶ್ವರರಿಂದ ಇಂದಿನ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರನ್ನೊಳಗೊಂಡ ೫೯ ಜನ ಪೀಠಾಧಿಪತಿಗಳಿದ್ದು ಅವರ ಪಟ್ಟಿಯನನ್ನು ಅನುಬಂಧ ಎರಡರಲ್ಲಿ ಕೊಡಲಾಗಿದೆ.

ಇಷ್ಟು ದೊಡ್ಡ ಗುರು ಪರಂಪರೆಯನ್ನೊಳಗೊಂಡ 'ಮಠ' ಗಡಿನಾಡಿನಲ್ಲಿ ಬಹುಶಃ ಇದೊಂದೇ ಇರಬಹುದು. ಸುಮಾರು ೫೪ ಜನ ಗುರುಗಳ ಹೆಸರುಗಳು ಮಾತ್ರ ದೊರೆತು ಅವರ ಯಾವ ಚಾರಿತ್ರಿಕ ದಾಖಲೆಯೂ ದೊರೆತಿಲ್ಲ. ಒಂದು ವಿಶೇಷವೆಂದರೆ ಮಹಾತ್ಮರೆಂದೂ ತಮ್ಮ ಹಿಂದಿನದನ್ನು ನೋಡದೆ ಹೀಗೆ ಮಾಡಿದೆವು ಎಂದು ಹೇಳುವುದಿಲ್ಲ. ಯಾವಾಗಲೂ ಸಮಾಜದ ಒಳಿತನ್ನೇ ಬಯಸುತ್ತ ಆ ನಿಟ್ಟಿನಲ್ಲಿಯೇ ಶ್ರಮಿಸುತ್ತಾರೆ. ಇನ್ನೂ ಈ ಮಠದ ವಿಶೇಷವೆಂದರೆ ಎಲ್ಲ ಗುರು ಪರಂಪರೆಯೂ ಧಾರ್ಮಿಕ, ನೈತಿಕ, ಸಾಮಾಜಿಕ ಕಾಳಜಿಯನ್ನು

ಮೈಗೂಡಿಸಿಕೊಂಡು ತ್ರಿವಿಧ (ಗುರು-ಲಿಂಗ-ಜಂಗಮ) ದಾಸೋಹವನ್ನು ನಡೆಸುವುದರ ಮುಖಾಂತರ ಭಕ್ತ ಸಮೂಹದಲ್ಲಿ ಶ್ರದ್ಧೆ-ಭಕ್ತಿ ನಿಷ್ಠೆಗಳನ್ನು ಜಾಗೃತಗೊಳಿಸುತ್ತ, ೫೭ ಶಾಖಾ ಮಠಗಳನ್ನು ಹೊಂದಿರುವುದು ಜನರ ಬಾಯಿಂತ ತಿಳಿದು ಬರುತ್ತದೆ. ಖಚಿತ ದಾಖಲೆಗಳಿಲ್ಲ. ಅವು ಯಾವವೂ ಅಸ್ತಿತ್ವದಿಲ್ಲಿಲ್ಲದ್ದು ವಿಶಾದದ ಸಂಗತಿ.

ಇನ್ನೂ ವಿಶೇಷವೆಂದರೆ, 'ಶ್ರೀ ಗುರುಶಾಂತೇಶ್ವರ ಹಿರೇಮಠದ ೧೦ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಗುರುಪಾದ ಶಿವಾಚಾರ್ಯರ ಅವಧಿಯಲ್ಲಿ ಕರ್ನಾಟಕದಲ್ಲಿ ಶರಣರ ಅವತಾರ, ಅವರ ಕ್ರಾಂತಿ, ಸಮಾಜೋಧಾರ್ಮಿಕ ಸೇವೆ ಸಾಹಿತ್ಯಕ ಕೊಡುಗೆಗಳೆಲ್ಲ ನೋಡ-ನೋಡುತ್ತಿದ್ದಂತೆ ಪಟ್ಟಭದ್ರ ಹಿತಾಸಕ್ತಿಗಳ ಅಟ್ಟಹಾಸದಿಂದ ಕಮರಿ ಹೋಯಿತು. ಶರಣರಿಗೂ ಮತ್ತು ವಚನ ಸಾಹಿತ್ಯಕ್ಕೆ, ಶರಣರ ತತ್ವಗಳಿಗೂ ಒದಗಿದ ಅವಸ್ಥೆಯನ್ನು ನೋಡಿ ಈ ಮಠದ ಗುರುಗಳು ನೊಂದರು. ಸೂಕ್ಷ್ಮವಾಗಿ ಅವಲೋಕಿಸಿ ತಮ್ಮ ಮಠದ ಗುರುಗಳ ಮುಖೇನ ಶರಣರ ಧ್ಯೇಯೋದ್ದೇಶಗಳನ್ನು ಅನುಷ್ಟಾನಕ್ಕೆ ತರಲು ಕಂಕಣಬದ್ಧರಾದರು. ಇವರಿಂದ ಪಂಚಾಚಾರ್ಯರ ಧರ್ಮ ಜಾಗೃತಿಯೊಂದಿಗೆ ಮಠದ ಆಧ್ಯಾತ್ಮಿಕ ಸಾಂಸ್ಕೃತಿಕ, ಸಾಮಾಜಿಕ ಹರವು ವಿಸ್ತರಿಸಿತು. ಇಷ್ಟು ಮಾತ್ರ ಈ ಮಠದ ಗುರುಪರಂಪರೆಯ ಚಾರಿತ್ರಿಕ ದಾಖಲೆಯನ್ನು ಗುರುತಿಸಬಹುದು. ಆದರೆ ಇತ್ತೀಚಿನ ೫೫ ರಿಂದ ೫೮ರ ವರೆಗಿನ ಪೀಠಾಧ್ಯಕ್ಷರ ಸುಳಿವು ದೊರೆತಿರುವುದನ್ನು ಗಮನಿಸಬಹುದಾದರೂ ಅವರ ಪೂರ್ವಾಶ್ರಮದ ಯಾವ ಸುಳಿವೂ ದೊರೆತಿಲ್ಲ. ಕೇವಲ ಭಕ್ತರ ತಿಳುವಳಿಕೆಯಿಂದ ತಿಳಿದ ವಿಚಾರಗಳು ಜನಪದ ಕಥೆಯ ರೂಪದಲ್ಲಿ ಅಭಿವ್ಯಕ್ತವಾಗುತ್ತಿವೆ.

ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠದ ೫೫ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಲಿಂಗೈಕ್ಯ ಬಸವಲಿಂಗ ಶಿವಾಚಾರ್ಯರು ಮಹಾತಪಸ್ವಿಗಳು, ಪಂಚಾಚಾರ್ಯರ ಮತ್ತು ಬಸವಾದಿ ಶಿವಶರಣರ ತತ್ವಗಳೆಲ್ಲವನ್ನು ಆಳವಾಗಿ ಅಭ್ಯಸಿಸಿದವರಲ್ಲದೆ ವೇದ-ಆಗಮ-

ಉಪನಿಷತ್ತುಗಳನ್ನು ಓದಿ ಅರಗಿಸಿಕೊಂಡವರು. ಪತಂಜಲಿ ಮಹರ್ಷಿಯವರ ಯೋಗಶಾಸ್ತ್ರ ಅಭ್ಯಾಸ ಮಾಡಿ, ಯೋಗ ಸಿದ್ಧಿಯನ್ನು ಪಡೆದವರಾಗಿದ್ದರು. ಮನಸ್ಸು ಏಕಾಗ್ರತೆಯಲ್ಲಿ ಬರಬೇಕಾದರೆ ಸತ್ಯ-ಶೀಲ ಸಚಾರಿತ್ರ್ಯಗಳನ್ನು ಪಡೆಯಬೇಕಾದರೆ ಶರಣನೇ ಇರಲಿ, ಸಂತನೆ ಇರಲಿ ಪೀಠಾಧಿಪತಿಯೇ ಆಗಲಿ ಬ್ರಹ್ಮಚರ್ಯ ಪಾಲಿಸಬೇಕಾದರೆ ಯೋಗ ಸಾಧನೆ ಅವಶ್ಯವೆನಿಸುವುದನ್ನು ಅರಿತ ಶ್ರೀ.ಷ.ಬ್ರ. ಬಸವಲಿಂಗ ಶಿವಾಚಾರ್ಯರು ದಿನದ ಬಹುಸಮಯವನ್ನು ಯೋಗ ಸಾಧನೆಗೆ ಬಳಸುತ್ತಿದ್ದರು. ಯೋಗಸಾಧನೆಯಿಂದ ಅರಿಷಡ್ವರ್ಗಳನ್ನು ದಮನಿಸಬಹುದು. 'ಬುದ್ಧ'ನಾಗಲು ಹೊರಟ ಸಿದ್ಧಾರ್ಥನು ಅರಮನೆಯಲ್ಲಿಯೇ ದಿನದ ಹೆಚ್ಚಿನ ಸಮಯವನ್ನು ಯೋಗ ಸಾಧನೆಯಲ್ಲಿ ಕಳೆದಿರುವುದನ್ನು ತಿಳಿದವರಾಗಿದ್ದರು. ಭಗವದ್ಗೀತೆಯ ಕರ್ಮ, ಜ್ಞಾನ-ಭಕ್ತಿಯೋಗಗಳನ್ನು ತಿಳಿದವರಾಗಿದ್ದರು. "ಮಂತ್ರಯೋಗ, ಲಯಯೋಗ, ಹಠಯೋಗ, ರಾಜಯೋಗಗಳನ್ನು ಆಳವಾಗಿ ಅರಿತುಕೊಂಡಿದ್ದ ಅವರು ಶಿವಯೋಗವನ್ನಂತೂ ತಮ್ಮ ಉಸಿರಾಗಿಸಿಕೊಂಡಿದ್ದರು. ಅಷ್ಟಾಂಗ ಯೋಗಗಳಾದ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧ್ಯಾನ, ಧಾರಣ, ಸಮಾಧಿಗಳನ್ನು"[೨] ಸಂಪೂರ್ಣ ತಮ್ಮಲ್ಲಿ ಅಳವಡಿಸಿಕೊಂಡು ಮಠದಲ್ಲಿ ದಿನವೂ ಭಕ್ತರಿಗೆ ಯೋಗ ತರಬೇತಿ ನೀಡುತ್ತಾ ಪರಿಣಾಮಕಾರಿಯಾದ ಪುರಾಣ ಪ್ರವಚನಗಳನ್ನು ಹೇಳುವುದರ ಮುಖಾಂತರ ಜನರು ಜಾಗೃತವಾಗಿರುವಂತೆ ಮಾಡುತ್ತಿದ್ದರು.

"ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ"ದ ೫೬ನೇ ಪೀಠಾಧಿಪತಿಗಳಾಗಿ ಮಠವನ್ನು ಬೆಳಗಿದವರು ಶ್ರೀ.ಷ.ಬ್ರ. ಚೆನ್ನಬಸವ ಶಿವಾಚಾರ್ಯರು ತಮ್ಮ ಗುರುಗಳಾದ ಶ್ರೀ.ಷ.ಬ್ರ. ಬಸವಲಿಂಗ ಶಿವಾಚಾರ್ಯರ ಪರಂಪರೆಯನ್ನೇ ಮುಂದುವರೆಸಿದರು. ಉಗ್ರ ತಪಸ್ವಿಗಳಲ್ಲದೆ ಲಿಂಗಲೀಲಾ ವಿನೋದಿಗಳಾಗಿದ್ದರು. ಇವರು ವೇದ-ಆಗಮ-ಉಪನಿಷತ್ತುಗಳ ಅಧ್ಯಯನದೊಂದಿಗೆ ವೀರಶೈವ ತತ್ವಶಾಸ್ತ್ರಗಳನ್ನು ಆಳವಾಗಿ ಅಭ್ಯಸಿಸಿದವರಾಗಿ ಪುರಾಣ-

ಪ್ರವಚನಗಳನ್ನು ಹೇಳುವ ಉಪನಿಷತ್ ವಾಕ್ಯಗಳನ್ನು, ಬಸವಾದಿ ಶರಣ ವಚನಗಳನ್ನು ಹೇಳುತ್ತ ಭಕ್ತರೆಲ್ಲರ ಮನಸ್ಸನ್ನು ಸುಪ್ರೀತಗೊಳಿಸುತ್ತಿದ್ದರು. ಮಠದ ಹಿಂದಿನ ಸಂಪ್ರದಾಯಗಳಾದ ಕಾಯಕ-ದಾಸೋಹ, ಕ್ರಿಯಾಜ್ಞಾನ ಸಾಮರಸ್ಯ, ನಡೆನುಡಿಗಳಲ್ಲಿ ಭಕ್ತಿ ಸಾಮರಸ್ಯವನ್ನು ಪ್ರತಿಪಾದಿಸಿಕೊಂಡು ಬಂದರು. ತೋಂಟದ ಸಿದ್ಧಲಿಂಗ ಶಿವಯೋಗಿಗಳು ಯೋಗದ ಅಷ್ಟಾಂಗಯೋಗಗಳನ್ನು ಲಿಂಗಾಂಗಯೋಗದ ಪರವಾಗಿ ವಿವರಿಸಿದ್ದನ್ನು ಆ ಕುರಿತು ವಚನಗಳನ್ನು ತಮ್ಮ ಪ್ರವಚನದಲ್ಲಿ ವಿವರಿಸುತ್ತಿದ್ದರು. ದೃಷ್ಠಿಯೋಗದ ಮೂಲಕ ಚಿತ್ತ ವೃತ್ತಿಯನ್ನು ನಿರೋಧಿಸುವ ಬಗೆಯನ್ನು ಚಾಮರಸ ಕವಿಯ ಪ್ರಭುಲಿಂಗ ಲೀಲೆಯನ್ನಾಧರಿಸಿ ವಿವರಿಸುತ್ತಿದ್ದರು. ಹೀಗೆ ಮಠದ ಪರಂಪರೆಯನ್ನು ವ್ಯಾಪಕಗೊಳಿಸಿದುದು ತಥಾ ರೂಪದಲ್ಲಿ ಜನಮಾನಸದಲ್ಲಿ ಹೆಣೆದುಕೊಂಡಿದೆ.

ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠದ ೫೭ನೇ ಪೀಠಾಧಿಪತಿಗಳಾಗಿದ್ದ ಶ್ರೀ ಶಂಕರಲಿಂಗ ಶಿವಾಚಾರ್ಯರು ಕೂಡಾ ಮಠದ ಸಂಪ್ರದಾಯವನ್ನು ಚಾಚೂ ತಪ್ಪದೆ ಪಾಲಿಸಿದರು. ಇವರು ಕರ್ನಾಟಕದ ಗಡಿಭಾಗದ ತಾಲೂಕುಗಳಲ್ಲಿ ಒಂದಾದ ಅಥಣಿಯವರಾದರೂ ಕೂಡಾ ಪೂರ್ವಾಶ್ರಮದ ಯಾವುದೇ ಕುರುಹು ದೊರೆತಿಲ್ಲ. ಗುರುಪೀಠವನ್ನು ಅಲಂಕರಿಸಿದ ಇವರೂ ಸಹಜವಾಗಿಯೇ ವೇದ-ಉಪನಿಷತ್ತುಗಳನ್ನು ಅಭ್ಯಸಿಸಿ ಪಂಚಾಚಾರ್ಯರ ಧಾರ್ಮಿಕ ಜಾಗೃತಿ, ಬಸವಾದಿ ಶರಣರ ವಚನ ತತ್ವಗಳನ್ನು ಜನತೆ ಪಾಲಿಸುವಂತೆ ಸದಾ ಜಾಗೃತಿ ವಹಿಸುತ್ತಿದ್ದರು. ಉಳಿದವರಿಗಿಂತ ಶಂಕರಲಿಂಗ ಶಿವಾಚಾರ್ಯರು ವಿಶಿಷ್ಟವಾಗಿದ್ದರು. ಸಂಗೀತವನ್ನು ಶಾಸ್ತ್ರೀಯವಾಗಿ ಅಭ್ಯಾಸ ಮಾಡಿದ್ದರು. ವೀರಶೈವ ಪುರಾಣಗಳನ್ನು ಶಾಸ್ತ್ರೀಯವಾಗಿ ತಮ್ಮ ಸುಮಧುರ ಕಂಠದಿಂದ ಹಾಡುತ್ತ ಜನರಲ್ಲಿ ಧಾರ್ಮಿಕ ಶಕ್ತಿ ಸಂಚಲನಗೊಳ್ಳುವಂತೆ ಮಾಡುತ್ತಿದ್ದರು. ತಮ್ಮ ಪ್ರವಚನಗಳಲ್ಲಿ ಸಿದ್ಧಾಂತ ಶಿಖಾಮಣಿ, ಶಿವಾಗಮಗಳನ್ನು ಉಪದೇಶಿಸುತ್ತ ಸದಾ ಸಮಾಜದ ಸ್ವಾಸ್ತ್ಯವನ್ನು ಕಾಪಾಡುವಲ್ಲಿ

ಮಗ್ನರಾಗಿರುತ್ತಿದ್ದರು. ಸಂಗೀತಗಾರರಾಗಿದ್ದರಿಂದ ಶರಣರ ವಚನಗಳನ್ನು, ದಾಸರ ಪದಗಳನ್ನು, ಮುಪ್ಪಿನ ಷಡಕ್ಷರಿಯವರ ತತ್ವಪದಗಳನ್ನು ಹಾಡುತ್ತ ಭಕ್ತರ ಮನಸ್ಸಿಗೆ ಭಕ್ತಿಯ ಎರಕ ಹೊಯ್ಯುವ ಕೆಲಸ ಅನನ್ಯವಾದುದು. ಶ್ರೀ.ಷ.ಬ್ರ. ಶಂಕಲಿಂಗ ಶಿವಾಚಾರ್ಯರ ಪ್ರಶಾಂತ ಪಾಂಡಿತ್ಯವನ್ನರಿತ ಹುಕ್ಕೇರಿಯ ಪ್ರಸಿದ್ಧ ಕವಿಗಳಾದ ಪಂಡಿತ ಸದಾಶಿವ ಶಾಸ್ತ್ರಿಗಳು – ವರಗೂಳಿ ಸಿದ್ಧರಾಮೇಶ್ವರ ಪುರಾಣ, ಗರಗರದ ಶಿವಯೋಗಿ ಮಡಿವಾಳೇಶ್ವರ ಪುರಾಣ, ನೀತಿಶತಕ, ಶ್ರೀ ವಿಜಯಮಹಂತೇಶ್ವರ ರಗಳೆ ಶ್ರೀ ಮದಥಣಿ ಶಿವಯೋಗೀಶ್ವರ ಪುರಾಣ, ಬಿದರಿ ಕುಮಾರೇಶ್ವರ ಪುರಾಣಗಳನ್ನು ರಚಿಸಿದ ಶ್ರೇಷ್ಠ ಕವಿಗಳು ಇವರ ಬಳಿ ಕೆಲವು ಕಾಲ ಇದ್ದು ವೇದ–ಉಪನಿಷತ್ತುಗಳ ಸಾರವನ್ನಲ್ಲದೆ ವೀರಶೈವ ವಿಧಿವಿಧಾನಗಳನ್ನು ಅಧ್ಯಯನ ಮಾಡಿದ್ದರೆಂಬುದು ತಿಳಿದು ಬರುತ್ತದೆ. ಜನರ ಹೇಳಿಕೆಯಿಂದ ಯಾವುದೇ ಅಧಿಕೃತ ದಾಖಲೆಗಳಿಲ್ಲ.

ಮೇಲಿನ ಈ ವಿಚಾರಗಳನ್ನೆಲ್ಲ ವಿಷದಪಡಿಸಿದವರು ಕಟಕೋಳ ಎಂ ಚಂದರಗಿಯ ಶ್ರೀ ಗುರು ಗಡದೇಶ್ವರ ಸಂಸ್ಥಾನ ಹಿರೇಮಠದ ತಪೋಭೂಷಣ ಶ್ರೀ.ಷ.ಬ್ರ. ವೀರಭದ್ರ ಶಿವಯೋಗಿ ಶಿವಾಚಾರ್ಯ ಮಹಾಸ್ವಾಮಿಗಳು. ಇವರು 'ಶ್ರೀ ಗುರು ಶಾಂತೇಶ ಹಿರೇಮಠ'ದ ೫೮ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಲಿಂಗೈಕ್ಯ ವಿರುಪಾಕ್ಷ ಶಿವಾಚಾರ್ಯರ ಅನುಗ್ರಹದಲ್ಲಿದ್ದು ಸೇವೆ ಮಾಡುತ್ತ 'ಹುಕ್ಕೇರಿ ಹಿರೇಮಠ' ನಡೆದು ಬಂದ ಹೆಜ್ಜೆಯ ಗುರುತುಗಳನ್ನು ಸಂಗ್ರಹಿಸಿದರು. ಅದರ ಸಂಗ್ರಹದಿಂದಲೇ ನಾವಿಂದು 'ಹುಕ್ಕೇರಿ ಶ್ರೀ ಗುರುಶಾಂತೇಶ್ವರ 'ಹಿರೇಮಠ'ದ ಗುರು ಪರಂಪರೆಯನ್ನು ತಿಳಿಯಲು ಸಾಧ್ಯವಾಗಿದೆ.

ಒಂದು ವಿಶಿಷ್ಟ ಸಂಗತಿಯಂದರೆ ಹುಕ್ಕೇರಿ ಹಿರೇಮಠದ ಕ್ರಿ.ಶ. ೯ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ರಚನೆಯಾಯಿತೆಂಬ ವಿಚಾರಗಳನ್ನು ಹಿಂದಿನ ಅಧ್ಯಾಯಗಳಲ್ಲಿ ನೋಡಿದ್ದೇವೆ. ಆದರೆ ಆ ಅವಧಿಯಿಂದ ೧೯ನೇ ಶತಮಾನದವರೆಗೆ ಕರ್ನಾಟಕವನ್ನು ಸ್ವದೇಶಿ ಅರಸರುಗಳಲ್ಲದೆ ಪಾಶ್ಚಿಮಾತ್ಯರು ಆಳಿದ್ದಾರೆ. ಅನೇಕ ಧರ್ಮದವರು ಇಲ್ಲಿ ನೆಲೆಸಿದ್ದಾರೆ. ಅನೇಕ ಭಾಷೆಗಳ

ಪ್ರಭಾವವು ಆಗಿದೆ. ಹೀಗಿದ್ದಾಗಲೂ ಅಲ್ಲಿಂದ ಇಲ್ಲಿಯವರೆಗೆ ಹುಕ್ಕೇರಿಯ ಹಿರೇಮಠವು ತನ್ನ ಅಸ್ತಿತ್ವವನ್ನು ಉಳಿಸಿಕೊಂಡು, ಶ್ರೀ ಗುರು ಶಾಂತೇಶ್ವರರಿಂದ ಮೊದಲುಗೊಂಡು ಇಂದಿನ ಶ್ರೀಷ.ಬ್ರ. ಚಂದ್ರಶೇಖರ ಶಿವಾಚಾರ್ಯರರವರೆಗೆ ತನ್ನ ಅಸ್ತಿತ್ವನ್ನು ಉಳಿಸಿಕೊಂಡು ಬಂದಿರುವುದಕ್ಕೆ ಶ್ರೀ ಗುರು ಶಾಂತೇಶ್ವರರ ಅನುಗ್ರವೇ ಕಾರಣವೆನ್ನಬಹುದು. ಯಾಕೆಂದರೆ ಹುಕ್ಕೇರಿ ಕನ್ನಡದ ಪುಣ್ಯ ನೆಲೆ. ಮಹಾತ್ಮರು ನಡೆದಾಡಿದ ದಿವ್ಯ ನೆಲೆ ಅವರ ಭಕ್ತಿ ಜ್ಞಾನ ವೈರಾಗ್ಯ ತಪ್ಪಸ್ಸಿನ ಫಲದಿಂದಾಗಿರುತ್ತದೆ. ಇದುವೇ ಸೃಷ್ಟಿಯ ಅವ್ಯಕ್ತ ಅಗಾಧ ಶಕ್ತಿಯ ಸಂಕಲ್ಪವಾಗಿರುತ್ತದೆ.

ಈಗ "ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠ"ದ ಅಧ್ಯಾತ್ಮ ಜ್ಯೋತಿಯನ್ನು ದೇದಿಪ್ಯಮಾನವಾಗಿ ಬೆಳಗುತ್ತಿರುವವರು. ಈ ಮಠದ ೫೯ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು. ಇವರ ಪೂರ್ವಾಶ್ರಮದ ಪರಿಚಯವನ್ನು ಸಂಕ್ಷೀಪ್ತವಾಗಿ ವಿವೇಚಿಸಲಾಗಿ, ಇವರು ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲೂಕಿನಲ್ಲಿ ಎಂ. ಚಂದರಗಿ ಎಂಬುವುದೊಂದು ಚಿಕ್ಕ ಹಳ್ಳಿ. ಅಲ್ಲಿಯ ಒಂದು ರೈತ ಕುಟುಂಬ ಗದಿಗೆಯ್ಯ ಹಾಗೂ ಪಾರ್ವತಿದೇವಿ ಎಂಬ ಮಾಹೇಶ್ವರ ದಂಪತಿಗಳು. ಸದಾಚಾರ ಸದ್ಭಕ್ತಿಗಳನ್ನು ಹೊಂದಿ, ಜಂಗಮತ್ವದ ಆಚಾರ–ವಿಚಾರಗಳನ್ನು ಪಾಲಿಸುತ್ತ, ಪಂಚಾರ್ಯರ ಚರಜಂಗಮ ತತ್ವಗಳನ್ನು ಬಸವಾದಿ ಶರಣರ ತತ್ವಗಳನ್ನು ಪಾಲಿಸುತ್ತಿದ್ದ ಶಿವ ದಂಪತಿಗಳ ಪುಣ್ಯ ಉದರದಲ್ಲಿ ದಿ.೨೦–೭–೧೯೭೦ರಂದು ಸೋಮವಾರ ಜನಿಸಿದರು. ಶೈಶವಾವಸ್ಥೆಯಲ್ಲಿ ತಂದೆ ಗದಿಗಯ್ಯನವರೇ ನಾಮಕರಣದಲ್ಲಿ ಪಂಚಾಕ್ಷರಿ ಮಂತ್ರದ ದಿಕ್ಷೆ ಕೊಟ್ಟು ಬೆಳೆಸಿದರು. ಬಾಲ್ಯಕ್ಕೆ ಬಂದಾಗ ಗದಿಗೆಯ್ಯನವರು ಮಗನಿಗೆ ಪಂಚಾಚಾರ್ಯರ ಜೀವನ ಚರಿತ್ರೆಗಳನ್ನು, ಅವರ ಧಾರ್ಮಿಕ ಸಾಧನೆ, ಬಸವಾದಿ ಶರಣರ ಚರಿತ್ರೆಗಳನ್ನು ವಚನಗಳ ಕಂಠಪಾಠಗಳನ್ನು ರೂಢಿಸಿದರು ಹೀಗೆ ಆಧ್ಯಾತ್ಮದ ಬೆಳಕಿನ ಶ್ರೀಕಾರ ಗುರುಕುಲದಂತಿರುವ ಮನೆಯಲ್ಲಿಯೇ ದೊರೆಯಿತು. ಮನೆಯಲ್ಲಿ ವೀರಶೈವ ವಿಧಿವಿಧಾನಗಳ ಆಚರಣೆ, ಮಂತ್ರ ಪಠಣಗಳ ಸಂಸ್ಕಾರ ವಚನಗಳ ಕಂಠಪಾಠಗಳಲ್ಲಿ

ಆಗಲೇ ಶ್ರೀ ಚಂದ್ರಶೇಖರರು ವೈರಾಗ್ಯದ ಹೆಜ್ಜೆಗಳನಿಡತೊಡಗಿದರು. ಎಂ. ಚಂದರಗಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದಾಗ ಮಗನ ವೈರಾಗ್ಯದ ಹೆಜ್ಜೆಗಳನ್ನು ಗುರುತಿಸಿ ಗದಿಗೆಯ್ಯನವರು ಬಾದಾಮಿಯ ಶಿವಯೋಗ ಮಂದಿರಲ್ಲಿ ೮ನೇ ತರಗತಿಗೆ ಸೇರ್ಪಡೆ ಮಾಡಿದರು. ಅಲ್ಲಿ ರುದ್ರ, ನಮಕ, ಚಮಕ, ಪುರುಷಸೂಕ್ತ ಮಹಿಮ ಸೂತ್ರಗಳನ್ನು ಅಭ್ಯಾಸ ಮಾಡಿದರು. ನಂತರ ಮುರಗೋಡ ಶ್ರೀ ಮಹಾಂತ ದುರುದುಂಡೇಶ್ವರ ಮಠದಲ್ಲಿ ಶ್ರೀ ಶಿವಕುಮಾರ ಶಾಸ್ತ್ರೀಗಳ ಬಳಿ ವೀರಶೈವ ವಿಧಿವಿಧಾನ, ಶತಕತ್ರಯ ಸುಭಾಷಿತಗಳನ್ನು ಓದಿಕೊಂಡರು. ಸಂಸ್ಕೃತ ಅಧ್ಯಯನಕ್ಕಾಗಿ ತಂದೆಯವರ ಸಂಕಲ್ಪದಂತೆ ಶಿವಮೊಗ್ಗ ಜಿಲ್ಲೆ ಹೊನ್ನಾಳಿ ಗ್ರಾಮದ ಹಿರೇಕಲ್ಮಠಕ್ಕೆ ಬಂದರು. ಮಾಧ್ಯಮಿಕ ಅಭ್ಯಾಸದೊಂದಿಗೆ, ಆಧ್ಯಾತ್ಮಿಕ ಅಧ್ಯಯನವನ್ನು ಮಾಡುತ್ತ ೧೯೮೬ರಲ್ಲಿ ಎಸ್.ಎಸ್.ಎಲ್.ಸಿ. ಪಾಸಾದರು. ಶಾಲಾ ಪಠ್ಯದೊಂದಿಗೆ ಮಾಡಿದ ಅಧ್ಯಾತ್ಮಿಕ ಅಧ್ಯಯನದಿಂದ ಶ್ರೀ ಚಂದ್ರಶೇಖರರಲ್ಲಿ ಲೋಕಾನುಭವ ಆಗಲೇ ಪಕ್ವವಾಗಿತ್ತು. ಬ್ರಹ್ಮಚರ್ಯ ನಿಷ್ಠೆ, ವೈರಾಗ್ಯದ ದಿಟ್ಟಡಿಗಳು ಯೌವನದಲ್ಲಿ ಗಟ್ಟಿಗೊಂಡು ಮುಂದಿನ ಶಿಕ್ಷಣಕ್ಕಾಗಿ ಮೈಸೂರಿನತ್ತ ನಡೆದರು. ಜಪ್ಪದಕಟ್ಟೆ ಮಠದಲ್ಲಿ ಆಶ್ರಯ ಪಡೆದು, ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಯನವನ್ನು ಮುಂದುವರೆಸಿದರು. ಅದರೊಂದಿಗೆ ಧಾರವಾಡದ ಜೆ.ಎಸ್.ಎಸ್. ಕಾಲೇಜಿನಲ್ಲಿ ಪದವಿ ಅಧ್ಯಯನವೂ ನಡೆಯಿತು. ೧೯೯೦ರಲ್ಲಿ ಪದವಿಯನ್ನು ಪಡೆದು ಹೊರಬರುವಷ್ಟರಲ್ಲಿ ಶ್ರೀ ಚಂದ್ರಶೇಖರರು ಪಾರಮಾರ್ಥವನ್ನು ಸಾಧಿಸಿದ ಸುಂದರ ಮೂರ್ತಿಯಾಗಿದ್ದರು.

ಬಾಲ್ಯದಿಂದ ಅಭ್ಯಾಸ ಮಾಡಿದಂತಹ ವೇದ–ಉಪನಿಷತ್ತು, ಆಗಮ, ವೀರಶೈವ ಪುರಾಣಗಳು ಮುಪ್ಪಿನ ಷಡಕ್ಷರಿಗಳ ನಿಜಗುಣ ಶಿವಯೋಗಿಗಳ ಗ್ರಂಥಗಳ ಅಧ್ಯಯನ ಪಂಚಾಚಾರ್ಯರ ಪರಂಪರೆ ಧರ್ಮ ಜಾಗೃತಿ, ಬಸವಾದಿ ಶರಣರ ವಚನಗಳ ಪಠಣದೊಂದಿಗೆ ಶರಣರ ಜೀವನ ಚರಿತ್ರೆ. ವೀರಶೈವ ವಿಧಿವಿಧಾನಗಳ ಶಾಸ್ತ್ರೀಯ ಅಧ್ಯಯನದೊಂದಿಗೆ ಶ್ರೀ

ಚಂದ್ರಶೇಖರರು 'ಭಕ್ತಿ ಜ್ಞಾನ ವೈರಾಗ್ಯ'ದ ಸಾಕಾರ ಮೂರ್ತಿಯಾಗಿದ್ದರು. ತೊಟ್ಟ ಕಾವಿಬಟ್ಟೆಯ ಘನ ಮಹಿಮೆಯನ್ನು ಅರಿತಿದ್ದರು. ಮುಂದಿನ ಉನ್ನತ ಶಿಕ್ಷಣಕ್ಕಾಗಿ ಮೈಸೂರು ವಿಶ್ವವಿದ್ಯಾನಿಲಯ ಮಾನಸ ಗಂಗೋತ್ರಿಯಲ್ಲಿ ಕನ್ನಡ ಸಾಹಿತ್ಯ ಅಧ್ಯಯನವನ್ನು ಪ್ರಧಾನ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡು ಪ್ರಥಮ ವರ್ಷವನ್ನು ಮುಗಿಸಿದರು. ಅಷ್ಟೊತ್ತಿಗಾಗಲೇ ಹುಕ್ಕೇರಿ ಹಿರೇಮಠದ ೫೮ನೇ ಪೀಠಾಧ್ಯಕ್ಷರಾದ ಶ್ರೀ.ಷ.ಬ್ರ. ವೀರೂಪಾಕ್ಷ ಶಿವಚಾರ್ಯರರು ಲಿಂಗದಲ್ಲಿ ಬಯಲಾದಾಗ ಶ್ರೀ ಚಂದ್ರಶೇಖರವರಿಗೆ ಕರೆ ಬಂದು ಶಿಕ್ಷಣವನ್ನು ಅಲ್ಲಿಗೆ ಬಿಟ್ಟು, ಮಠದ ಕರೆಯನ್ನು ಮನ್ನಿಸಿ ೧೯೯೨ರಲ್ಲಿ ಹುಕ್ಕೇರಿಗೆ ಆಗಮಿಸಿದರು.

ಶ್ರೀ ಚಂದ್ರಶೇಖರರಿಗೆ ಕಟಗೋಳ ಎಂ. ಚಂದರಗಿಯ ತಪೋಭೂಷಣರು ಇವರ ಪೂರ್ವಾಶ್ರಮದ ಸಹೋದರರು ಆದ ಶ್ರೀ.ಷ.ಬ್ರ. ವೀರಭದ್ರ ಶಿವಯೋಗಿ ಶಿವಾಚಾರ್ಯರು ಚಂದ್ರಶೇಖರರಿಗೆ ಪಟ್ಟಮಹೋತ್ಸವದ ವಿಷಯನ್ನು ತಿಳಿಸಿದರು.

"ಪರೋಪಕಾರಮಿದಂ ಶರೀರಂ" ಎಂಬ ಉಪನಿಷತ್ ವಾಕ್ಯದಂತೆ ಪರೋಪಕಾರಕ್ಕಾಗಿ ಈ ದೇಹ ಸವೆಯುತ್ತದೆ ಎಂದರೆ ಇದಕ್ಕಿಂತ ಭಾಗ್ಯ ಯಾವುದು. ಪರೋಪಕಾರಕ್ಕಾಗಿ ಚಲಿಸುವ ನದಿಯಂತೆ ಏನೇ ಅಡೆತಡೆಗಳು ಬಂದರು ಅವುಗಳನ್ನು ಪ್ರಸಾದವೆಂದೇ ಸ್ವೀಕರಿಸಿ ದೊರೆತ ದಾರಿಗಳಲ್ಲಿ ಮುನ್ನಡೆಯಲೇ ಬೇಕೆಂಬುದು ಜ್ಞಾನಿಗಳ ವಿಚಾರ. ಬಾಲ್ಯದಿಂದಲೇ ಕಾವಿಬಟ್ಟೆಯ ಪ್ರಭಾವಕ್ಕೊಳಗಾದ ಚಂದ್ರಶೇಖರರು ಆ ಬಟ್ಟೆಯತ್ತ ಚಲಿಸಿ ಸಮಾಜೋಧಾರ್ಮಿಕ ಅಭಿವೃದ್ಧಿಗೆ ಶ್ರಮಿಸುವ ದಿವ್ಯ ಸಂಕಲ್ಪವನ್ನು ಹೊಂದಿದವರಾದ್ದರಿಂದ ಒಪ್ಪಿಕೊಂಡರು.

೧೯೯೨ ಮೇ ೫ ರಂದು ಪಟ್ಟಮಹೋತ್ಸವ ನಡೆಯಿತು. ಅದಕ್ಕೂ ಮೊದಲು ಸರ್ವಧರ್ಮ ಸಮ್ಮೇಳನವನ್ನು ಆಯೋಜಿಸಿದ್ದರು. ದೇಶದ ವಿವಿಧ ಧರ್ಮದ ೬೦ ಮಠಾಧಿಪತಿಗಳು ಭಾಗವಹಿಸಿದ್ದರು. ಪಂಚಪೀಠಾಧೀಶ್ವರರ ಅಡ್ಡಪಲ್ಲಕಿ, ಸಹಸ್ರ ಕುಂಭಮೇಳದೊಂದಿಗೆ ನಡೆದು ನಂತರ ೫-೫-೧೯೯೨ರಂದು ಮಂಗಳವಾರ ಅಕ್ಷಯ

ತೃತಿಯಾದಂದು ಪಂಚಪೀಠಾಧೀಶ್ವರರ ಸಮ್ಮುಖದಲ್ಲಿ ಶ್ರೀ ಚಂದ್ರಶೇಖರರಿಗೆ ಪಟ್ಟಾಧಿಕಾರ ಅನುಗ್ರಹಿಸಿದರು. ನಂತರ ಶ್ರೀ.ಷ.ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯರ ಅಡ್ಡಪಲ್ಲಕ್ಕಿ ಮಹೋತ್ಸವವನ್ನು ಏರ್ಪಡಿಸಿ ೮೦ಕ್ಕೂ ಹೆಚ್ಚು ಎಲ್ಲ ವರ್ಗದ ಮಠಾಧೀಶರು ಬಂದು ಹಾರೈಸಿದರು. ಆಗ "ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಸಂಸ್ಥಾನ ಹಿರೇಮಠ"ದ ೫ನೇ ಪೀಠಾಧಿಪತಿಗಳಾಗಿ ಶ್ರೀ ಚಂದ್ರಶೇಖರ (ಸ್ವಾಮಿಗಳು) ಶಿವಾಚಾರ್ಯರು ಶೋಭಿಸಿದರು.

ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರಿಗೆ, ಗರ್ಭಾವಸ್ಥೆಯಲ್ಲಿಯೇ ದೊರೆತ ಶಿವಸಂಸ್ಕಾರ ಬಲದಿಂದ ಈ ಭಾಗದಲ್ಲಿ ಪಂಚಾಚಾರ್ಯರ ಧಾರ್ಮಿಕ ಜಾಗೃತಿ, ಶರಣರ ಕಾಯಕ–ದಾಸೋಹ ವೀರಶೈವ ಸಿದ್ಧಾಂತ, ಅಷ್ಟಾವರಣ ಲಿಂಗಾಂಗ ಸಾಮರಸ್ಯ ಶಿವಯೋಗಗಳನ್ನು ಪಾಲಿಸುತ್ತ ಮಠವನ್ನು ಧಾರ್ಮಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ ಘನಮೌಲ್ಯಗಳ ಕೇಂದ್ರವನ್ನಾಗಿ ಬಿಂಬಿಸುತ್ತ ಸಾಮಾಜಿಕ ಸ್ವಾಸ್ಥ್ಯವನ್ನು ಮಠದ ಪರಂಪರೆಯನ್ನು ಕಾಪಾಡುವಲ್ಲಿ ಇಂದಿನ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರರು ಮಠವನ್ನು ಬೆಳುಗುತ್ತಿರುವುದನ್ನು ಗಮನಿಸಬಹುದು.

ಅಡಿ ಟಿಪ್ಪಣಿ ::

೧. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ : ಪುಟ : ೨೬

೨. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ : ಪುಟ : ೨೬

*****

ಅಧ್ಯಾಯ - ೫

ಶ್ರೀ ಮಠದ ಸಾಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳು

ಅಧ್ಯಾಯ ೫ ಐದು

ಶ್ರೀ ಮಠದ ಸಂಸ್ಕೃತಿಕ ಮತ್ತು ಸಾಮಾಜಿಕ ಕಾರ್ಯಗಳು

ಭಾರತ ದೇಶವು ವಿವಿಧ ಧರ್ಮಗಳ ಉಗಮಸ್ಥಾನ. ಧಾರ್ಮಿಕ, ಆಧ್ಯಾತ್ಮಿಕ ಪ್ರಪಂಚದ ಕೇಂದ್ರ ಸ್ಥಾನ. ಈಡೀ ವಿಶ್ವದಲ್ಲಿಯೇ ಪುಣ್ಯಪ್ರಧಾನವಾದ ದೇಶವಾಗಿದೆ. ಪುಣ್ಯಪುರುಷರು, ಮಹಾನುಭಾವಿಗಳು ಜನಿಸಿ ಭಾರತವನ್ನು ಪಾವನಗೊಳಿಸಿದ್ದಾರೆ. ನಮ್ಮ ಕರ್ನಾಟದಲ್ಲಿಯೂ ಅನೇಕ ಸಾಧು ಸತ್ಪುರುಷರು, ಶರಣರು, ಸಂತರು ಉದಯಿಸಿ ಆಗಾಗ ಜನರಲ್ಲಿ ಧಾರ್ಮಿಕ, ಸಾಮಾಜಿಕ ಜಾಗೃತಿ ಮೂಡಿಸುತ್ತ ತಮ್ಮ ಜ್ಞಾನವನ್ನು ಇತರರಿಗೂ ಹಂಚಿ ಸೇವಾ ಮನೋಭಾವನೆಯನ್ನು ಬಳುವಳಿಯಾಗಿ ಬಿಟ್ಟು ಹೋಗಿದ್ದಾರೆ. ಈ ನೆಲೆಯಲ್ಲಯೇ ಹುಕ್ಕೇರಿಯ ಶ್ರೀ ಗುರು ಶಾಂತೇಶ್ವರ ಹಿರೇಮಠವು ಒಂದು.

ಹುಕ್ಕೇರಿ ಶ್ರೀ ಗುರು ಶಾಂತೇಶ್ವರ 'ಹಿರೇಮಠ' ಸ್ಥಾಪನೆ ಕ್ರಿ.ಶ. ೯ನೇ ಶತಮಾನಕ್ಕಿಂತಲೂ ಮೊದಲು, ಅಂದರೆ ಸಾವಿರ ವರ್ಷಗಳ ಇತಿಹಾಸವನ್ನು ಗುರುತಿಸುವಲ್ಲಿ ಅಲ್ಲಿಂದ ಇಲ್ಲಿಯವರೆಗೆ ೫೯ ಪೀಠಾಧಿಪತಿಗಳು ಇದ್ದುದನ್ನು ಗುರುತಿಸಲಾಗಿದೆ. ಅವರಲ್ಲಿ ಸಂಸ್ಥಾಪಕರಾದ ಶ್ರೀ ಗುರು ಶಾಂತೇಶ್ವರರು ಸ್ವತಃ ಶ್ರೀ ರಂಭಾಪುರಿ ಪೀಠದ ಜಗದ್ಗುರು ರೇಣುಕಾಚಾರ್ಯರಿಂದ

ಅನುಗ್ರಹಿತರಾಗಿ ಜನಮಾಸದಲ್ಲಿ ವೀರಶೈವದ ಮಹತಿ, ಪಂಚಾಚಾರ, ಷಟಸ್ಥಲಗಳ ತಾತ್ವಿಕ ಚಿಂತನೆ, ದಯ ಧರ್ಮಗಳ ಮಹತಿಯನ್ನು, ತ್ರಿವಿಧ ದಾಸೋಹಗಳನ್ನು ಬಿಂಬಿಸುತ್ತ ಸಂಚರಿಸಿದರು. ಅವರ ಅಗಾಧ ಪಾಂಡಿತ್ಯ ನೈಷ್ಠಿಕ ಬ್ರಹ್ಮಚರ್ಯದಿಂದ ಜನರಲ್ಲಿ ಸಾಕ್ಷಾತ್ ಪರಶಿವನೆಂದೇ ಮುಂದೆ ಬೃಹತ್ ಮಠವಾಗಿ ಭಕ್ತರಿಂದ ರಚನೆಯಾಯಿತು.

ಇವರ ನಂತರದ ಎಲ್ಲ ಪೀಠಾಧಿಪತಿಗಳು ಈ ಪೀಠದ ಪರಂಪರೆಯನ್ನೇ ಮುಂದುವರೆಸಿಕೊಂಡು ನಡೆಯುತ್ತ ಕಾಲಾನುಕ್ರಮಕ್ಕೆ ಆಗುವಂತಹ ಬದಲಾವಣೆಗಳಲ್ಲಿ ಗುರು ಪೀಠದ ತತ್ವದೊಂದಿಗೆ 'ವಿರಕ್ತಮಠ'ದ ತತ್ವಗಳನ್ನು ಅನ್ವಯಿಸಿಕೊಂಡು ಧರ್ಮಜಾಗೃತಿಯಲ್ಲಿ ತೊಡಗಿ ಆತ್ಮೋದ್ಧಾರದೊಂದಿಗೆ ಮಠವನ್ನು ಬೆಳಗಿದರು. ಆದರೆ ನಮಗೆ ದೊರೆತ ೫೫ ರಿಂದ ೫೮ರ ವರೆಗಿನ ಪೀಠಾಧಿಪತಿಗಳು ಯಾವುದೆ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿದ್ದು ಮಾಹಿತಿ ದೊರೆತಿಲ್ಲ ಬದಲಾಗಿ ಅವರೂ ತಮ್ಮ ಹಿಂದಿನ ಗುರುಗಳಂತೆಯೇ ಆತ್ಮೋದ್ಧಾರದೊಂದಿಗೆ ಜನಮಾನಸದಲ್ಲಿ ಧರ್ಮಜಾಗೃತಿಯನ್ನು ಮಾಡಿದರು.

"ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ"ದ ಸಾಂಸ್ಕೃತಿಕ ಸಾಮಾಜಿಕ ಕಾರ್ಯಗಳೇನೆಂದು ನೋಡಬೇಕಾದರೆ ಪ್ರಸ್ತುತ ೫೯ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಸಾಧನೆಗಳನ್ನು ಅವಲೋಕಿಸುವುದೇ ಆಗಿದೆ.

ಶ್ರೀ.ಷ.ಬ್ರ ಚಂದ್ರಶೇಖರ ಶಿವಾಚಾರ್ಯರು ತಮಗೆ ಶ್ರೀ ಗುರುಶಾಂತೇಶ್ವರ ಹಿರೇಮಠಕ್ಕೆ ಪೀಠಾಧಿಕಾರವನ್ನು ಅನುಗ್ರಹಿಸಿದ ದಿನವೇ ಮನದಲ್ಲಿ ನಿಶ್ಚಯಿಸಿದರು. ಈ ಮಠದ ಪರಂಪರೆಯನ್ನು ಚಾಚು ತಪ್ಪದೆ ಪಾಲಿಸುತ್ತ ಸಮಾಜದ ಎಲ್ಲ ಬಾಂಧವರ ಏಳ್ಗೆಗಾಗಿ ಕಂಕಣಬದ್ಧನಾಗುತ್ತೇನೆ. ಈ ಮಠದ ಭಕ್ತರು, ಸಮಾಜದ ಜನತೆ, ಈ ಚಂದ್ರಶೇಖರ ಶಿವಾಚಾರ್ಯರನ್ನು ಮಹಾತ್ಮರೆಂದು ಭಾವಿಸಿದ್ದಾರೆ. ಮಹಾತ್ಮರ ಜೀವನ ನದಿಯಂತೆ ಸದಾ ಪ್ರವಾಹ ಮಾನವಾಗಿರುತ್ತದೆ. ಪರೋಪಕಾರಕ್ಕಾಗಿ ಚಲಿಸುವ ನದಿ ಎಷ್ಟೇ ಅಡೆ-ತಡೆಗಳು

ಉಂಟಾದರೂ ಲೆಕ್ಕಿಸದೆ ಬೇರೊಂದು ದಾರಿಯನ್ನು ಹುಡುಕಿ ಮುಂದೆ ಸಾಗುವಂತೆ, ಸಾಗುತ್ತೇನೆ. ಇದನ್ನೇ ಸಂಸ್ಕೃತದಲ್ಲಿ "ಪರೋಪಕಾರಾಯ ವಹಂತಿನದ್ಯ" ಎಂಬ ಮಾತನ್ನು ಪಠಿಸುತ್ತೇನೆಂದು ನಿರ್ಧರಿಸಿ, 'ಶ್ರೀ ಗುರುಶಾಂತೇಶ್ವರ ಹಿರೇಮಠ"ದ ಪೂರ್ವದ ಹೆಜ್ಜೆಗಳನ್ನು ಆಂತರಿಕವಾಗಿ ನೋಡತೊಡಗಿದರು. ಸಾವಿರ ವರ್ಷಗಳಿಂದ ಇಲ್ಲಿಯವರೆಗಿನ ಗುರು ಪರಂಪರೆಯ ಆಧ್ಯಾತ್ಮಧಾರೆ, ಬಸವಾದಿ ಶರಣರ ತಾತ್ವಿಕ ಚಿಂತನೆಗಳು ಮನಸ್ಸಿನ ಮೇಲೆ ಅಗಾಧ ಪರಿಣಾಮ ಬೀರಿದವು ಅವರೆಲ್ಲರ ಆತ್ಮೋದ್ಧಾರದ ಸಾಧನೆ ನಿತ್ಯನಿರಂಜನ "ಮಾತು ಮನಂಗಳಿಂದತ್ತತ್ತ ಮೀರಿದ ಸಾತಿಶಯದ ನಿರುಪಾಧಿಕ ನಿರ್ಮಲ ಜ್ಯೋತಿ" ಎಂದು ಭಾವಪರವಶರಾದರು ತಾವು ಆಸೀನರಾದ ಪೀಠದ ಪರಂಪರೆಯನ್ನು ಜೋತಿರ್ಮಯವಾಗಿಸಲು, ದಿವ್ಯ ಪ್ರಭೆಯನ್ನಾಗಿ ಬೆಳಗಿಸಲು ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ, ಶೈಕ್ಷಣಿಕ ಸದ್ಭಾವನೆಯನ್ನು ಕ್ರಿಯಾಜ್ಞಾನ ಸಾಮರಸ್ಯ ಬಲದಿಂದ ಜನಮಾನಸದಲ್ಲಿ ಮೂಡಿಸಬೇಕೆಂಬ ಗಟ್ಟಿ ಭಾವವನ್ನು ಹೊಂದಿದ್ದಾರೆ. ಗುರುವೆಂದರೆ ಬಸವಾದಿ ಶರಣರು ಪ್ರತಿಪಾದಿಸುವಂತೆ "ಶಿವಪಂಥವನರಿವೊಡೆ ಗುರುಪಥವೇ ಮೊದಲು" ಎಂಬುದನ್ನರಿತವರಲ್ಲದೆ "ಮಠಗಳು ಪ್ರಾಚೀನಕಾಲದಿಂದಲೂ ಧರ್ಮದೊಂದಿಗೆ ಕಲೆ, ಸಾಹಿತ್ಯ ಸಂಸ್ಕೃತಿಯ ಉಳಿವಿನೊಂದಿಗೆ ಸಾಮಾಜಿಕ ಕಾರ್ಯಗಳನ್ನು ಮಾಡಿರುವುದನ್ನು ಓದಿದವರು. ಆದ್ದರಿಂದಲೇ "ಮಠಗಳು ವೈಭವದ ಕೇಂದ್ರಗಳಲ್ಲ ಸಮಾಜಸೇವೆಯ ಕೇಂದ್ರಗಳು. ಈ ಕಾರಣಕ್ಕಾಗಿ ಅವುಗಳನ್ನು ಅಡಿವಿಯಲ್ಲಿ ಆಶ್ರಮಗಳನ್ನಾಗಿ ಉಳಿಸಿದರೆ, ಗ್ರಾಮಗಳಲ್ಲಿ ಮಠಗಳನ್ನಾಗಿ ಬೆಳೆಸಿದರು"[6] ಹೀಗೆ ಮಠಗಳ ಮೂಲಕ ಸಮಾಜ ಸಧಾರಣೆಗೆ ಸಂಸ್ಥೆಗಳನ್ನು ಕಟ್ಟಿ ಆಮೂಲಕ ಧಾರ್ಮಿಕ ಕಾರ್ಯದೊಂದಿಗೆ ಸಮಾಜ ಕಾರ್ಯಗಳನ್ನು ಮಾಡಬಹುದೆಂಬುದನ್ನು ತಿಳಿದವರು.

ಮೂಲತಃ ಮಠಗಳು ಧಾರ್ಮಿಕ ಕೇಂದ್ರಗಳು. ವಿದ್ಯಾರ್ಥಿಗಳಿಗೆ, ದಾರ್ಮಿಕ ಶಿಕ್ಷಣವನ್ನು ನೀಡುತ್ತಾ ಧರ್ಮ ಜಾಗೃತಿನ್ನು ಮಾಡಿರುವುದು ತಿಳಿದು ಬರುತ್ತದೆ. ಎಲ್ಲ ಮಠಗಳು ಒಂದೇ

ರೀತಿಯ ಸಾಧನೆ ಮಾಡದಿರಬಹುದು ಆದರೆ ಕೆಲವು ಮಠಗಳು ಇತ್ತೀಚ್ಚಿಗೆ ಧರ್ಮ, ಸಮಾಜ, ಶಿಕ್ಷಣ–ಸಂಸ್ಥೆ ನಾಡು–ನುಡಿ ಹೀಗೆ ಮಠದ ಹರಹನ್ನು ಹೆಚ್ಚಿಸಿಕೊಂಡಿವೆ. "ಅಡಿವಿಯಲ್ಲಿ ಆಶ್ರಮ ಬೇರೆ, ಊರಲ್ಲಿಯ ಮಠ ಬೇರೆ, ಒಂದು ಗುರಿ ಆತ್ಮ ಕಲ್ಯಾಣ, ಇನ್ನೊಂದು ಗುರಿ ಆತ್ಮ ಕಲ್ಯಾಣದೊಂದಿಗೆ ಸಮಾಜ ಕಲ್ಯಾಣ. ಹೀಗಾಗಿ ಮಠವೆನ್ನುವುದು ಧರ್ಮದೊಂದಿಗೆ ಸಮಾಜದ ಆರೋಗ್ಯಕ್ಕೆ ಅವಶ್ಯವಿರುವ ಶಿಕ್ಷಣ ಪ್ರಸಾರ, ಸಾಹಿತ್ಯ ಸೃಷ್ಠಿ, ನ್ಯಾಯ ಪರಿಪಾಲನೆ ಔಷದೋಪಚಾರ, ವೃತ್ತಿ ವ್ಯವಸ್ಥೆ, ಕಲಾಪೋಷಣೆ, ಸಂಸ್ಕೃತಿಯ ಸಂವರ್ಧನೆ ಇತ್ಯಾದಿ ಚಟುವಟಿಕೆಗಳಿಗೆ ಚ್ಯುತಿಬಾರದಂತೆ ನೋಡಿಕೊಳ್ಳುವ ಒಂದು ಸಾಮಾಜಿಕ ಸಂಸ್ಥೆ"[೨] ಎಂಬುವುದನ್ನರಿತ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾರ್ಯರು ಮಠದೊಳಗೆ ಕುಳಿತು ಕೇವಲ ಪೂಜೆ, ಪುರಾಣ, ಅಡ್ಡಪಲ್ಲಕ್ಕಿ, ಪಾದಪೂಜೆಗೆ ಮಾತ್ರ ತಮ್ಮನ್ನು ಸೀಮಿತಗೊಳಿಸಿಕೊಳ್ಳಲಾರದೆ ನಾಡು–ನುಡಿ, ಜನ–ಮನ, ಧಾರ್ಮಿಕ–ಅಧ್ಯಾತ್ಮಿಕ, ಭಕ್ತಿ, ಕಾಯಕ ದಾಸೋಹದತ್ತ ಸಂಪೂರ್ಣ ತಮ್ಮನ್ನು ಅರ್ಪಿಸಿಕೊಂಡರು. ನಿಜಗುಣ ಶಿವಯೋಗಿಗಳ ವಚನದ ಪ್ರಭಾವಕ್ಕೊಳಗಾದರು. "ಕಾಯಕಾಂತಾರವ ಮಾಡಿ ಮಾಯಮೋಹದ ಮೃಗಗಳ ಬೇಟೆಯಾಡಿ ಶರೀರವೆಂದೆಂಬುವ ಹೊಲವನ್ನ ಹಸನ ಮಾಡಿ ಪರತತ್ವ ಬೆಳೆಯನೆ ಬೆಳೆದುಣ್ಣಿರೊ" ಎಂಬ ಮಾತು ಮಠದ ಪೀಠದ ಮೇಲೆ ಕುಳಿತರೆ ಯಾರು ದೊಡ್ಡವರೆಂದೆನಿಸಿಕೊಳ್ಳುವುದಿಲ್ಲವೆಂಬುವುದನ್ನು ತಮ್ಮ ಮನಕ್ಕೆ ಗಟ್ಟಿಗೊಳಿಸಿದರು. ಇಂತಹ ನಿರ್ಣಯವನ್ನು ಕೈಕೊಂಡ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಸಾಧನೆಯ ಹಾದಿಯನ್ನು ಈ ಕೆಳಗಿನಂತೆ ವಿಂಗಡಿಸಬಹುದು.

೧. **ಸಾಂಸ್ಕೃತಿಕ ಸೇವೆ**

೨. **ಸಾಮಾಜಿಕ ಕಾರ್ಯಗಳು**

ಸಾಮಾಜಿಕ ಕಾರ್ಯಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

i) ಧರ್ಮ ಜಾಗೃತಿ

ii) ಸಮಾಜ ಜಾಗೃತಿ

iii) ಸಮಾಜ ಸೇವೆ

iv) ಶಿಕ್ಷಣ, ಸಾಹಿತ್ಯ-ನಾಡು ನುಡಿ ಚಿಂತನ

v) ಅಕ್ಷರ, ಅನ್ನ ದಾಸೋಹ

vi) ಪ್ರಶಸ್ತಿಗಳು

- ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಪಡೆದ ಪ್ರಶಸ್ತಿಗಳು ಮತ್ತು ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಿಂದ ಕೊಡುವ ಪ್ರಶಸ್ತಿಗಳು.

೧ ಸಂಸ್ಕೃತಿಕ ಸೇವೆ :

'ಸಂಸ್ಕೃತಿ' ಎನ್ನವುದು ಒಂದು ಜನಾಂಗದ ಆಚಾರ-ವಿಚಾರ, ಊಟ, ಅಡುಗೆ ತೊಡುಗೆ, ಹಬ್ಬ-ಹರಿದಿನಗಳನ್ನೆಲ್ಲ ಒಳಗೊಂಡಿರುತ್ತಸೆ. ಆ ವ್ಯಕ್ತಿ ಮಾತನಾಡುವ ಮಾತು, ನಡೆ-ನುಡಿಗಳೆಲ್ಲ ಸಂಸ್ಕೃತಿಯನ್ನವಲಂಬಿಸಿದೆ. ಮನುಷ್ಯ ಉತ್ಸವ ಪ್ರೀಯನು. ಕಾಳಿದಾಸನು ಇದೇ ಮಾತನ್ನೂ ಹೀಗೆ ಹೇಳಿದ್ದಾನೆ. "ಉತ್ಸವಪ್ರಿಯಾಹಿ ಮಾನವ" ಎಂದು ಮುನುಷ್ಯ ತನ್ನ ಸಂತೋಷಕ್ಕಾಗಿ, ಮನದ ದುಃಖವನ್ನು ಕಳೆದುಕೊಳ್ಳುವುದಕ್ಕಾಗಿ ದೇವರನ್ನು ಆರಾಧಿಸತೊಡಗಿದನು. ಆರಾಧನೆ ಕೇವಲ ಧ್ಯಾನವಾಗಿರಲಿಲ್ಲ ಅವನನ್ನು ತನ್ನಂತೆ ಸೃಷ್ಠಿಸಿ, ಅಲಂಕರಿಸಿದ, ತಾನು ತಿನ್ನುವ ಆಹಾರವನ್ನೆ ಮೀಸಲಿಟ್ಟು ಎಡೆ ಹಿಡಿದು ಆರಾಧಿಸಿದ. ತನ್ನ ಅನುಕೂಲಕ್ಕಾಗಿ ಮಾಡಿದ ಪೂಜೆ ಆರಾಧನೆಗಳೆಲ್ಲ ಕಾಲಾನುಕ್ರಮದಲ್ಲಿ ಧರ್ಮವಾಗಿ ಸೂತ್ರಕ್ಕೊಳಪಟ್ಟು, ಅಲ್ಲಿ ರೂಪಿಸಿದ ಎಲ್ಲ ಆಚಾರ-ವಿಚಾರಗಳು ಆರಾಧನೆಗಳು ಅದಕ್ಕಾಗಿ ಸಿದ್ಧಪಡಿಸುವ ಸಲಕರಣೆಗಳೆಲ್ಲ ಧಾರ್ಮಿಕ ಆಚರಣೆಗಳಾದವು. ಅಲ್ಲಿ ಬಳಸಿದ ಭಾಷೆ, ಸಂಜ್ಞೆಗಳೆಲ್ಲ ಸಂಸ್ಕೃತಿಯ ಸೂತ್ರಕ್ಕೆ ಸೇರಿದವು. ಹೀಗೆ ಹುಟ್ಟಿಕೊಂಡ ಧಾರ್ಮಿಕ ಆಚರಣೆಗಳು

ಹಬ್ಬ-ಹರಿದಿನಗಳು, ಜಾತ್ರೆ ಉತ್ಸವಗಳಾಗಿ ಶಿಸ್ತಿಗೊಳಪಟ್ಟವು. ಕಾಲಾನುಕ್ರಮದಲ್ಲಿ ಇವುಗಳೆಲ್ಲ ಉಸಿರಿನಲ್ಲಿ ಬೆರೆತುಕೊಂಡವು

ನಮ್ಮ ದೇಶ ಹಲವು ಧರ್ಮ, ಜಾತಿಗಳನ್ನೊಳಗೊಂಡು ವೈವಿಧ್ಯಮಯವಾಗಿದೆ. ಹಲವು ಭಾಷೆ, ಹಲವು ಧರ್ಮ, ಹಲವು ರೀತಿಯ ಸಂಸ್ಕೃತಿಯನ್ನು ಹೊಂದಿ ಏಕತೆಯನ್ನೇ ಪಾಲಿಸುವಂತಹುದು ಹೀಗಾಗಿ ಆಯಾ ಭಾಷೆ ಆಯಾ ಧರ್ಮದ ಜನಾಂಗ ತಮ್ಮ ಪರಂಪರೆಯ ಉಳಿವು, ಧಾರ್ಮಿಕ ಸದ್ಭಾವ, ತಾವು ನಂಬಿರುವ ದೇವರಲ್ಲಿ ಅಚಲವಾದ ವಿಶ್ವಾಸವನ್ನಿಟ್ಟು ಅವುಗಳನ್ನೆಲ್ಲ ಕಾಪಾಡಿಕೊಂಡು ಬರುವ ಜವಾಬ್ದಾರಿಯನ್ನು ಎಷ್ಟೇ ನಾಗರಿಕತೆಯಲ್ಲಿ ಮುಂದುವರೆದರೂ ಬಿಟ್ಟಿಲ್ಲವೆಂಬುದು ಹೆಮ್ಮೆಯ ವಿಷಯ. ಹೀಗೆ ಆಚರಿಸುತ್ತ ಬಂದಿರುವ ಹಬ್ಬ-ಹರಿದಿನಗಳಿಗೆ ನಮ್ಮ ಜನ 'ಐತಿಹಾಸಿಕ' ಮತ್ತು 'ಪೌರಾಣಿಕ' ಎಂದು ವಿಂಗಡಿಸಿರುತ್ತಾರೆ. ಐತಿಹಾಸಿಕವೆಂದರೆ ರಾಜಾಧಿಪತ್ಯದ ಸಂದರ್ಭದಲ್ಲಿ ಆಚರಣೆಯಲ್ಲಿದ್ದ ಹಬ್ಬ ಹರಿದಿನಗಳು, ಆಯಾಕಾಲದ ಅರಸರ ಆಳ್ವಿಕೆಯಲ್ಲಿ ಚಲಾವಣೆಯಲ್ಲಿದ್ದ ರೂಢಿ, ಸಂಪ್ರದಾಯ, ನಂಬಿಕೆ, ಧರ್ಮಗಳನ್ನು ಅವಲಂಬಿಸಿ ಅಸ್ತಿತ್ವದಲ್ಲಿ ಬಂದವುಗಳು ಇಂದಿಗೂ ಆಚರಣೆಯಲ್ಲಿ ಉಳಿದಿವೆ.

ಪೌರಾಣಿಕ ಹಿನ್ನಲೆಯನ್ನೊಳಗೊಂಡ ಹಬ್ಬ-ಹರಿದಿನಗಳಿಗೆ ಇತಿಹಾಸಕ್ಕಿಂತ ಪೂರ್ವಕ್ಕೆ ನಮ್ಮನ್ನು ಎಳೆದೊಯ್ಯುತ್ತವೆ. ಶಾಸ್ತ್ರ-ಪುರಾಣ, ವೇದ-ಉಪನಿಷತ್ತು ಕಾಲಕ್ಕಿಂತ ಮೊದಲು ದ್ವಾಪಾರಯುಗಕ್ಕೆ ಕೊಂಡೊಯ್ಯುತ್ತವೆ. ಅಲ್ಲಿ ದೇವ ಮತ್ತು ದಾನವ ಎಂಬ ಎರಡೇ ಪಂಗಡಗಳು ಇದ್ದವು. ಅವರ ಬದುಕಿನ ರೀತಿ-ನೀತಿಗಳೇ ಧರ್ಮಾಧರ್ಮಗಳೆಂದು ಗುರುತಿಸಲ್ಪಟ್ಟವು.

ಹೀಗೆ ನಡೆದು ಬಂದ ವ್ಯವಸ್ಥೆಯಲ್ಲಿ ಹಬ್ಬ-ಹರಿದಿನಗಳನ್ನು ಪೌರಾಣಿಕ, ಐತಿಹಾಸಿಕ, ಧಾರ್ಮಿಕ, ಹಬ್ಬಗಳೆಂದು ವಿಂಗಡಿಸಲಾಗುತ್ತಿವೆ. ಇವುಗಳಲ್ಲೆಲ್ಲ ಅಭಿವ್ಯಕ್ತವಾಗುವುದು ನಮ್ಮವರ ಸಂಸ್ಕೃತಿಯೇ. ಇಂಥ ಹಬ್ಬ-ಹರಿದಿನಗಳಲ್ಲಿ ತತ್ವಬದ್ಧ ವೈಶಿಷ್ಟ್ಯವಿದೆ. ಶ್ರದ್ದೆ ನಿಷ್ಠೆಗಳ ನಂಬುಗೆಯೊಂದಿಗೆ ಆಚರಣೆಗಳಿವೆ.

ಕನ್ನಡ ನಾಡಿನಲ್ಲಿ ಹಲವು ವಿಶಿಷ್ಟ ಹಬ್ಬಗಳಿವೆ. ಅವುಗಳಿಗೆಲ್ಲ ಪೌರಾಣಿಕ ಮತ್ತು ಐತಿಹಾಸಿಕ ಹಿನ್ನಲೆಗಳಿವೆ. ಪ್ರಸ್ತುತ ಹುಕ್ಕೇರಿ 'ಶ್ರೀ ಗುರು ಶಾಂತೇಶ್ವರ ಹಿರೇಮಠ'ದ ಸಾಂಸ್ಕೃತಿಕ ಆಚರಣೆಗಳು 'ದಸರಾ' ಉತ್ಸವ ಬಹುಮುಖ್ಯವಾದುದ್ದು ಮತ್ತು ವಿಶಿಷ್ಟವಾದದ್ದು. ಕರ್ನಾಟಕದಲ್ಲಿ 'ದಸರಾ' ಉತ್ಸವಕ್ಕೆ ವಿಶಿಷ್ಟತೆ ಇದೆ. ಈ ಹಬ್ಬವನ್ನು ಐತಿಹಾಸಿಕ ಮತ್ತು ಪೌರಾಣಿಕವೆಂದು ವಿಭಾಗಿಸಿ ಮಹತ್ವಪೂರ್ಣ ಸನ್ನಿವೇಶಗಳನ್ನು ಗುರುತಿಸುತ್ತಾರೆ.

ಐತಿಹಾಸಿಕ ದಸರಾ ಉತ್ಸವ :

ನಮ್ಮ ದೇಶ ಪ್ರಾಚೀನ ಕಾಲದಿಂದಲೂ ಸರ್ವಧರ್ಮ ಸಮನ್ವಯತೆಯನ್ನು ಹೊಂದಿ, ಸಾಮಾಜಿಕ ಸಾಹಿತ್ಯ-ಸಂಗೀತ ಕಲೆಯನ್ನು ವಿಸ್ತೃತಗೊಳಿಸುತ್ತ, ಆರಾಧಿಸುತ್ತ ವಿಶಿಷ್ಠ ರಾಜಪರಂಪರೆಯನ್ನು ಹೊಂದಿರುವುದಂತಹದ್ದು. ಕರ್ನಾಟಕದಲ್ಲಿ ವಿಜಯನಗರದ ಅರಸರ ಕಾಲದಿಂದ ದಸರಾ ಉತ್ಸವ ಆಚರಣೆಯಲ್ಲಿ ಬಂದಿದೆ. ಅರಸರು ತಮ್ಮ ವಿಜಯದ ಸಂಕೇತವಾಗಿ "ವಿಜಯದಶಮಿ" ಎಂದು ಆಚರಸುತ್ತಿದ್ದರು. ಆ ಸಂದರ್ಭದಲ್ಲಿ ಸಾಮಂತರು, ಮಂಡಲಾಧಿಪತಿಗಳು, ದಂಡನಾಯಕರು ತಮ್ಮ ಸೈನ್ಯದೊಡನೆ ರಾಜಧಾನಿಗೆ ಬಂದು ಅರಸರಿಗೆ ಸೈನ್ಯ ಪ್ರದರ್ಶನ ಮಾಡಿ ಕಪ್ಪು ಕಾಣಿಕೆಯನ್ನು ಅರ್ಪಿಸುತ್ತಿದ್ದರು. ಇದನ್ನು ನೋಡಲೆಂದು ಒಂದು ದೊಡ್ಡ ಮಂಟಪವಿತ್ತು. ಅದನ್ನೇ "ಮಹಾನವಮಿ", "ವಿಜಯದಶಮಿ" ಎಂದು ಕರೆದರು. ನವರಾತ್ರಿಯ ಒಂಭತ್ತು ದಿನಗಳು ಆ ಪ್ರದೇಶದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಾದ ನೃತ್ಯ, ಗಾಯನ, ಅಭಿನಯದೊಂದಿಗೆ ಸುಂದರವಾಗಿ ಅಲಂಕೃತವಾದ ಆನೆ, ಕುದುರೆಗಳ ಪ್ರದರ್ಶನವಾಗುತ್ತಿತ್ತು. ಅಲ್ಲಿ ಅರಸರನ್ನೊಳಗೊಂಡು ಸಾಮಂತರು, ಅಧಿಕಾರಿಗಳು ಇರುತ್ತಿದ್ದರು, ರಾಣಿ ವಾಸದವರು ಅಲಂಕೃತರಾಗಿ ಚಿನ್ನದ ಕಳಶ ಹೊತ್ತು ಪ್ರದರ್ಶನ ನೀಡುತ್ತಿದ್ದರು. ಹೀಗೆ ವಿವಿಧ ವಿಜ್ರಂಭಣೆಯ ಪ್ರದರ್ಶನಗಳಿರುತ್ತಿದ್ದವು. ಮಲ್ಲ ಯುದ್ಧ ನಡೆಯುತ್ತಿದ್ದವು. ಹೀಗೆ ವಿಜಯನಗರದ ಅರಸರ ಕಾಲಕ್ಕೆ 'ದಸರಾ' ಚಲಾವಣೆಯಲ್ಲಿ ಬಂದಿತು.

ಕಾಲಾಂತರದಲ್ಲಿ ವಿಜನಗರದ ಅರಸರ 'ದಸರಾ' ಆಚರಣೆಯನ್ನು ಮೈಸೂರು ಅರಸರು ಅನುಸರಿಸಿಕೊಂಡು ಬಂದರು. ಇಂದಿಗೂ ಮೈಸೂರು 'ದಸರಾ' ಉತ್ಸವವು ವಿಶ್ವವ್ಯಾಪಿಯಾಗಿದೆ. ಮೈಸೂರು ಅರಸರು 'ದಸರಾ' ಆಚರಣೆಯಲ್ಲಿ ತಮ್ಮದೇ ಆದ ಬದಲಾವಣೆಗಳನ್ನು ತಂದರು. ನವರಾತ್ರಿಯ ಒಂಬತ್ತು ದಿನಗಳು ಅರಮನೆ, ಗುರುಮನೆ, ದೇವಲಯಗಳಲ್ಲಿ ಪೂಜೆಯು ನಡೆಯತೊಡಗಿದವು. ದರ್ಬಾರು ವಿಶೇಷವಾಗಿರುತ್ತಿತ್ತು. ಅರಮನೆಯ ಮುಂಭಾಗದಲ್ಲಿ ಆನೆ, ಕುದುರೆಗಳ ಮೆರವಣಿಗೆ, ಕಾಲ್ದಳಗಳ ಕವಾಯಿತ ನಡೆಯುತ್ತಿದ್ದವು. ಮಲ್ಲಯುದ್ದಗಳು ನಡೆಯುತ್ತಿದ್ದವು. ಇಂದಿಗೂ ಈ ಸಂಪ್ರದಾಯ ಮುಂದುವರೆದು ವಿಜಯದಶಮಿಯಂದು ಮಹರಾಜರು ಆನೆಯ ಮೇಲಿನ ಅಂಬಾರಿಯಲ್ಲಿ ಕುಳಿತು ಬಂದು ಬನ್ನಿ ಮಂಟಪಕ್ಕೆ ಪೂಜೆಸಲ್ಲಿಸುವ ವಿಧಿ–ವಿಧಾನಗಳು ವಿಜ್ರಂಭಣೆಯಿಂದ ನಡೆಯುತ್ತವೆ.

ಕರ್ನಾಟಕದ ನಾಡ ಹಬ್ಬವಾಗಿ 'ದಸರಾ' ಆಚರಿಸಲ್ಪಡುತ್ತದೆ. ಇಂದಿನ ಸಾಮಾಜಿಕ ವ್ಯವಸ್ಥೆಗೆ ತಕ್ಕಂತೆ ಮೆರವಣಿಗೆಯಲ್ಲಿ ಕನ್ನಡ ನಾಡಿನ ಸಾಂಸ್ಕೃತಿಕ ಸನ್ನಿವೇಶಗಳೆಲ್ಲ ಪ್ರದರ್ಶಿಸಲ್ಪಡುತ್ತವೆ. ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳಿದ್ದು ಅವುಗಳಲ್ಲಿ ವಿಜಯ ಪಡೆದವರಿಗೆ ಬಹುಮಾನ ಕೊಟ್ಟು ಸತ್ಕರಿಸಲಾಗುತ್ತದೆ. ಇದು ಐತಿಹಾಸಿಕ ಸಂಸ್ಕೃತಿಯನ್ನೊಳಗೊಂಡ 'ದಸರಾ' ಉತ್ಸವವಾಗಿದೆ.

- **ಪೌರಾಣಿಕ ದಸರಾ ಉತ್ಸವ :**

ದ್ವಾಪರ ಯುಗಕ್ಕೆ ಪೌರಾಣಿಕ 'ದಸರಾ' ಉತ್ಸವ ನಮ್ಮನ್ನು ಕರೆದೊಯ್ಯುತ್ತವೆ. ಬಲಾಢ್ಯರಾದ ಅಸುರರು ಸುರರನ್ನು ಆಗಾಗ ಹಿಂಸಿಸುವ ಪ್ರಸಂಗ, ಇದರಿಂದ ಭಯಗೊಂಡ ಸುರರು ಶಕ್ತಿಯನ್ನು ಮೊರೆಹೊಕ್ಕಾಗ ಆಕೆ ರುದ್ರಾವತಾರವನ್ನು ತಾಳಿ ಮಹಿಷಾಸುರ, ಚಂಡ–ಮುಂಡ, ರಕ್ತಬೀಜರನ್ನು ಸಂಹರಿಸಿ ಸಿಂಹಿಣಿಯಾಗಿ ಮರೆದಳು. ದುಷ್ಟ ಶಿಕ್ಷಕಳು ಶಿಷ್ಟ ರಕ್ಷಕಳು ಆಗಿ ಅಸುರರಿಂದ ಸುರರನ್ನು ರಕ್ಷಿಸಿದ ಆದಿಶಕ್ತಿ. ಪುನೀತರಾದ ದೇವತೆಗಳೆಲ್ಲ ಆದಿ ಶಕ್ತಿಯನ್ನು

ಪರಾಯೇ, ಪರಾಶಕ್ತಿ, ಬಹ್ಮೇ, ಲಕ್ಷ್ಮೀ, ಪಾರ್ವತಿ, ಉಮೆ, ಮಹಿಷಮರ್ಧಿನಿ ಶಿವಶಕ್ತಿ ಎಂದು ಕೊಂಡಾಡಿದ್ದಾರೆ. ಈ ಪೌರಾಣಿಕ ಹಿನ್ನಲೆಯೆಲ್ಲ ವೇದ ಆಗಮಗಳಿಂದ ಆಚರಣೆಯಲ್ಲಿ ಬಂದಿದೆ. ಆದರೆ ನಾವಿಂದು ತಿಳಿಯಲು ಹೊರಟಿರುವದು "ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ"ದಲ್ಲಿ ಪಾಲಿಸಿಕೊಂಡು ಬಂದಿರುವ, ನಮ್ಮ ಸಂಸ್ಕೃತಿಕ ಪರಂಪರೆಯಾದ 'ದಸರಾ' ಉತ್ಸವ.

- **"ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ ಮತ್ತು ದಸರಾ ಉತ್ಸವ"** : ಇಂದಿನ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರೇ ಈ ಸಾಂಸ್ಕೃತಿಕ ಸಂಪ್ರದಾಯವನ್ನು ಆಚರಣೆಯಲ್ಲಿ ತಂದವರು. ಶಿವಾಚಾರ್ಯರು ಮೈಸೂರಿನಲ್ಲಿ ಅಭ್ಯಾಸ ಮಾಡುತ್ತಿರುವಾಗ ಮೈಸೂರಿನ ಅರಮನೆಯಲ್ಲಿ ಆಚರಿಸುತ್ತಿರುವ 'ದಸರಾಹಬ್ಬ' ಅವರ ಕಣ್ಮನ ಸೆಳೆಯಿತು. ಅಂದು ಅನುಭವಿಸಿದ ಆನಂದ ಇಂದು ಅವರು ಗಡಿಭಾಗದ ಜನರಿಗೆ ಹಂಚುತ್ತಿದ್ದಾರೆ. ಶಿವಾಚರ್ಯರು ತಮ್ಮ ಪೂರ್ವಾಶ್ರಮದಿಂದಲೂ ಭಾರತೀಯ ಪರಂಪರೆಯ ಆರಾಧಕರು. ನಮ್ಮ ಧಾರ್ಮಿಕ, ಸಾಂಸ್ಕೃತಿಕ ಪರಂಪರೆ ಜನರಲ್ಲಿ ಉಳಿಯಬೇಕು. ಎಂಬ ಮಹದಾಸೆಯುಳ್ಳವರು. ಗಡಿಭಾಗದಲ್ಲಿ ಕನ್ನಡ ಸಂಸ್ಕೃತಿಯನ್ನುಳಿಸುವ ಯೋಜನೆಯಲ್ಲಿ ಸಾಮಾಜಿಕ ಕಳಕಳಿಯುಳ್ಳ ಶಿವಾಚಾರ್ಯರು ದಸರಾ ಉತ್ಸವಕ್ಕೊಂದು ಹೊಸ ಆಯಾಮವನ್ನು ಕೊಟ್ಟಿದ್ದಾರೆ. ವೈಚಾರಿಕ ನೆಲೆಯಲ್ಲಿ ಕರ್ನಾಟಕದ ಸಂಸ್ಕೃತಿಯ ಉಳಿವಿಗಾಗಿ ವಿವಿಧ ಆಯಾಮಗಳನ್ನು ರೂಪಿಸಿದ್ದಾರೆ. ಸಮಕಾಲೀನ ಜನರ ಮಾನಸಿಕ ತೊಳಲಾಟವನ್ನು ಅರಿತ ಶಿವಾಚಾರ್ಯರು 'ದಸರಾ' ಉತ್ಸವದಲ್ಲಿ ನವರಾತ್ರಿಯ ಒಂಬತ್ತು ದಿನಗಳನ್ನು ವಿಶೇಷವಾಗಿ ಆಚರಿಸುತ್ತಿದ್ದಾರೆ.

೧) **ಯುವ ದಸರಾ** : ಆಧುನಿಕತೆಗೆ ಒಳಗಾದ ಯುವಕರು ಹಲವಾರು ದುಶ್ಚಟಗಳಿಗೆ ಬಲಿಯಾಗಿ ತಮ್ಮ ಅಂತಃಶಕ್ತಿಯನ್ನೇ ಕಳೆದುಕೊಳ್ಳುವಂತಹ ಸಂದರ್ಭದಲ್ಲಿ 'ಯುವ

ದಸರಾ' ಆಚರಿಸಿ ಯುವ ಶಕ್ತಿಗೆ ಭಾವೈಕ್ಯತೆಯ ಪರಿಚಯ ಮಾಡಿಕೊಳ್ಳುವಂತಹ ಉಪನ್ಯಾಸಗಳನ್ನು ಏರ್ಪಡಿಸಿ ಸಮಾಜದಲ್ಲಿ ಸತ್ಪ್ರಜೆಯಾಗಿ ನೈತಿಕ ಮೌಲ್ಯಗಳನ್ನು ಉಳಿಸಿಕೊಂಡು ಬರುವಂತೆ ಪ್ರೋತ್ಸಾಹಿಸುತ್ತ ಯಾವುದಾದರೂ ಮಹತ್ವದ ಸಾಧನೆ ಮಾಡಿದ ಯುವಕರಿಗೆ ಸನ್ಮಾನ ಮತ್ತು ಪ್ರಶಸ್ತಿಗಳನ್ನು ನೀಡಿ ಈ ಮುಖಾಂತರ ಯುವ ಶಕ್ತಿಯ ಜಾಗೃತಿ ಮಾಡುತ್ತಿರುವುದು ಶ್ಲಾಘನೀಯ.

೨) **ಮಹಿಳಾ ದಸರಾ** : ಪೌರಾಣಿಕವಾಗಿ 'ದಸರಾ' ಹಬ್ಬದ ಆಚರಣೆಯಲ್ಲೆ ಮಹಿಳಾ ಶಕ್ತಿಯ ಆರಾಧನೆ. ಆದರೆ ಸ್ತ್ರೀಶಕ್ತಿಯನ್ನು ಹೇಗಾದರೂ ಮಾಡಿ ದಮನಗೊಳಿಸಲೆಂದೇ ಸಮಾಜದಲ್ಲಿ ಅನಿಷ್ಠ ಪದ್ದತಿಗಳು, ಅರ್ಥವಿಲ್ಲದ ರೂಢಿ ಸಂಪ್ರದಾಯಗಳನ್ನು ಅವಳ ಮೇಲೆ ಹೇರಿ ಅವಳನ್ನು ಪಶುವಿನಂತೆ, ವಸ್ತುವಿನಂತೆ ನಡೆಸಿಕೊಳ್ಳುವ ವ್ಯವಸ್ಥೆಯಲ್ಲಿ ಆಕೆಯನ್ನು ಜಾಗೃತಗೊಳಿಸುವದಕ್ಕಾಗಿಯೇ ಮಹಿಳಾ ದಸರಾ ಆಚರಣೆ ಮಾಡಲಾಗುತ್ತದೆ. ಮಹಿಳೆಯರಿಂದಲೇ ಪ್ರದರ್ಶನಗಳನ್ನು ಮಾಡಿಸಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಿಗೆ ಪ್ರಶಸ್ತಿ ನೀಡಿ ಗೌರವಿಸುವ ಕೆಲಸ ಸ್ಮರಣೀಯ.

೩) **ಕೃಷಿ ದಸರಾ :** ನಮ್ಮ ದೇಶ ಕೃಷಿ ಪ್ರಧಾನವಾದುದು. ಕೃಷಿಯಿಂದಲೇ ನಾವು ಬೆಳೆಯಲು ಸಾಧ್ಯ. ಪಾಶ್ಚಿಮಾತ್ಯರ ಪ್ರಭಾವದಿಂದ ಕೃಷಿಯಲ್ಲಿ ಬಳಸುವ ರಾಸಾಯನಿಕ ಗೊಬ್ಬರವನ್ನು ಬಿಟ್ಟು ಸಾವಯವ ಗೊಬ್ಬರವನ್ನು ಬಳಸಿ ಭೂಮಿಯ ಸತ್ವವನ್ನು ಉಳಿಸಿರಿ ಎಂಬ ತಿಳುವಳಿಕೆಯನ್ನು ನೀಡುವಂತಹ ಉಪನ್ಯಾಸಗಳನ್ನೇರ್ಪಡಿಸಿ ಮತ್ತು ಕೃಷಿಗೆ ಬಳಸುವ ಸಾಮಾಗ್ರಿ ಪ್ರದರ್ಶಿಸುವುದಲ್ಲದೇ ಆ ನಿಟ್ಟಿನಲ್ಲಿ ಸಾಧನೆ ಮಾಡಿದವರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸುವುದು ಈಡೀ ವ್ಯವಸ್ಥೆಯನ್ನೇ ಎಚ್ಚರಿಸುವ ಕೆಲಸವಾಗಿದೆ.

೪) **ಮಕ್ಕಳ ದಸರಾ** : 'ನಾಡಿನ ಸಂಪತ್ತೇ ಮಕ್ಕಳು'. ನಾಳಿನ ನಾಡನ್ನು ಆಳುವ ನಾಗರೀಕರನ್ನು ಅಂದು ಗೌರವಿಸಲಾಗುತ್ತದೆ. ಅವರಲ್ಲಿರುವ ಪ್ರತಿಭೆಯ ಪ್ರದರ್ಶನ ನಡೆದು ಬಹುಮಾನ ವಿತರಿಸಿ ಪ್ರೇರೆಪಿಸುತ್ತಾರೆ.

೫) **ಶೈಕ್ಷಣಿಕ ದಸರಾ** : "ವಿದ್ಯೆಯುಳ್ಳವನ ಮುಖವು ಮುದ್ದು ಬರುವಂತಿಕ್ಕು ವಿದ್ಯೆ ಇಲ್ಲದವನ ಮುಖವು ಹಾಳೂರು ಹದ್ದಿನಂತಿಕ್ಕು ಸರ್ವಜ್ಞ" ಎಂಬಂತೆ ಶಿಕ್ಷಣವು ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡುತ್ತದೆ. ಅಂಥ ಶಿಕ್ಷಣ ಕುರಿತು ಜನರಲ್ಲಿ ಜಾಗೃತಿ ಮೂಡಿಸುವುದೇ 'ಶೈಕ್ಷಣಿಕ ದಸರಾ'ದ ಕೆಲಸವಾಗಿದೆ. ಶಿಕ್ಷಣದಲ್ಲಿ ಸಾಧನೆ ಮಾಡಿದವರಿಗೆ ಪುರಸ್ಕರಿಸಿ ಹಾರೈಸುತ್ತಾರೆ.

೬) **ಭಾವೈಕ್ಯ ದಸರಾ** : ಇಂದು ಜನಸಾಮಾನ್ಯರಲ್ಲಿ ಭಾವೈಕ್ಯತೆ ಮರೆಯಾಗುತ್ತಿದೆ. ನಾವು ನಮ್ಮವರು. ನಮ್ಮ ನಾಡು–ನುಡಿ, ಸಂಸ್ಕೃತಿ ದೇಶದ ಅಭಿಮಾನಿಗಳನ್ನು ಮೂಡಿಸುವಂತಹ ಮತ್ತು ಎಲ್ಲ ಧರ್ಮಿಯರಿಂದ ಉಪನ್ಯಾಸಗಳನ್ನು ಏರ್ಪಡಿಸಿ ಜನರಲ್ಲಿ ಭಾವೈಕ್ಯತೆಯನ್ನು ಮೂಡಿಸುವ ಪ್ರಯತ್ನವಾಗಿದೆ.

೭) **ಆಧ್ಯಾತ್ಮ ದಸರಾ** : ಜನ್ಮದ ಮೂಲ ಉದ್ದೇಶವೆನೆಂಬುದನ್ನು ಮನುಷ್ಯ ಸಾಂಸಾರಿಕ ತೊಳಲಾಟಗಳಲ್ಲಿ ಸಿಲುಕಿ ಮರೆತು ಬಿಡುತ್ತಾನೆ. ಆದರೆ ಅದರಿಂದ ಭವಬಂಧನದಿಂದ ಬಿಡುಗಡೆಯಾಗಲು ಸಾಧ್ಯವಿಲ್ಲವಾದ್ದರಿಂದ ಮನುಷ್ಯ ಸಂಸಾರದೊಂದಿಗೆ ಆಧ್ಯಾತ್ಮ ಸಾಧನೆಯನ್ನು ಮಾಡಿ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬೇಕೆಂಬ ಉದ್ದೇಶದಿಂದ ಅಂದು ಅನೇಕ ಸಾಧು ಸತ್ಪುರುಷರ ಮುಖಾಂತರ ವಿಶೇಷ ಆಧ್ಯಾತ್ಮ ಉಪನ್ಯಾಸ ಏರ್ಪಡಿಸಲಾಗುತ್ತದೆ.

೮) **ಗ್ರಾಮೀಣ ದಸರಾ** : ಇಂದು ಗ್ರಾಮಗಳಲ್ಲೆಲ್ಲ ನಾಗರೀಕತೆಯ ಸುಳಿವು ಸುಳಿದಾಡಿ ಮೂಲ ಸಂಸ್ಕೃತಿಗೆ ಈಗಾಗಲೇ ಧಕ್ಕೆ ಬಂದಿದೆ. ಆದರೂ ಇನ್ನೂ ಅಳಿದುಳಿದ ಗ್ರಾಮೀಣ

ಸೊಗಡನ್ನು ಗುರುತಿಸುವ, ಪುರಸ್ಕರಿಸುವ ಕಾರ್ಯವನ್ನು ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಕೈಗೊಂಡಿದ್ದಾರೆ.

೯) **ಜಾನಪದ ದಸರಾ :** ಗ್ರಾಮೀಣರ ಬದುಕಿನಲ್ಲಿ ಅವರಿಗಾದ ಅನುಭವದಿಂದ ಉಂಟಾದ ಜಾನಪದ ಸಾಹಿತ್ಯ, ಜಾನಪದ ಕಲೆ, ನಾಟಕ, ನೃತ್ಯದಂತಹ ಪ್ರತಿಭೆಯನ್ನು ಗುರುತಿಸಿ ಪ್ರದರ್ಶಿಸಿ, ಅಂತಹ ಸಾಧಕರಿಗೆ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುತ್ತದೆ.

೧೦) **ಸಾಹಿತ್ಯ ದಸರಾ :** ಸಾಹಿತ್ಯ ವಿಶಾಲ ಹರವನ್ನೊಳಗೊಂಡಿದೆ. ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸಾಧನೆ ಮಾಡಿದ ಸಾಧಕರನ್ನು ಆಹ್ವಾನಿಸಿ ಅವರಿಂದ ಉಪನ್ಯಾಸ ನಡೆಸಿ ಜನರಲ್ಲಿ ಸಾಹಿತ್ಯಾಭಿರುಚಿಯನ್ನು ಮೂಡಿಸುವುದಾಗಿದೆ. ಅಂದು ಕೂಡಾ ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಹೀಗೆ ನವರಾತ್ರಿಯ ಒಂಬತ್ತು ದಿನಗಳಲ್ಲಿ ದೇವಿ ಪಾರಾಯಣ. ವಿಜಯ ದಶಮಿಯ ದಿನದಂದು ಮೂಸ್ಲೀಂ ಬಾಂಧವರ ಸ್ಥಳದವರೆಗೆ ಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವ ನಡೆದು ಬನ್ನಿಯನ್ನು ಮುಡಿಯೂತ್ತಾರೆ. ಈ ರೀತಿ ವಿಶಿಷ್ಟ ಆಚರಣೆಯೊಂದಿಗೆ ಸಂಸ್ಕೃತಿಕ ಪರಂಪರೆಯನ್ನು ಸಮಾಜ ಜಾಗೃತಿಯತ್ತ ಬಳಸಿ ಕರ್ನಾಟಕದಲ್ಲಿಯೇ 'ದಸರಾ' ಉತ್ಸವಕ್ಕೆ ವಿಶಿಷ್ಟ ಸ್ಥಾನ ಬಂದದ್ದು 'ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ'ದ ೫೯ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರಿಂದ ಎಂಬುದು ಜಗಜ್ಜಾಹೀರ.

೨. ಸಾಮಾಜಿಕ ಕಾರ್ಯಗಳು :

- **ಧರ್ಮ ಜಾಗೃತಿ :** ಆಧುನಿಕ ವ್ಯವಸ್ಥೆಯಲ್ಲಿ ಮನುಷ್ಯ ಹಲವು ಧರ್ಮಗಳ, ಸಂಸ್ಕೃತಿಗಳ, ಭಾಷಾ ನೀತಿಗಳ ಪ್ರಭಾವದಿಂದ ತನ್ನ ಮೂಲ ಗುರಿಯಾದ ಆತ್ಮ ಸಾಕ್ಷಾತ್ಕಾರವನ್ನೇ ಮರೆತು, ತಾನು-ತನ್ನೊಂದಿಗಿನ ವ್ಯವಸ್ಥೆಯನ್ನೇ ಹಾಳು ಮಾಡುತ್ತಿದ್ದಾನೆ. ಇಂಥ ವ್ಯವಸ್ಥೆಯಲ್ಲೂ "ಮಾನವ ಧರ್ಮಕ್ಕೆ ಜಯವಾಗಲಿ, ಧರ್ಮದಿಂದಲೇ ವಿಶ್ವಕ್ಕೆ ಶಾಂತಿ" ಎಂಬ ತನ್ನ ತತ್ವವನ್ನು ಒಳಗೊಂಡ

ಪಂಚಾಚಾರ್ಯರ ಪೀಠ ಬಾಳೆಹೊನ್ನೂರು ಶಾಖಾ ಮಠ 'ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠ'ದ ಇಂದಿನ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಮಾನವಕುಲದಲ್ಲಿ ಕಳಕಳಿಯುಳ್ಳವರು. ಮನುಷ್ಯನ ಜೀವನ ಪಾವನವಾಗಬೇಕಾದರೆ ಆತ ಧಾರ್ಮಿಕವಾಗಿ ಜಾಗೃತವಾಗಬೇಕು. ಆಧುನಿಕತೆ, ವೈಚಾರಿಕತೆಯ ಸೋಗಿನಲ್ಲಿ ಧರ್ಮದ ಬೇರುಗಳು ನಶಿಸಿ ಹೋಗಬಾರದು. ಪ್ರತಿ ವ್ಯಕ್ತಿಗೂ ಧಾರ್ಮಿಕ ಸಂಸ್ಕಾರ ನೀಡಬೇಕು ಎಂಬ ವಿಚಾರವುಳ್ಳ ಶ್ರೀಗಳು ವ್ಯವಸ್ಥೆಯಲ್ಲಿ ಎಲ್ಲಾದರೂ ಅಹಿತಕರ ಘಟನೆಗಳು ನಡೆದು "ಧರ್ಮಕ್ಕೆ ಚ್ಯುತಿ ಬರುವಂತಿದ್ದರೆ ಅದನ್ನು ತಕ್ಷಣವೇ ಖಂಡಿಸಿ ಸಮರ್ಥ ರೀತಿಯಲ್ಲಿ ಅವುಗಳಿಗೆ ಸಮರ್ಥ ಉತ್ತರ ನೀಡಿ ಎಲ್ಲರನ್ನು ಸಮಾಧಾನಪಡಿಸುವ ರೀತಿ ಅಮೋಘವಾದುದು"[೩] ಮನುಷ್ಯ ತನ್ನ ಬಾಳಿನ ನೆಮ್ಮದಿಗಾಗಿ ಧಾರ್ಮಿಕ, ಆಧ್ಯಾತ್ಮಿಕ ಒಲವನ್ನು ಹೊಂದಿರಬೇಕೆಂಬುದು ಅವರ ಮನದಳಲು ಹಿರೇಮಠದಿಂದ ನಡೆಯುತ್ತಿರುವ ಕನ್ನಡ ಪ್ರಾಥಮಿಕ ಶಾಲೆ ಮತ್ತು ಶ್ರೀ ಶಂಕರಲಿಂಗ ಸಂಗೀತ ಪಾಠಶಾಲೆಯ ಆಶ್ರಮದಲ್ಲಿ ಆಗಾಗ ವೇದಾಧ್ಯಯನ ಶಿಬಿರವನ್ನು ಏರ್ಪಡಿಸುತ್ತಾರೆ.

ತಾವು ಪಾಲ್ಗೊಂಡ ಕಾರ್ಯಗಳಲ್ಲೆಲ್ಲ ಧರ್ಮ ಜಾಗೃತಿಯ ಮಾತುಗಳನ್ನೇ ಮೊದಲು ಪ್ರಸ್ತಾಪಿಸುತ್ತಾರೆ. "ಗಡಿಬಿಡಿ ಲೋಕದಲ್ಲಿ ಮನುಷ್ಯ ತನ್ನನ್ನು ತಾನು ಮರೆತು ಸನ್ಮಾರ್ಗ ಬಿಟ್ಟು ಸಲ್ಲದ ದಾರಿ ತುಳಿದು ಅಶಾಂತಿಗಿಡಾಗುತ್ತಿದ್ದಾನೆ" ಆದ್ದರಿಂದ ಧರ್ಮದಿಂದ ದೂರವಾದರೆ ಮಾನವನು ಬದುಕಲಾರ ಎಂಬುದು ಅವರ ನಿಲುವು. ಧರ್ಮವೆಂದರೆ ವೇದ ಶಾಸ್ತ್ರಗಳು ಮಾತ್ರವಲ್ಲ ನಮ್ಮನ್ನು ಸನ್ಮಾರ್ಗದತ್ತ ಒಯ್ಯುವ ಶರಣರ ವಚನಗಳಲ್ಲಿ ಅಮೃತ ಅಡಗಿದ್ದು ಅದನ್ನು ಅರಿಯುವ ಮೂಲಕ ಜೀವನ ಸಾರ್ಥಕಗೊಳಿಸಬೇಕು"[೪] "ಸ್ವಾಮಿಗಳು ಕೇವಲ ಎತ್ತರ ಬೆಳೆದರೆ ಸಾಲದು ನೊಂದವರ ಬಂಧುವಾಗಿ, ಕಷ್ಟದಲ್ಲಿ ಭಾಗಿಯಾಗಿ ಬೆಳೆಯುವುದೇ ಧರ್ಮ. ಇಂಥ ಧರ್ಮ ಎಡವಿ ಬಿದ್ದವರನ್ನು ಮೇಲೆ ಎಬ್ಬಿಸುವುದು"[೫] ನೊಂದವರಿಗೆ ಬಂಧುವಾಗುವುದೇ

ಧರ್ಮವೆಂಬುದು ಅವರ ಗಟ್ಟಿ ನಿಲುವಾಗಿದೆ. ವಿಶ್ವಕ್ಕೆ ಶಾಂತಿ ಮಂತ್ರವನ್ನು ಕಲಿಸಿದ ಭಾರತ ದೇಶದಲ್ಲಿ ಹಲವು ದುಷ್ಟ ಶಕ್ತಿಗಳ ಹುನ್ನಾರದಿಂದ ದೇಶದ ಶಾಂತಿಯೇ ನಾಶವಾಗುತ್ತಿದೆ. "ಜಾತಿ ಮತ್ತು ಧರ್ಮ ಮರೆತು ನಾವೆಲ್ಲರೂ ಒಗ್ಗಟ್ಟಿನಿಂದ ಭಯೋತ್ಪಾದನೆಯ ವಿರುದ್ಧ ಹೋರಾಡಬೇಕು"[1] ಅಂದಾಗಲೆ ಜನಸಾಮಾನ್ಯ ನೆಮ್ಮದಿಯಿಂದಿರಲು ಸಾಧ್ಯವೆಂಬುದು ಶಿವಾಚಾರ್ಯರ ಧೇಯವಾಗಿದೆ. ಹಲವು ಸಭೆ ಸಮಾರಂಭಗಳಲ್ಲಿ ಸಕ್ರೀಯವಾಗಿ ಪಾಲ್ಗೊಂಡು ಜನರ ಮನದಲ್ಲಿ ಧರ್ಮ ಜಾಗೃತಿ ಮೂಡಿಸುವ ಕೆಲಸ ಅವಿಸ್ಮರಣೀಯವಾದುದು. ಶಿವಾನುಭವದಿಂದ ಮಾನವ ಜನ್ಮ ಸಾರ್ಥಕವೆಂಬುದು ಶಿವಾಚಾರ್ಯರರ ಮಾರ್ಗದರ್ಶನವಾಗಿದೆ.

ಆತ್ಮ ಪರಮಾತ್ಮನನ್ನು ಕುರಿತು ಗಹನವಾದ ಚಿಂತನೆ ನಡೆಸುತ್ತಾರೆ. ಸರ್ವಧರ್ಮ ಸಮ್ಮೇಳನಗಳಲ್ಲಿ ಆತ್ಮೋದ್ಧಾರದಿಂದ ಧರ್ಮದ ಜಾಗೃತಿ, ಅದಕ್ಕೆ ಮನುಷ್ಯ ಸದಾ ಸತ್ಪುರುಷರ, ಸಂತರ, ಗುರುಗಳ ಸಹವಾಸದಲ್ಲಿರಬೇಕು. "ಸಜ್ಜನರ ಸಂಘವದು ಹೆಜ್ಜೇನು ಸವೆದಂತೆ" ಎಂದು ಗಂಟೆಗಟ್ಟಲೆ ಪ್ರವಚನ ನೀಡುತ್ತಾರೆ. ಆತ್ಮ ಪರಮಾತ್ಮನ ಸ್ವರೂಪ. ಇದಕ್ಕೆ ಹುಟ್ಟೂ ಇಲ್ಲ, ಸಾವು ಇಲ್ಲ. ಹೀಗಾಗಿ ಸ್ವರ್ಗ ನರಕದ ಪ್ರಶ್ನೆಯೇ ಏಳುವುದಿಲ್ಲ. ಪಾಪ, ಪುಣ್ಯದ ಕಲ್ಪನೆಯೂ ಹುಟ್ಟುವುದಿಲ್ಲ. ಎಲ್ಲದಕ್ಕೂ ಪ್ರೇರಕ ಶಕ್ತಿ ಆತ್ಮ. ಹೀಗಿದ್ದೂ ಪಾಪದ ವಿಷಯ ಬರುವುದಾದರೆ ಅದು ಕರ್ಮಾಧಿಗಳನ್ನಾಧರಿಸಿ ಜೀವನ (ಶರೀರ)ಕ್ಕೆ ಸಂಬಂಧಿಸಿದಂತೆ ಜೀವಕ್ಕೆ ಆತ್ಮ ಆಶ್ರಯವಾಗಿರುವಾಗ ಎಲ್ಲದಕ್ಕೂ ಸಾಕ್ಷಿ ದೇವರು!"[2] ಎಂಬ ಮನದ ಮಾತುಗಳನ್ನು ಬಿಚ್ಚಿ ಆಡಿ ಮಾನವನು ಆತ್ಮನನ್ನು ಭವದಿಂದ ಬಿಡುಗಡೆಗೊಳಿಸಲು ಮಾನವ ಜನ್ಮಕ್ಕೆ ಬಂದಾಗ ಧರ್ಮದಿಂದ ಬದುಕಿ ಬಾಳಬೇಕೆಂದು, ಸಮಾಜವನ್ನು ಜಾಗೃತಗೊಳಿಸುವುದೇ ನನ್ನ ಕಾಯವೆಂದು ತಿಳಿದವರು.

ಆತ್ಮ ಕಲ್ಯಾಣದೊಂದಿಗೆ ಮಾನವ ಕಲ್ಯಾಣ, ದೇಶದ ಕಲ್ಯಾಣ ಕಾರ್ಯಗಳು ನಡೆಯಬೇಕೆಂಬ ಕಳಕಳಿಯುಳ್ಳವರು. 'ಕನ್ನಡಾಧಿಪತಿ' ಮಾಸಪತ್ರಿಕೆಯ ಸಂದರ್ಶನದಲ್ಲಿ ಅಂತರಾಳದ ನೋವನ್ನು ಅಭಿವ್ಯಕ್ತಿಸಿದ್ದಾರೆ. "ನಾವೆಲ್ಲ ಇಂದು ದೇಶವನ್ನು ಉಳಿಸಬೇಕಾಗಿದೆ ದೇಶ ಉಳಿದರೆ ಧರ್ಮವು ಉಳಿಯುತ್ತದೆ. ಮುಗ್ಧರು ಮತಾಂತರವಾಗುತ್ತಿದ್ದಾರೆ. ಇದಕ್ಕೆ ಉತ್ತರವೇನೆಂದಾಗ, ಮಠಾಧಿಪತಿಗಳು ಮುಗ್ಧರ ಬಳಿಗೆ ಹೋಗಬೇಕು. ನೊಂದವರನ್ನು, ಹಿಂದುಳಿದವರನ್ನು ಅಪ್ಪಿಕೊಳ್ಳಬೇಕು ನಾವೆಲ್ಲ ಸಮಾನರೆಂಬ ತತ್ವವನ್ನು ಬದುಕಿನಲ್ಲಿ ನಿಜವಾಗಿಸಬೇಕು. ಪ್ರೀತಿ ತೋರಿಸಿದರೆ ಯಾರೂ ದೂರ ಹೋಗುವುದಿಲ್ಲ. ನಮ್ಮವರಾಗಿ ಉಳಿಯುತ್ತಾರೆ. ನಮ್ಮಲ್ಲಿರುವ ಚಿಕ್ಕ ಪುಟ್ಟ ಭೇದಗಳಿಗೆ ಏನು ಹೇಳಿತ್ತಿರಾ ಎಂಬ ಪ್ರಶ್ನೆಗೆ ಅದೇ ನಮ್ಮ ಮನಸ್ಸಿಗೂ ಖೇದವಾಗುತ್ತದೆ. ನೋಡಿ – ಸಿದ್ಧಾಂತ ಶಿಖಾಮಣಿ, ಪಂಚಾಚಾರ್ಯರ ಸ್ವತಲ್ಲ. ವಚನ ಸಾಹಿತ್ಯ ವಿರಕ್ತರ ಸೊತ್ತಲ್ಲ, ನಿಜಗುಣ ಸಾಹಿತ್ಯ ಅದ್ವೈತಿಗಳ ಸೊತ್ತಲ್ಲ. ಇವೆಲ್ಲವೂ ಕೇವಲ ಯಾವುದೇ ಒಂದು ಗುಂಪಿನ ಸ್ವತ್ತಲ್ಲ. ಈ ಅಮೂಲ್ಯ ಸಂಪತ್ತು ಎಲ್ಲರ ಸೊತ್ತು. ಇವು ಕೆಲವೊಬ್ಬರಿಗೆ ಮೀಸಲಾಗಬಾರದು."[೮] ಇದರಿಂದ ಮಾನವ ಕುಲದಲ್ಲಿ ಧರ್ಮ ಜಾಗೃತಿ ಆಗುವುದು ಹೇಗೆ ಎಂದು ಚಿಂತಿಸುತ್ತಾರೆ. ಧರ್ಮೋರಕ್ಷತಿ ರಕ್ಷಿತಃ" ಎಂಬ ಮಾತನ್ನು ಪಾಲಿಸುತ್ತ ಮಾನವ ಧರ್ಮಕ್ಕೆ ಸದಾ ಜಯವನ್ನೇ ಬಯಸುವವರು ಶ್ರೀ.ಷ.ಬ್ರ. ಚಂದ್ರಶೇಖರ ಸ್ವಾಮಿಗಳು.

ಆಗಾಗ ಭಾರತದಲ್ಲಿ ಪ್ರಕೃತಿ ವಿಕೋಪಗಳಿಗೆ ಸಾಕಷ್ಟು ಜನತೆ ಬಲಿಯಾಗಿ ಸಾವನ್ನಪ್ಪುವ ಘಟನೆಗಳು ನಡೆಯುತ್ತಿರುತ್ತವೆ ಜೂನ ೧೭ ೨೦೧೩ರಂದು ನಡೆದ ಉತ್ತರಾಖಂಡದ ಪ್ರವಾಹ ಭೀತಿಯಿಂದ ಜನ ನೊಂದು ಹೋಗಿದ್ದಾರೆ. ಶಿವ ದರ್ಶನಕ್ಕೆ ಹೋದ ಭಕ್ತ ಮಂಡಳಿ ಪ್ರವಾಹದಲ್ಲಿ ಸಿಲುಕಿದಾಗ ಅವರನ್ನು ರಕ್ಷಿಸಲು ಹೋದ ಯೋಧರು ಕಣ್ಮರೆಯಾದ ಸನ್ನಿವೇಶ ಎಂಥವರನ್ನೂ ಕಣ್ಣೀರು ಸುರಿಸದೇ ಬಿಡಲ್ಲಾ. ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು "ಭಗವಂತ ಮುನಿಸಿಕೊಂಡಿದ್ದಾನೆ. ಏಕೆಂದರೆ, ಎಲ್ಲರೂ ಮನುಷ್ಯತ್ವದಿಂದ ದೂರ ಸರಿದು

ಮೃಗಗಳಿಗಿಂತಲೂ ಕೀಳಾಗಿ ವರ್ತಿಸುತ್ತಿದ್ದಾರೆ. ಸಜ್ಜನರೇ ಎಲ್ಲರ ಕಷ್ಟ-ಸುಖಗಳಲ್ಲಿ ನಾವು ಭಾಗಿಯಾಗೋಣ. ಬನ್ನಿ ನೋವಿನಲ್ಲಿರುವ ನಿರಾಶ್ರಿತರಿಗೆ ನಾವೊಂದು ಸಾಂತ್ವನದ ಸಿಂಚನವನ್ನೆರಿಯೋಣ-----" ಇದುವೆ ಮಾನವ ಧರ್ಮ ಇದರಿಂದ ಮಾನವ ಕುಲ ಉದ್ಧಾರವಾಗುತ್ತದೆ. ಎಂಬುದನ್ನು ಸಾರಿ ಸಾರಿ ಹೇಳುತ್ತಾ ಡಾ. ಬಾಬು ರಾಜೇಂದ್ರ ಪ್ರಸಾದರವರ ಮಾತನ್ನು ಚಾಚೂ ತಪ್ಪದೆ ಪಾಲಿಸುತ್ತಿದ್ದಾರೆ.

- **ಸಮಾಜ ಜಾಗೃತಿ :** "ಗಚ್ಚತಿ ಗಚ್ಚತಿ ಇತಿ ಜಂಗಮಃ" ಎಂಬ ಜಂಗಮ ತತ್ವದ ನೆಲೆಯಲ್ಲಿ ನಿಜಗುಣ ಶಿವಯೋಗಿಗಳ ವಿಚಾರಧಾರಯಂತೆ ಕಾಯವನ್ನು ಕಾಂತಾರವನ್ನಾಗಿ ಮಾಡಿಕೊಂಡು ಅರಿಷಡ್ವರ್ಗಗಳನ್ನೆಲ್ಲ ಬೇಟೆಯಾಡಿ ಶರೀರವೆಂಬ ಹೊಲವನ್ನ ಹಸನು ಮಾಡಿಕೊಂಡು ಪರತ್ವದ ಬೆಳೆಯ ಬೆಳೆಯನ್ನು ಉಣ್ಣುತ್ತಿದ್ದಾರೆ. ಇಂಥ ಸಾಧಕರ ಮಾತುಗಳಿಂದ ಪ್ರೇರಿತರಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ತಾವು ಹಿರೇಮಠದ ಪೀಠಾಧಿಕಾರವನ್ನು ಸ್ವೀಕರಿಸಿದಂದಿನಿಂದಲೇ ಕಾರ್ಯ ತತ್ಪರರಾದವರು. ಹಳ್ಳಿಯ ಮತ್ತು ಹಳ್ಳಿಯ ಜನರ ಉದ್ಧಾರಕ್ಕಾಗಿ, ಜನರಲ್ಲಿ ಸಾಮಾಜಿಕ ಜಾಗೃತಿಯನ್ನು ಮೂಡಿಸುವುದಕ್ಕಾಗಿ, ಆತ್ಮ ವಿಶ್ವಾಸವನ್ನು ಬೆಳೆಸುವುದಕ್ಕಾಗಿ ನಾಡಿನಾದ್ಯಂತ ಪಾದಯಾತ್ರೆ ಕೈಗೊಂಡರು. ಅವರ ಪೂರ್ವಾಶ್ರಮದಿಂದಲೇ ದೊರೆತ ಸಂಸ್ಕಾರ ಅವರನ್ನು ಕೇವಲ ಪುರಾಣ ಪ್ರವಚನವನ್ನು ಮಾತ್ರ ಹೇಳದೇ ಪೂಜೆ ಪ್ರಸಾದವನ್ನಷ್ಟೇ ಅನುಗ್ರಹಿಸದೇ "ಜಗಂ ಚರಾತಿ ಇತಿ ಜಂಗಮಃ" ಎಂಬ ಉಕ್ತಿಯಂತೆ ಶ್ರೀ ಗುರು ಶಾಂತೇಶ್ವರರನ್ನು ಮನದಲ್ಲಿ ನೆನೆಯುತ್ತ "ಸಾಧನ ಕಿರಣ"ವೆಂಬ ಬಳಗವನ್ನು ಸ್ಥಾಪಿಸಿ ೧೯೯೩ ರಿಂದ ೧೯೯೭ರ ವರೆಗೆ ಯುವ ಜಾಗೃತಿ ಕಾರ್ಯವನ್ನು ಕೈಗೊಂಡರು.

ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ಹಾವೇರಿ ಜಿಲ್ಲೆಯಾದ್ಯಂತ ಸಂಚರಿಸಿ ಸುಮಾರು ೪೦೦ ರಿಂದ ೫೦೦ ಹಳ್ಳಿಗಳಲ್ಲಿ ಸಮಾಜ ಜಾಗೃತಿ ಕಾರ್ಯಗಳನ್ನು

ಕೈಗೊಂಡರು. ಆಧುನಿಕ ಬದುಕಿಗೆ ಒಳಗಾದ ಯುವ ಪೀಳಿಗೆ ಹಲವು ರೀತಿಯ ವ್ಯವಸನಗಳಿಂದ ಬಳಲುತ್ತಿದ್ದಾರೆ. ಅವುಗಳಿಂದ ಅವರನ್ನು ಮುಕ್ತಗೊಳಿಸಬೇಕೆಂಬ ಮಹತ್ವಾಕಾಂಕ್ಷೆ ಹೊಂದಿದ ಶಿವಚಾರ್ಯರು ಯುವಕರಲ್ಲಿ ನೈತಿಕ ಜಾಗೃತಿಯ ಜೊತೆಗೆ ದೇಶ ಪ್ರೇಮವನ್ನು, ಅಭಿಮಾನವನ್ನು, ಭಾವೈಕ್ಯತೆಗಳನ್ನು ಮೈಗೂಡಿಸಿಕೊಳ್ಳುವಂತಹ ಪ್ರವಚನಗಳನ್ನು ನೀಡುತ್ತಾ ನಡೆದರು. ಅನಾದಿ ಕಾಲದಿಂದ ನಮ್ಮಲ್ಲಿ ಬೇರೂರಿದಂತಹ ಮೂಢ ನಂಬಿಕೆ, ಅನಿಷ್ಠ ಸಂಪ್ರದಾಯಗಳನ್ನು ತಿಳಿಸುತ್ತ ಜನರಲ್ಲಿ ವೈಚಾರಿಕತೆ ಅರಿವು ಮೂಡಿಸಿದರು. ಇದರಿಂದ ಶಿವಚಾರ್ಯರ ವಿಚಾರಧಾರೆಗಳಿಂದ ಪರಿವರ್ತನೆಯಾದ ಅನೇಕ ಜನರು ಇಂದು ತಮ್ಮ ಬದುಕನ್ನು ಸಾಗಿಸುತ್ತಿದ್ದಾರೆ.

ನಮ್ಮ ದೇಶಕ್ಕೆ ಶಾಪವಾಗಿರುವ ದೇವದಾಸಿ ಪದ್ದತಿಯನ್ನು ಅಮೂಲಾಗ್ರ ಕಿತ್ತೊಗೆಯಬೇಕೆಂಬ ನಿಲುವನ್ನು ಹೊಂದಿದವರು. ಆ ನಿಟ್ಟಿನಲ್ಲಿ ದೇವದಾಸಿಯರಿಗೆ ಉಪದೇಶ ನೀಡುವ ಕಾರ್ಯಗಳನ್ನು ಹಮ್ಮಿಕೊಂಡು ಮಾತೃವಾತ್ಸಲ್ಯದಿಂದ ಉಪದೇಶ ನೀಡುತ್ತ "ಪರವಧು ಮಹಾದೇವಿ" ಎಂಬ "ಯತ್ರನಾರ್ಯಸ್ತು ಪೂಜ್ಯಂತೆ ರಮಂತೆ ತತ್ರದೇವತಃ" ಎಂಬ ವಿಚಾಧಾರೆಗಳಲ್ಲಿ, ಭಾರತದಲ್ಲಿ ಮಹಿಳೆಗಿರುವ ಸ್ಥಾನಮಾನಗಳನ್ನು ತಿಳಿಸಿಹೇಳುತ್ತ ಅವರ ಮನದಲ್ಲಿ ಆತ್ಮಸ್ಥೈರ್ಯ ಮೂಡುವಂತಹ ಸಾಂಸಾರಿಕ ಪಾರಮಾರ್ಥಿಕ ಬದುಕಿನ ಸಮನ್ವಯತೆಯ ಸಿದ್ಧಾಂತಗಳನ್ನು ತಿಳಿಸಿ ಹೇಳಿ ಅರಿವು ಮೂಡಿಸುವಂತಹ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಅನಿಷ್ಟ ಪದ್ದತಿಯಾದ ಹೊಸ್ತಿಲ ಹುಣ್ಣಿಮೆಯ ದಿನ ಹೆಣ್ಣು ಮಕ್ಕಳು ವಿಶೇಷ ದೇವದಾಸಿಯರ ಬಳೆ ಒಡೆದುಕೊಳ್ಳುವ ಸಂಪ್ರದಾಯ ಕುರಿತು ಅವರಿಗೆಲ್ಲ ತಿಳಿ ಹೇಳಿ ಅದೇ ದಿನದಂದು ಬಳೆ ಧರಿಸುವಂತಹ ಸತ್ಸಂಪ್ರದಾಯವನ್ನು ಆಚರಣೆಯಲ್ಲಿ ತರುವತಂಹ ಕಾರ್ಯಕ್ಕೆ ಚಾಲನೆ ನೀಡಿ ಕ್ರಾಂತಿಕಾರಕ

ಬದಲಾವಣೆಯ ಹರಿಕಾರರಾದರು. ಸುಮಾರು ೧೬೪-೧೬೫ ಹಳ್ಳಿಗಳಲ್ಲಿ ಇಂತಹ ಬದಲಾವಣೆಗಳಾದುದು ಒಂದು ಇತಿಹಾಸವೇ.

ಜನಮಾನಸದಲ್ಲಿ ಸಮಾಜಿಕ ಕಳಕಳಿ ಮಾನವೀಯ ಮೌಲ್ಯಗಳ ಬಿತ್ತನೆಯ ಕಾರ್ಯವನ್ನು ಕೈಗೊಂಡಿದ್ದಾರೆ. ಅಲ್ಲಲ್ಲಿ ಪ್ರವಚನಗಳನ್ನೂ ಕೈಗೊಳ್ಳುತ್ತ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ನಿರಂತರ ಭಾಗವಹಿಸುತ್ತ ಜನರಲ್ಲಿ ಗುರು-ಹಿರಿಯರ ಆದರ್ಶ ವ್ಯಕ್ತಿಗಳ, ಸಾಧಕರ ಇತಿಹಾಸ ಪುರುಷರ ಜೀವನ ಚರಿತ್ರೆಗಳನ್ನು ತಿಳಿಸುತ್ತ ಅರಿವು ಮೂಡಿಸುವ ಕೆಲಸ ಸಾಮಾನ್ಯವಾದುದಲ್ಲ. 'ಕನಕ ಜಯಂತಿ', 'ವಾಲ್ಮೀಕಿ ಜಯಂತಿ'ಯಂತಹ ಮಹತ್ವದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಇಂತಹ ಸಾಧಕರು ಕೇವಲ ಒಂದು ಧರ್ಮಕ್ಕೆ ಅಥವಾ ಒಂದು ಪಂಗಡಕ್ಕೆ ಮಾತ್ರ ಸೇರಿದವರಲ್ಲ. ಅವರು ಈಡೀ ದೇಶಕ್ಕೆ ಸಂಬಂಧಿಸಿದವರು. ಅವರ ಬದುಕಿನ ತತ್ವಗಳನ್ನು ನಮ್ಮ ಬದುಕಿನಲ್ಲೂ ಅಳವಡಿಸಿಕೊಂಡರೆ ಯುವ ಪೀಳಿಗೆಯ ಬದುಕಿಗೊಂದು ಹೊಸ ತಿರುವು ಬರುತ್ತದೆ ಎಂಬುದನ್ನು ಮನಮುಟ್ಟುವಂತೆ ತಿಳಿಸುತ್ತಾರೆ.

ಪಾಶ್ಚಿಮಾತ್ಯರ ಪ್ರಭಾವದಿಂದ ಕೃಷಿಯಲ್ಲಾದ ಬದಲಾವಣೆಯಿಂದ ಅಳಿದು ಹೋಗುತ್ತಿರುವ ಭೂಮಿಯ ಸತ್ವವನ್ನು ಹೀಗೆ ಉಳಿಸಿಕೊಳ್ಳಬೇಕೆಂಬ ಉಪನ್ಯಾಸಗಳನ್ನು ಮಠದ ವತಿಯಿಂದ ಹಮ್ಮಿಕೊಂಡು ರೈತರಲ್ಲಿ ಸಾವಯವ ಕೃಷಿಯ ಜಾಗೃತಿ ಮೂಡಿಸುತ್ತಿದ್ದಾರೆ. ಅರಣ್ಯ ಇಲಾಖೆಯ ಸಹಯೋಗದೊಂದಿಗೆ ತಾಲೂಕಿನಲ್ಲಿ ಒಂದು ಲಕ್ಷ ಸಸಿ ವಿತರಿಸಿ ಪರಿಸರ ಪ್ರೇಮ ಮೇರೆದಿದ್ದಾರೆ.

ಸಮಾಜ ಅಂಗವಿಕಲತೆಯಿಂದ ಬಳಲುವವರ ಬಗೆಗೆ ವಿಶೇಷ ಕಾಳಜಿಯನ್ನು ಹೊಂದಿದ್ದಾರೆ. ನಾಡಿನ ಧಾರ್ಮಿಕ ಹಿನ್ನಲೆಯನ್ನೊಳಗೊಂಡು ಬೆಳೆದ ಹಬ್ಬ-ಹರಿದಿನಗಳಿಗೆ ವಿಶಿಷ್ಟ ರೂಪ ಕೊಡುತ್ತ ಆ ಮೂಲಕ ಸಾಮಾಜಿಕ ಜಾಗೃತಿ ಕಾರ್ಯ ಕೈಗೊಂಡಿದ್ದಾರೆ. ಹಬ್ಬ-ಹರಿದಿನಗಳನ್ನು ವೈಭವ ಪೂರ್ಣವಾಗಿ ಆಚರಣೆಯಲ್ಲಿ ಆಚರಿಸದೇ ಸಮಾಜದ ಜನತೆ

ಅದರ ಖರ್ಚನ್ನು ದೀನ ದಲಿತರ, ಅಂಧ ಮಕ್ಕಳ ಹಿತಕ್ಕಾಗಿ ಬಳಸಿರಿ ಎಂದು ಸ್ವತಃ ತಾವು ನಾಗರ ಪಂಚಮಿ ನಿಮಿತ್ಯ ಬೆಳಗಾವಿ ಮಾಹೇಶ್ವರಿ ಅಂಧ ಮಕ್ಕಳ ಶಾಲೆಯ ಮಕ್ಕಳಿಗೆ ಹಾಲು-ಹಣ್ಣು ನೀಡಿ ಆ ಮಕ್ಕಳಲ್ಲಿರುವ ಅನಾಥ ಪ್ರಜ್ಞೆಯನ್ನು ಹೋಗಲಾಡಿಸಲು ನಿರಂತರ ಪ್ರಯತ್ನಿಸುತ್ತಿದ್ದಾರೆ. ಈ ನೆಲೆಯಲ್ಲಿ ಹೊಸ ಸಂಪ್ರದಾಯಕ್ಕೆ ನಾಂದಿ ಹಾಡಿ ಜನರಲ್ಲಿ ವೈಚಾರಿಕತೆಯನ್ನು ಬೆಳೆಸಿ ಸಾಮಾಜಿಕ ಜಾಗೃತಿ ಕಾರ್ಯ ಕೈಗೊಂಡಿದ್ದಾರೆ. ಸಮಾಜದಲ್ಲಿ ಭ್ರಷ್ಟಾಚಾರ ಭೂತ ಸ್ವರೂಪ ತಾಳುತ್ತಿದೆ. ಅದನ್ನು ತಡೆಗಟ್ಟಲು ಯುವ ಶಕ್ತಿ ಜಾಗೃತವಾಗಬೇಕು. ಈ ನಿಟ್ಟಿನಲ್ಲಿ ಅಣ್ಣಾ ಹಜಾರೆಯಂಥವರ ಬೆಂಬಲಕ್ಕೆ ವೀರ ಶೈವ ಮಹಾಸಭೆ ಬೆಂಬಲ ಸೂಚಿಸಿದಾಗ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರೂ ಒಬ್ಬರಾಗಿ ಸಕ್ರಿಯವಾಗಿ ಪಾಲ್ಗೊಂಡರು. "ದೇಶದಲ್ಲಿ ಹೆಚ್ಚುತ್ತಿರುವ ಭಯೋತ್ಪಾದನೆಯನ್ನು ತಡೆಯಬೇಕೆಂದು ಆಗ್ರಹಿಸಿ ಮುಂಬೈ ಕಾರ್ಯಾಚರಣೆಯಲ್ಲಿ ಮೃತಪಟ್ಟ ವೀರಯೋಧರಿಗೆ ಶ್ರದ್ಧಾಂಜಲಿ ಕರ್ನಾಟಕ ರಕ್ಷಣಾ ವೇದಿಕೆ ಬೆಳಗಾವಿ ನಗರದಲ್ಲಿ ಹಮ್ಮಿಕೊಂಡ ಪಂಜಿನ ಮೇರವಣಿಗೆಯಲ್ಲಿ" ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಪಾಲ್ಗೊಂಡು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಶ್ರಮಿಸುತ್ತಿದ್ದಾರೆ.

ಹುಕ್ಕೇರಿ ಹಿರೇಮಠದ ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದ ವತಿಯಿಂದ ಶ್ರೀ. ಜಗದ್ಗುರು ರೇಣುಕಾಚಾರ್ಯ ಜಯಂತಿಯನ್ನು ೨೦೦೮ರಲ್ಲಿ ವಿಶೇಷವಾಗಿ ಆಚರಿಸಿದ್ದಾರೆ. ತನ್ನಿಮಿತ್ಯ ಹುಕ್ಕೇರಿ, ಚಿಕ್ಕೋಡಿ, ಬೆಳಗಾವಿ, ಹುಬ್ಬಳ್ಳಿ, ಶಿವಮೊಗ್ಗ, ಬೆಂಗಳೂರು ನಗರಗಳಲ್ಲಿ ಭಿಕ್ಷುಕರಿಗೆ, ಅನಾಥ ಮಕ್ಕಳಿಗೆ, ವಿಧವೆಯರಿಗೆ, ನಿರಾಶ್ರಿತರಿಗೆ, ವೃದ್ಧರಿಗೆ, ಅಂಧ ಮಕ್ಕಳಿಗೆ, ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಅನ್ನ ಸಂತರ್ಪಣೆ, ಹಾಲು-ಹಣ್ಣು ವಿತರಣೆ ಮಾಡಿ "ಮಾನವ ಧರ್ಮ ಚಿಂತನೆ", "ಸಧ್ಬಾವನಾ ಗೋಷ್ಠಿ", "ಸುವಿಚಾರ ಚಿಂತನೆ", "ಸತ್ಸಂಗ" ಹುಕ್ಕೇರಿಯ ಉಪ ಕಾರಾಗೃಹದಲ್ಲಿರುವ

ಖೈದಿಗಳ ಮನಪರಿವರ್ತನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನಜಾಗೃತಿ ಕಾರ್ಯವನ್ನು ಮಾಡುತ್ತಿರುವುದು ಶ್ಲಾಘನೀಯ.

ನಮ್ಮ ಭಾರತೀಯ ವ್ಯವಸ್ಥೆ ಯಾವುದನ್ನೇ ಆಗಲೀ ಬಹು ಬೇಗ ತನ್ನದನ್ನಾಗಿ ಮಾಡಿಕೊಳ್ಳುತ್ತದೆ. ಪಾಶ್ಚಿಮಾತ್ಯರಿಂದ ಬಳುವಳಿಯಾಗಿ ಬಂದ ಅನೇಕ ಆಚರಣೆಗಳನ್ನು ದುಂದು ವೆಚ್ಚದಲ್ಲಿ ಆಚರಿಸುತ್ತಾರೆ. ಆದರೆ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ವಿಶಿಷ್ಟವಾಗಿ ಆಚರಿಸುತ್ತಾರೆ. ಹೊಸ ವರ್ಷದ ದಿನದಂದು ಹಿಡಕಲ್ ಡ್ಯಾಮ್‌ದಲ್ಲಿ ರಾಜ್ಯ ಬಾಲ ಕಾರ್ಮಿಕ ವಸತಿ ಶಾಲೆಯಲ್ಲಿ ಬುದ್ಧಿಮಾಂದ್ಯ ಮಕ್ಕಳೊಂದಿಗೆ ಹೊಸ ವರ್ಷವನ್ನು ಆಚರಿಸಿ ಅವರಿಂದಲೇ ಹೊಸ ವರ್ಷದ ಶ್ರೀ ಗುರು ಶಾಂತೇಶ್ವರ ದಿನದರ್ಶಿಕೆಯನ್ನು ಮಕ್ಕಳಿಂದಲೇ ಬಿಡುಗಡೆ ಮಾಡಿಸಿ ಹೊಸ ವರ್ಷದ ಹಬ್ಬಕ್ಕೆ ಹೊಸ ತಿರುವನ್ನೆ ಕೊಟ್ಟರು. ದೇವರು ದೇವಸ್ಥಾನದಲ್ಲಿ ಮಾತ್ರ ಇರಲಾರ. ನಾವು ನೋಡುವ ದೃಷ್ಟಿಯಲ್ಲದ್ದಾನೆ. ಅರಳುವ ಹೂವಿನ ಸೌಂದರ್ಯ, ಅರುಣೋದಯದ ಆನಂದ, ಹೃದಯದಲ್ಲಿಯ ಪ್ರೇಮ, ಸ್ನೇಹ, ಮಮತೆ, ವಾತ್ಸಲ್ಯಗಳನ್ನು ಇಂತಹ ದೀನ-ದಲಿತರ, ಅಂಧರ, ಅನಾಥರ, ವಿಧವೆಯರ, ವೃದ್ಧರ ಸೇವೆ ಮಾಡುವುದರಿಂ ಪಡೆಯಬಹುದು ಎಂದುದ್ದನ್ನು ತಿಳಿಸುವ ಜಾಗೃತಿ ಕಾರ್ಯಗಳನ್ನು ನಿರಂತರ ಮಾಡುತ್ತಿದ್ದಾರೆ. ನಮ್ಮ ನಾಡಿನ ಮಠ ಸಂಪ್ರದಾಯದಲ್ಲಿ ಶ್ರೀ ಗುರು ಶಾಂತೇಶ್ವರ ಹಿರೇಮಠದ ಶಿವಾಚಾರ್ಯರ ಕಾರ್ಯಗಳು ವಿಶೀಷ್ಟವಾದವುಗಳು.

ಯುವಶಕ್ತಿ ವ್ಯರ್ಥವಾಗಿ ಹೋಗುತ್ತಿರುವುದರ ಬಗೆಗೆ ಸದಾ ಕಾಳಜಿ ವಹಿಸುತ್ತಿರುತ್ತಾರೆ. ನಮ್ಮ ದೇಶ, ಧರ್ಮ ಸುರಕ್ಷಿತವಾಗಿರಬೇಕಾದರೆ ಯುವಕರಲ್ಲಿ ವಾಸ್ತವದ ಪರಿಕಲ್ಪನೆ ಇರಬೇಕು ಎಂದು ಸದಾ ಯುವಕರನ್ನು ಎಚ್ಚರಿಸುತ್ತಿರುತ್ತಾರೆ. ಒಟ್ಟಿನಲ್ಲಿ ಸುಭದ್ರವಾದ

ಸಮಾಜದ ನಿರ್ಮಾಣಕ್ಕೆ ನೈತಿಕ ಬಲವುಳ್ಳ ಯುವಶಕ್ತಿ ಬೇಕೆಂದು ಸ್ವಾಮಿ ವಿವೇಕಾನಂದರಂತೆ ಸದಾ ಯುವಕರನ್ನು ಎಚ್ಚರಿಸುತ್ತಾರೆ.

ಕಲ್ಲಾಗು ಕಷ್ಟದಡಿ

ಮನೆಗೆ ಮಲ್ಲಿಗೆಯಾಗು

ಹುಲ್ಲಾಗು ಬೆಟ್ಟದಡಿ ಮಳೆಯ ವಿಧಿಸುರಿಯೆ

ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಗೆ

ಎಲ್ಲರೊಳಗೊಂದಾಗು ಮಂಕುತಿಮ್ಮ

ಎಂಬ ಡಿ.ವಿ.ಜಿ.ಯವರ ಮಾತನ್ನು ಅಳವಡಿಸಿಕೊಂಡು ಪೂರ್ಣವಾಗಿ ತಮ್ಮನ್ನು ಸಮಾಜಕ್ಕೆ ಅರ್ಪಿಸಿಕೊಂಡಿದ್ದಾರೆ.

- **ಸಮಾಜ ಸೇವೆ :** ಮನುಷ್ಯನಿಗೆ, ಜನ್ಮಕೊಟ್ಟವರ ಸಮಾಜದ ಋಣ ಭಾರವಾದದು. ಈಗಾಗಲೇ ಹುಕ್ಕೇರಿ ಮಠದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಒಬ್ಬ ಸತ್ಪ್ರಜೆಯಾಗಿ, ಪಂಚಾಚಾರ್ಯರ ಗುರು ಪೀಠಕ್ಕೆ ಶ್ರೇಷ್ಠ ಗುರುವಾಗಿ ಸಮಾಜೋಧಾರ್ಮಿಕ ಸೇವೆಯಲ್ಲಿ ಪಾಲ್ಗೊಂಡು ಹೆತ್ತವರ ಮತ್ತು ಹೊತ್ತವಳ ಋಣವನ್ನು ತೀರಿಸುತ್ತಿದ್ದಾರೆ. ಹೊತ್ತವಳ ಋಣ ತೀರಿಸುವ ಕಾರ್ಯಗಳೆನೆಂಬುದನ್ನು ಇನ್ನಷ್ಟು ವಿಸ್ತೃತವಾಗಿ ನೋಡುವುದೇ ಈ ಸಮಾಜ ಸೇವಾಭಾಗದ ಉದ್ದೇಶ.

ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಆತ್ಮ ಶಕ್ತಿಯ ಪರಾಕಾಷ್ಠೆಯಲ್ಲಿ ನಿರಹಂಕಾರ ಮನೋಭಾವನೆಯಿಂದ ಕೀರ್ತಿಕಾಮಿನಿಯನ್ನು ತಣಿಸಿದ್ದಾರೆ. ಶಿವಾಚಾರ್ಯರು ಸಮಾಜದ ಸಮಷ್ಠಿ ಶಕ್ತಿಯಲ್ಲಿ ಶ್ರದ್ಧೆಯನ್ನಿಟ್ಟವರು. ಲೋಕ ಕಲ್ಯಾಣಾರ್ಥ ತಮ್ಮೆಲ್ಲ ಚಟುವಟಿಕೆಗಳ ಹರವನ್ನು ವಿಸ್ತರಿಸಿದವರು. ಇದಕ್ಕೆ ಕಾರಣ ಅವರ ಆಂತರಿಕ ಕಳಕಳಿ ಮತ್ತು ಲೋಕಕಾರುಣ್ಯ, "ನನಿಶ್ಚಿತಾರ್ಥಾತ್ ವಿರಮಂತಿಧೀರಾ" ಎಂಬ ಸಯಭಾಷಿತ ಅವರಿಗೆ

ಅನ್ವಯಿಸುತ್ತದೆ. ಮನುಷ್ಯ ಹುಟ್ಟಿದ ಮೇಲೆ ಒಳ್ಳೆಯ ಕಾರ್ಯಗಳನ್ನು ಮಾಡುತ್ತ ನೂರು ವರುಷ ಬದುಕುತ್ತೇನೆಂಬ ಸಂಕಲ್ಪವುಳ್ಳವನಾಗಿರಬೇಕೆಂಬುದನ್ನು ಶಬ್ದಶಃ ಪಾಲಿಸುವಂಥವರು. ಶಿವಾಚಾರ್ಯರ ಧೇಯೋದ್ದೇಶಗಳನ್ನು ಜನತೆ ಅರ್ಥೈಸಿಕೊಂಡಿದೆ ಎಂಬುದು ಅವರಿಗೆ ಮನವರಿಕೆಯಾದಾಗ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಕಾರ್ಯಗಳನ್ನು ವ್ಯವಸ್ಥಿತವಾಗಿ, ಶಾಸ್ತ್ರೀಯವಾಗಿ ವ್ಯಾಪಕವಾಗಿ, ಅನುಷ್ಠಾನಗೊಳಿಸಲು ಒಂದು ಸಂಸ್ಥೆಯನ್ನು ಪ್ರಾರಂಬಿಸುವ ವಿಚಾರ ಸುಳಿದು ಕಾರ್ಯ ತತ್ಪರರಾದರು.

ತಮ್ಮ ಸಮಾಜ ಸೇವಾ ಕಾರ್ಯಕ್ಕೊಂದು ಮಾರ್ಗದಂತೆ ಮಠದ ಸಸ್ಥಾಪಕರಾದ ಶ್ರೀಗುರುಶಾಂತೇಶ್ವರರ ಸ್ಮರಣೆಗಾಗಿ "ಶ್ರೀ ಗುರು ಶಾಂತೇಶ್ವರ ಜನಕಲ್ಯಾಣ ಪ್ರತಿಷ್ಠಾನ" (ರಿ) ಎಂಬ ಸಂಸ್ಥೆಯನ್ನು ದಿನಾಂಕ: ೨೩-೨-೨೦೦೩ ರಂದು ಸ್ಥಾಪಿಸಿದರು. ಇದರ ಆಶ್ರಯದಲ್ಲಿ ನೂರಾರು ಕಾರ್ಯಗಳನ್ನು ಹಮ್ಮಿಕೊಂಡು ಹತ್ತು ಹಲವಾರು ಅಂಗ ಸಂಸ್ಥೆಗಳನ್ನು ಹುಟ್ಟು ಹಾಕಿದರು. ಆ ಮುಖಾಂತರ ಸಾಮಾಜಿಕ ಸೇವಾ ಹರವನ್ನು ಹೆಚ್ಚಿಸಿಕೊಂಡರು. "ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನ"ದ ಆಶ್ರಯದಲ್ಲಿ

೧. ಶ್ರೀ ಶಂಕರಲಿಂಗ ಶಿವಾಚಾರ್ಯ ಸಂಗೀತ ಪಾಠ ಶಾಲೆ

೨. ಶ್ರೀ ವೀರೂಪಾಕ್ಷ ಶಿವಾಚಾರ್ಯ ಸಂಸ್ಕೃತ ವೈದಿಕ ಪಾಠಶಾಲೆ

೩. ಶ್ರೀ ಜಗದ್ಗುರು ರೇಣುಕಾಚಾರ್ಯರ ಕನ್ನಡ ಹಿರೀಯ ಪ್ರಾಥಮಿಕ ಶಾಲೆ

೪. ಶ್ರೀ ಗುರುಶಾಂತೇಶ್ವರ ಪ್ರೌಢಶಾಲೆ

೫. ದೂರ ಶಿಕ್ಷಣ ಅಧ್ಯಯನ ಕೇಂದ್ರಗಳನ್ನು ಸ್ಥಾಪಸಿ ಆ ಮುಖಾಂತರ ಸಾಮಾಜಿಕ ಕಾರ್ಯಗಳನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದರು.

"ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನ"ದಿಂದ ಕನ್ನಡ ನಾಡೇ ಬೆರಗಾಗುವ ರೀತಿಯಲ್ಲಿ ಅಕ್ಷರ ಅನ್ನದಾಸೋಹ ಕಾರ್ಯಗಳು ನಡೆಯುತ್ತಿವೆ.

ಮಠಗಳು ಕೇವಲ ಪೂಜೆ ಪಾರಾಯಣಗಳಿಗೆ ಮಾತ್ರ ಸೀಮಿತವಾಗದೆ ಧರ್ಮದೊಂದಿಗೆ ಸಮಾಜ ಸೇವಾಭಾವವನ್ನು ಹೊಂದಿರಬೇಕೆಂಬುದು ಶಿವಾಚಾರ್ಯರರ ನಿಲುವು.

ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದ ವತಿಯಿಂದ ಸಮಾಜದ ವಿವಿಧ ಕಾರ್ಯಗಳಲ್ಲಿ ಸಾಧನೆ ಮಾಡಿದವರನ್ನು ಗುರುತಿಸಿ ಅವರನ್ನು ಹುಕ್ಕೇರಿ ನಾಡಿಗೆ ಕರೆತಂದು ಅವರಿಗೆ ಸನ್ಮಾನ ಗೈದು ಅವರನ್ನು ಇನ್ನಷ್ಟು ಸಮಾಜ ಮುಖಿಗಳಾಗುವಂತೆ ಅನುಗ್ರಹಿಸುವಂತಹ ಪರಿ ಮೆಚ್ಚುವಂತಹದ್ದು. ಈ ನಿಟ್ಟಿನಲ್ಲಿ ಸಮಾಜದ ಸುಧಾರಕರು, ಉತ್ತಮ ಶಿಕ್ಷಕರು, ಕಲಾವಿದರು, ಸಂಗೀತಗಾರರು, ರಾಜಕಾರಣಿಗಳನ್ನೆಲ್ಲ ಗೌರವಿಸಿ ಸನ್ಮಾನಿಸಲಾಗುತ್ತದೆ. ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ತಮ್ಮ ವಚನವೊಂದರಲ್ಲಿ "ಅಜ್ಞಾನಿಯ ಗುರುವಾಗುವುದಕ್ಕಿಂತ ಸುಜ್ಞಾನಿಯ ಶಿಷ್ಯನಾಗಿರುವುದೇ ಲೇಸು. ಭ್ರಷ್ಟ ಸಚಿವ ಸ್ಥಾನ ಪಡೆಯುವಕ್ಕಿಂತ ಶ್ರೇಷ್ಠ ಪ್ರಜೆಯಾಗಿರುವುದೇ ಲೇಸು, ಸಮಸ್ಯೆಯ ಸ್ವಾಮಿಯಾಗಿರುವುದಕ್ಕಿಂತ ಜನ ಸೇವಕನಾಗಿರುವುದೇ ಲೇಸು, ಅಪ್ರಾಮಾಣಿಕ ನೌಕರನಾಗಿರುವುದಕ್ಕಿಂತ ರೈತನಾಗಿ ಹೊಲದೀ ದುಡಿಯುವುದು ಲೇಸು, ಲಂಚದ ಮಂಚವನ್ನೇರುವುದಕ್ಕಿಂತ ಕೊಂಚ ದೇಶ ಸೇವೆ ಮಾಡುವುದೇ ಲೇಸು, ಹುಕ್ಕೇರಿಶಾ ನಿನ್ನನ್ನು ಹುಡುಕಲು ಕಾಡುಮೇಡು ತಿರುಗುವುದಕ್ಕಿಂತ ಸತ್ಯ ಶುದ್ಧ ಕಾಯಕ ಮಾಡುವುದೇ ಲೇಸು"[೧೦] ಎಂದು ಶರಣರು ನುಡಿದಂತೆ ಬದುಕಿದನ್ನು ಮನನ ಮಾಡಿಕೊಂಡ ಶ್ರೀ.ಷ.ಬ್ರ, ಚಂದ್ರಶೇಖರ ಶಿವಾಚಾರ್ಯರು ನಿಷ್ಠಾವಂತ ಕಾಯಕ ಜೀವಿಗಳಿಗೆ ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದ ವತಿಯಿಂದ ಅವರ ಕಾರ್ಯ ಸಾಧನೆಯನ್ನು ಮೆಚ್ಚಿ ಗೌರವಿಸಿ ಸನ್ಮಾನಿಸುವ ಮಹತ್ವದ ಸಾಧಕರಿಗೆ ಪಾರಿತೋಷಕ ವಿತರಿಸಿ ಗೌರವಿಸುವ ಸೇವೆಯನ್ನು ಕೈಗೊಂಡಿದ್ದಾರೆ. ಈ ನಿಟ್ಟಿನಲ್ಲಿ ೯೭ ವರ್ಷಗಳ ಗಾನಯೋಗಿ ಡಾ. ಪುಟ್ಟರಾಜ ಗವಾಯಿಗಳ ಹುಟ್ಟು ಹಬ್ಬದ ನಿಮಿತ್ಯ ಅವರನ್ನು ಆಸ್ಪತ್ರೆಯಲ್ಲಿಯೇ ಗೌರವಿಸಲಾಯಿತು. ವಿವಿಧ ನಾಡಿನ ಮಠಾಧಿಪತಿಗಳ

ಪುಣ್ಯ ಸ್ಮರಣೆಯ ನಿಮಿತ್ಯ ಅಂಧ ಮಕ್ಕಳಿಗೆ, ರೋಗಿಗಳಿಗೆ ಹಣ್ಣು ಹಾಲು ವಿತರಿಸುವ ಸೇವಾ ಕಾರ್ಯವನ್ನು ನಿಷ್ಠೆಯಿಂದ ಮಾಡುತ್ತ ಬಂದಿದ್ದಾರೆ. ಶ್ರೀ ಮಠದ ಆಶ್ರಯದಲ್ಲಿ ಜನ ಸಾಮಾನ್ಯರು ಆರೋಗ್ಯ ತಪಾಸಣಾ ಕಾರ್ಯಗಳನ್ನು ಹಮ್ಮಿಕೊಂಡು ಜನರಿಗೆ ಆರೋಗ್ಯವೇ ಭಾಗ್ಯ ಎಂಬ ಕಿವಿ ಮಾತನ್ನು ತಿಳಿಸುವ ಕಾರ್ಯ ಮೆಚ್ಚುವಂತಹದ್ದು.

ಕನ್ನಡ ನುಡಿ, ಕನ್ನಡ ಗಡಿ ಜಾಗೃತಿ ಜಾಥಾ ಬೆಳಗಾವಿಯಿಂದ ಕಾರವಾರದವರೆಗೆ ಮುಖ್ಯಮಂತ್ರಿ ಚಂದ್ರು ಅವರ ನೇತೃತ್ವದಲ್ಲಿ ನಡೆದಾಗ ಗಡಿನಾಡ ಮಠದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು, ನಾಗನೂರು ರುದ್ರಾಕ್ಷಿ ಮಠದ ಸಿದ್ಧರಾಮೇಶ್ವರ ಸ್ವಾಮಿಗಳು, ಅಥಣಿ ಮೋಟಗಿ ಮಠದ ಪ್ರಭು ಚನ್ನಬಸವ ಸ್ವಾಮೀಗಳು, ಶಾಶ್ವತವಾಗಿ ಗಡಿ ಸಮಸ್ಯೆಯನ್ನು ಪರಿಹಾರ ಮಾಡಿ ಗಡಿ ಕನ್ನಡಿಗರು ನೆಮ್ಮದಿಯಿಂದ ಇರಲು ಅವಕಾಶ ಮಾಡಿಕೊಡಬೇಕೆಂದು ವರದಿಯನ್ನು ಮಂಡಿಸಿ ಸಾಮಾಜಿಕ ಕಳಕಳಿಯನ್ನು ವಿಸ್ತರಿಸಿಕೊಂಡಿದ್ದಾರೆ.

ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಿಂದ ಅಂಗವಿಕಲರಿಗೆ ವಿವಾಹಯೋಗ ಒದಗಿಸುವ ಯೋಜನೆಳಲ್ಲಿದೆ. ಪ್ರತಿಷ್ಠಾನದಿಂದ ಬಾಲಚಂದ್ರ ಜಾರಕಿಹೋಳಿ, ಸತೀಶ ಜಾರಕಿಹೋಳಿ, ಶಶಿಕಾಂತ ನಾಯಿಕ, ಪ್ರಕಾಶ ಹುಕ್ಕೇರಿಯಂತಹ ಧೀಮಂತ ರಾಜಕೀಯ ಧುರೀಣರನ್ನು ಸನ್ಮಾನಿಸಿ ಆಶೀರ್ವಧಿಸುವ ಕಾರ್ಯ ಶಿವಾಚಾರ್ಯರಿಗೆ ಬಹು ಮೆಚ್ಚಿಗೆಯ ಕೆಲಸ. ಪ್ರತಿಷ್ಠಾನದಿಂದ ನಾಡಿನ ಗಣ್ಯಮಾನ್ಯರಿಗೆ ಶ್ರೀ ರೇಣುಕಾಚಾರ್ಯ ಪ್ರಶಸ್ತಿಗಳನ್ನು ಕೊಡಲಾಗಿದೆ. ಅವುಗಳನ್ನು ಪ್ರತ್ಯೇಕವಾಗಿಯೇ ನೋಡುವುದು ಉಚಿತ.

- **ಶಿಕ್ಷಣ** : ಒಂದು ದೇಶದ ಸಂಪತ್ತೆಂದರೆ ಆ ದೇಶದ ಆರೋಗ್ಯವಂತ ಪ್ರಜೆಗಳು. ಆರೋಗ್ಯ ಕೇವಲ ದೇಹಕ್ಕೆ ಸಂಬಂಧಿಸಿದ್ದು ಮಾತ್ರವಲ್ಲದೇ ಮನಸ್ಸಿಗೂ ಸಂಬಂಧಿಸಿದೆ. ಮನಸ್ಸು ಆರೋಗ್ಯವಾಗಿರಬೇಕೆಂದರೆ ಆ ವ್ಯಕ್ತಿಗೆ ಉತ್ತಮ ಸಂಸ್ಕಾರ ದೊರೆಯಬೇಕು. ಅದು ಕುಟುಂಬ,

ಪರಿಸರ, ಗುರುಗಳು ಹಿರಿಯರಿಂದ ದೊರೆಯುವಂತಹದ್ದು. ಇವುಗಳೊಂದಿಗೆ ಶಿಕ್ಷಣ ಮನುಷ್ಯನನ್ನು ಸಂಸ್ಕಾರವಂತವನ್ನಾಗಿ ಮಾಡುತ್ತದೆ. ಸ್ವಾಮಿ ವಿವೇಕಾನಂದರ ವಿಚಾರದಂತೆ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು "ಹಸಿದ ಹೊಟ್ಟೆಗೆ ಮೊದಲು ಅನ್ನ ನೀಡಬೇಕು, ಆ ಮೇಲೆ ವಿದ್ಯೆ ಕೊಡಬೇಕು ನಂತರ ಉಪದೇಶಿಸಬೇಕು"ಎಂಬುದನ್ನು ಸಾಕಾರಗೊಳಿಸಿದರು. ಗಡಿಭಾಗದಲ್ಲಿ ಕನ್ನಡದ ಶಿಕ್ಷಣ ಅವಶ್ಯವಿರುವುದನ್ನು ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಿಂದ ೨೦೦೫ರಲ್ಲಿ ಜಗದ್ಗುರು ರೇಣುಕಾಚಾರ್ಯ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ಪ್ರಸ್ತುತದಲ್ಲಿ ೨೨೦ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದಾರೆ. ೨೦೦೬ರಲ್ಲಿ ಶ್ರೀ ಗುರುಶಾಂತೇಶ್ವರ ಪ್ರೌಢಶಾಲೆಯನ್ನು ಪ್ರಾರಂಭಿಸಿದರು.

ಸಮಾಜ ಮತ್ತು ಶಿಕ್ಷಣದ ಬಗೆಗೆ ಅಪಾರ ಕಾಳಜಿಯುಳ್ಳ ಶಿವಾಚಾರ್ಯರ ವ್ಯಷ್ಟಿ ಮತ್ತು ಸಮಷ್ಟಿಗಳೆರಡೂ ಬೆಳೆದರೆ ಮಾತ್ರ ಸಮಾಜದ ದೇಶದ ಅಭ್ಯುದಯ ಸಾಧ್ಯವೆನ್ನುವ ನಿಲುವನ್ನು ಹೊಂದಿದವರು. ವಸ್ತುನಿಷ್ಠ ಚಿಂತಕರು. ವ್ಯವಸ್ಥೆಯಲ್ಲಿ ಎಲ್ಲರೂ ಒಂದೇ ವರ್ಗದವರಿಲ್ಲ. ಬಡವರು ಅನೇಕ ಕಾರಣಗಳಿಂದ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿ ಹೊಟ್ಟೆ ಪಾಡಿಗೆ ದುಡಿಮೆಯನ್ನು ಅವಲಂಬಿಸಿರುತ್ತಾರೆ. ಅಂತವರಿಗೆ ಇರುವ ಶಿಕ್ಷಣದ ಆಸಕ್ತಿಯನ್ನು ಪೂರೈಸುವಲ್ಲಿ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು "ದೂರ ಶಿಕ್ಷಣ ಅಧ್ಯಯ ಕೇಂದ್ರ"ವನ್ನು ೨೦೧೦ರಲ್ಲಿ ಪ್ರಾರಂಭಿಸಿದರು. ಇದರಿಂದ ಹುಕ್ಕೇರಿ ಭಾಗದವರಿಗೆ ಮಾತ್ರವಲ್ಲದೇ ಕೊಲ್ಹಾಪೂರ ಜಿಲ್ಲೆಯ 'ಗಡಿಂಗ್ಲಜ'ದ ಮಾರ್ಕೆಟ್‌ಯಾರ್ಡ್‌ದಲ್ಲಿ ಇವರ ಉಪಕಚೇರಿಯನ್ನು ಪ್ರಾರಂಭಿಸಿ ಆ ಭಾಗದ ಜನರಿಗೂ ಪ್ರಯೋಜನಕಾರಿ ಸೇವೆಯನ್ನು ಒದಗಿಸುತ್ತಿದ್ದಾರೆ.

ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಕಲಾರಾಧಕರು. "ಕಲೆ ಜ್ಯೋತಿರ್ಮಯವಾದುದು, ನಭೋಮಂಡಲದ ಬೆಳಗಿನಲ್ಲಿ ಹರಿವ ನದಿಯಲ್ಲಿ, ಬೀಸುವ

ಗಾಳಿಯಲ್ಲಿ, ಗಿಡಗಂಟೆಗಳಲ್ಲಿ ಸಂಗೀತವಿದೆ, ನೃತ್ಯವಿದೆ. ಪ್ರಾಚೀನ ಋಷಿಗಳು ಸಹಸಂಗೀತದಲ್ಲಿ ತನ್ಮಯವಾದುದ್ದುಂಟು. ಸಂಗೀತವೆಂಬುದು ಪ್ರತಿಯೊಬ್ಬ ಮಾನವನಲ್ಲೂ ಅಂತರ್ಗತವಾಗಿರುವ ಸಹಜಗುಣ ಪಶು ಪಕ್ಷಿಗಳು ಸಹ ಸಂಗೀತಕ್ಕೆ ತಲೆಬಾಗುತ್ತವೆ."[೧೧] ಇಂಥವರಲ್ಲಿ ಸದ್ಗುಣ ಸಂಪನ್ನರಾದ ಶಿವಾಚಾರ್ಯರು ಆರಾಧಿಸುವುದು ಸಹಜವಲ್ಲವೇ? ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ (ರಿ) ಪ್ರತಿಷ್ಠಾನ ಸ್ಥಾಪಿಸುವುದಕ್ಕಿಂತ ಮೊದಲೇ ೧-೬-೨೦೦೧ರಲ್ಲಿ ೫೬ನೇ ಪೀಠಾಧಿಪತಿಗಳಾದ ಶ್ರೀ ಶಂಕರಲಿಂಗ ಶಿವಾಚಾರ್ಯರ ಸಂಗೀತ ಪಾಠಶಾಲೆಯನ್ನು ಸ್ಥಾಪಿಸಿದ್ದಾರೆ. ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠದ ವತಿಯಿಂಂದ ನವರಾತ್ರಿಯ ದಸರಾ ಉತ್ಸವದಲ್ಲಿ ೯ ದಿನಗಳ ವರೆಗೆ ಸಂಗೀತ ಕಚೇರಿಯು ವೈಭವದಿಂದ ನಡೆಯುತ್ತದೆ. ಗಡಿಭಾಗದಲ್ಲೊಂದು ಸಂಗೀತ ಶಾಲೆ ತೆರೆದು ನಾಡಿನ ಜನರಿಗೆ ಸಂಗೀತ ಸುಧೆಯನ್ನು ನೀಡುವುದು ಮಠದ ಮತ್ತು ಇಂದಿನ ಶಿವಾಚಾರ್ಯರ ಸಾಧನೆಯಾಗಿದೆ.

ಸಂಗೀತ-ನರ್ತನಗಳು ನಮ್ಮ ಪರಂಪರೆಯ ಸಂಕೇತಗಳೆಂಬುದನ್ನು ಅರಿತ ಶ್ರೀಗಳು ೨೦೦೬ರಲ್ಲಿ "ನಟರಾಜ ನಾಟ್ಯ ಶಾಲೆ" ಪ್ರಾರಂಭಿಸಿದರು. ಇಲ್ಲಿ ಮುಖ್ಯವಾಗಿ ಭರತ ನಾಟ್ಯ ಹಾಗೂ ಶಾಸ್ತ್ರೀಯ ನೃತ್ಯಗಳ ತರಬೇತಿಯೇ ಪ್ರಮುಖವಾಗಿದೆ. ಹೀಗೆ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಶಿಕ್ಷಣ, ಸಂಗೀತ, ನಾಟ್ಯ ಶಾಲೆಗಳನ್ನು ಪ್ರಾರಂಭಿಸಿ ಗಡಿನಾಡಿನ ಭಾಗದಲ್ಲಿ ಕನ್ನಡತನವನ್ನು ಉಳಿಸುವ ಹಿರಿದಾದ ಸೇವೆ ಸಲ್ಲಿಸುತ್ತಿದ್ದಾರೆ.

- **ಶ್ರೀ ಶಂಕರಲಿಂಗ ಶಿವಾಚಾರ್ಯರ ಸಂಗೀತ ಪಾಠಶಾಲೆ** : "ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠ"ದ ೫೬ನೇ ಪೀಠಾಧಿಪತಿಗಳಾದ ಶ್ರೀ ಶಂಕರಲಿಂಗ ಶಿವಾಚಾರ್ಯರು ಸಂಗೀತ ಪ್ರೀಯರು ಅಷ್ಟೇ ಅಲ್ಲ ಸಂಗೀತ ವಿಧ್ವಾಂಸರು ಹೌದು. ಎಲ್ಲ ವಾದ್ಯಗಳನ್ನು ನುಡಿಸುತ್ತಿದ್ದ ಇವರು ರುದ್ರವೀಣೆಯಲ್ಲಿ ನಿಷ್ಣಾತರಾಗಿದ್ದರು. ಇಂಥ ಅದ್ಭುತ ಸಂಗೀತ ಪ್ರತಿಭೆಯನ್ನು

ಅಜರಾಮರಗೊಳಿಸಲೆಂದು ಹಾಗೂ ಗಡಿನಾಡ ಭಾಗದಲ್ಲಿ ಕನ್ನಡಿಗರಿಗೆ ಇರುವ ಸಂಗೀತ ಕೊರತೆ ನೀಗಿಸಲು ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಶ್ರೀ ಶಂಕರಲಿಂಗ ಶಿವಾಚಾರ್ಯರ ಹೆಸರಲ್ಲಿ ಸಂಗೀತ ಶಾಲೆ ಪ್ರಾರಂಭಿಸಿದರು. ಈ ಶಾಲೆಯಲ್ಲಿ ಅಂದಿನಿಂದ ಇಂದಿನವರೆಗೆ ಅನೇಕ ಜನ ಸಂಗೀತ ಕಲಿತು ದೊಡ್ಡ ದೊಡ್ಡ ವಿದ್ವಾಂಸರಾಗಿದ್ದಾರೆ. ಅವರಲ್ಲಿ ಅಶ್ವಿನಿ ಚನ್ನಣವರು, ವೀಣಾ ಮುನ್ನೋಳಿ, ಶ್ವೇತಾ ತುಬಚಿ, ಶಾಂತಿನಾಥ ದೋಣಿ, ಸಿದ್ಧಲಿಂಗಯ್ಯ ಹಿರೇಮಠ, ಶಿಲ್ಪಾ ಹಳೇಮನಿ, ನಟರಾಜ ದರ್ಬಾರೆ, ಸುವರ್ಣಾ ರವೀಂದ್ರ ದಡ್ಡಿಮನಿ, ಶೃತಿ ಬಾಗೇವಾಡಿಯಂಥವರನ್ನೆಲ್ಲ ಗುರುತಿಸಬಹುದು. ಈ ಸಂಗೀತ ಶಾಲೆಗೆ ಉತ್ತರ ಕರ್ನಾಟದವರೆಲ್ಲ ಎರಡು ವರ್ಷದ ಪ್ರವೇಶ ವಿಶಾರದ ಮತ್ತು ಸಂಗೀತ ರತ್ನ ಪರೀಕ್ಷೆ ಕಟ್ಟಿ ಪಾಸಾದವರು. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರಾಗಲು ಅರ್ಹತೆ ಪಡೆಯುತ್ತಾರೆ. ಉತ್ತರ ಕರ್ನಾಟಕದ ಜನರಿಗೆ ಇದೊಂದು ವರದಾನವಾಗಿದೆ ಎಂದೇ ಹೇಳಬಹುದು.

- **ಸಾಹಿತ್ಯ ಮತ್ತು ನಾಡುನುಡಿ** : "ಹುಕ್ಕೇರಿ ಶ್ರೀಗುರುಶಾಂತೇಶ್ವರ ಹಿರೇಮಠ"ದ ೫೯ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಕೇವಲ ನಾಲ್ಕು ಗೋಡೆಗಳ ಮಧ್ಯ ಕುಳಿತು ಪೂಜೆ, ಪ್ರಸಾದ, ಪ್ರವಚನವನ್ನು ನೀಡುವದಲ್ಲವೆಂಬುದನ್ನು ಅರಿತು ಪಂಚಾಚಾರ್ಯ ಪೀಠದ ಪರಂಪರೆಯನ್ನು ಪಾಲಿಸುತ್ತ ಸಮಾಜಮುಖಿಯಾದರು, ಜನರಭಾವ-ಭಾನೆಗಳಿಗೆ ಸ್ಪಂದಿಸಿದರು. ತಾವು ಮಠದ ಪಟ್ಟಾಧಿಕಾರವನ್ನು ಸ್ವೀಕರಿಸಿದಂದಿನಿಂದ ಜಾತಿ, ಮತ, ಪಂಥ, ಪಂಗಡ ಎಣಿಸದೆ ಎಲ್ಲರನ್ನೂ ಸಮಭಾವದಿಂದ ಕಾಣುತ್ತ ಎಲ್ಲರೊಂದಿಗೆ ಬೆರೆತರು. ಈ ಅನುಭವವೇ ಅವರನ್ನು ಇನ್ನಷ್ಟು ಕಾರ್ಯತತ್ಪರತೆಗೆ ಒಳಪಡಿಸಿತು.

ತಾವಿಟ್ಟ ಹೆಜ್ಜೆಗಳಲ್ಲಿ ನಡೆದ ದಾರಿಯಲ್ಲಾದ ಅನುಭವಗಳು ಅವರನ್ನು ಸಾಹಿತ್ಯದತ್ತ ಮುಖಮಾಡಿಸಿದವು. ಆದುನಿಕ ವ್ಯವಸ್ಥೆ, ನಾಗರಿಕತೆಯಲ್ಲಿ ನಲುಗಿದ ಮಾನವೀಯ

ಮೌಲ್ಯಗಳೆಲ್ಲ ವಚನ ರೂಪದಲ್ಲಿ ಹೊರಬಂದವು. ಅವರ "ವಚನ ಕಾರಂಜಿ" ಕವನ ಸಂಕಲನ ನಾಡಿನಾದ್ಯಂತ ಪ್ರಚಾರ ಪಡೆದಿದೆ. ಶಿವಶರಣರ ಮುಲಭೂತ ಸಿದ್ಧಾಂತವಾದ ಮಾನವೀಯ ಅಂತಃಕರಣದ ಜೀವಜಲದಲ್ಲಿ ಮಿಂದು ಪಾವನಿಗರಾಗಬೇಕೆಂಬ ಅರಿವುಶಿವಾಚಾರ್ಯರ ವಚನಗಳಲ್ಲಿ ಮೂಡಿಬಂದಿದೆ. "ಹುಕ್ಕೇರಿಶಾ" ಎಂಬ ಕಾವ್ಯನಾಮದೊಂದಿಗೆ ಪ್ರಚಾರ ಪಡೆದಿದ್ದಾರೆ.

ಅವರ ವಚನಗಳಲ್ಲಿ ಕಂಡು ಬರುವ ಮುಖ್ಯ ಅಂಶವೇನೆಂದರೆ ಕವಿ ಹುಕ್ಕೇರಿಶರ ನಿರಾಡಂಬರ ವ್ಯಕ್ತಿತ್ವ ನಿರುಪಾಧಿಕವಾಗಿರುವಂತೆ ನಿತ್ಯ ನಿರ್ಮಲವಾಗಿದೆ ಎಂಬುದು ಅವರ ವಚನಗಳ ಮೂಲಕವೇ ತಿಳಿದು ಬರುತ್ತದೆ. ವಚನ ಬರೀ ಬಾಯಿ ಮಾತಲ್ಲ ಅದು ಅಂತರಾಳದ ಮಾತೆಂಬುದು ಅವರ ವಚನಗಳಿಂದ ತಿಳಿದು ಬರುತ್ತದೆ. ಹೀಗೆ ಶಿವಾಚಾರ್ಯರು ಸಾಹಿತ್ಯ, ಸಂಗೀತ, ನಾಟ್ಯ, ಶಿಕ್ಷಣಗಳ ಸೇವೆಯೊಂದಿಗೆ ಶ್ರೀಮಠದ ಅಂಗ ಸಂಸ್ಥೆಯಾದ ಶ್ರೀ ಗುರು ಶಾಂತೇಶ್ವರ ಜನಕಲ್ಯಾಣ ಪ್ರತಿಷ್ಠಾನದ ಮೂಲಕ "ವೀರಶೈವ ಗ್ರಂಥಮಾಲೆ" ಪ್ರಾರಂಭಿಸೀದ್ದು ಅದರ ಮೂಲಕ ಪ್ರಕಾಶಗೊಂಡ ಕೃತಿ 'ವಚನ ಕಾರಂಜಿ' ಚೊಚ್ಚಲ ಕೃತಿ. ಇದಕ್ಕೆ ಗ್ರಂಥದಾನಿ ಶಿಕ್ಷಣ ಪ್ರೇಮಿ ಶ್ರೀ ರಾಮಣ್ಣ ಹುಕ್ಕೇರಿ.

"ಹುಕ್ಕೇರಿಶಾ" ವಚನಾಂಕಿತದ ವಚನಗಳು ೭೩ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಶಿವಾಚಾರ್ಯರು ಪಾಲ್ಗೊಂಡು ಓದಿದ ವಚನಗಳು ಸ್ತೋತ್ರ ವರ್ಗವನ್ನೆಲ್ಲ ಆಕರ್ಷಿಸಿ ಅಮೋಘ ಕರತಾಡನದೊಂದಿಗೆ ಪ್ರಶಂಸಿದರು.

'ವಚನ ಚಂದ್ರಿಕೆ' ಮಾತ್ರವಲ್ಲದೆ "ವಚನ ವಸಂತ", "ವಚನ ತೀರ್ಥ;' 'ವಚನ ತರಂಗಿಣಿ'ಯೆಂಬ ಭಕ್ತಿಗೀತೆಗಳ ಧ್ವನಿಸುರುಳಿಗಳನ್ನು ಹೊರತಂದಿದ್ದಾರೆ. ಅಲ್ಲದೆ ಅದರ ವಚನಗಳ ಗುಚ್ಛ "ಹುಕ್ಕೇರೀಶ" ಎಂಬ ಧ್ವನಿಸುರುಳಿ ಹೊರತಂದಿದ್ದಾರೆ.

- **ವಚನ ತೀರ್ಥದಲ್ಲಿ :** ಕ್ರಮವಾಗಿ

೧) ನಿರೂಪಣೆಯಿದೆ – ರಂಭಾಪುರಿ ಜಗದ್ಗುರುಗಳ ಶಾಖಾಮಠದ

೨) ಗುರುವೇ ನೀ

೩) ಬಿಚ್ಚು ನುಡಿಗೆ

೪) ಭೋಗ ಅತೃಪ್ತಿ

೫) ಮಾತಾಡಿತು ಮರವು

೬) ನಾನು ಪಶು

೭) ಬೈಯುವವರ

೮) ರೂಪವತಿಯಾದರೆ

೯) ದೂರವಾಣಿ ಬಂತು

೧೦) ಮಗನಿಗೆ ಎದೆ ಹಾಲು

೧೧) ಸ. ಎಂದರೆ

ಎಂಬ ವಚನಗಳ ಧ್ವನಿಸುರುಳಯಾದರೆ ವಚನ ತರಂಗಿಣಿಯಲ್ಲಿ ಕ್ರಮವಾಗಿ

೧) ನಿರೂಪಣೆ

೨) ಷಟಸ್ಥಲ ಸಾಧಿಸಿ

೩) ವೈಭವದಿಂದ ವೈರಾಗ್ಯ ಸಾಧನೆ

೪) ನೂರು ಸಮಾವೇಶ ಮಾಡಿದರೇನು

೫) ನೊಂದವರಿಗೆ ಬೆಂದವರಿಗೆ

೬) ದೇವರಿಗೆ ಬೇಕು ಎಂಬುವುದಕ್ಕೆ

೭) ನೀ ಕರೆದಾಗ ಬರುವೆನಯ್ಯಾ

೮) ಬುದ್ಧನ ಭಾವ ಎನಗೆ ನೀಡಯ್ಯಾ

೯) ನಮಗೆ ಬೇಡಯ್ಯಾ ಅಮೃತ ಹಸ್ತ

೧೦) ಹೆಣ್ಣು ಹುಟ್ಟಿದರೆ ಹುಣ್ಣು ಹುಟ್ಟಿತು ಎನ್ನುವರು

- 'ಹುಕ್ಕೇರಿಶ' ಧ್ವನಿಸುರುಳಿಯಲ್ಲಿ ಕ್ರಮವಾಗಿ

೧) ನಿರೂಪಣೆ

೨) ಪ್ರಣವ ಪಂಚಾಕ್ಷರಿ

೩) ಸ್ವಾಮಿ ಎಂದರೆ

೪) ಎನ್ನ ಚಿತ್ತಕಳೆಯ ತುಂಬಿ

೫) ಕಾಯಕದ ಬಗ್ಗೆ ಉಪನ್ಯಾಸ

೬) ಅಜ್ಞಾನಿಯ ಗುರು

೭) ನಡೆದಾಡುವಾಗ ಬಂದವಯ್ಯ

೮) ದೇಹ ದೇಹಕ್ಕೆ

೯) ನಗೆಯ ಬರುತಿದೆ

ಇಲ್ಲಿರುವ ವಚನಗಳು ಜನಮಾನಸದಲ್ಲಿ ಜಾಗೃತಿ ಮೂಡಿಸುವಂಥವುಗಳಾಗಿವೆ. ಅಲ್ಲದೆ ಶ್ರೀ ಗುರುಶಾಂತೇಶ್ವರ ಆಡಿಯೋ-ವಿಡಿಯೋ ಅರ್ಪಿಸುವ ಹುಕ್ಕೇರಿ ಹಿರೇಮಠವನ್ನು ಕುರಿತು ಭಕ್ತಿಗೀತೆಗಳು 'ಮನುಕುಲದ ಮಂದಾರ' ಧ್ವನಿ ಸುರುಳಿಯಲ್ಲಿ

೧) ನಿರೂಪಣೆ

೨) ಶ್ಲೋಕ

೩) ಮನುಕುಲದ ಮಂದಾರ

೪) ಪೊರೆಯೆನ್ನ ಪ್ರಭುವೆ

೫) ಶಿವಾಚಾರ್ಯ ಶ್ರೀ ಚಂದ್ರಶೇಖರ

೬) ಓ ಕರುಣವಂತ

೭) ಕರುಣವಂತ ಸದ್ಗುರು

೮) ಹುಕ್ಕೇರಿ ಸದ್ಗುರುವೇ

೯) ಶರಣು ಬನ್ನಿ

೧೦) ಹುಕ್ಕೇರಿ ಹೂಬಳ್ಳಿ

ಹೀಗೆ ಸಾಹಿತ್ಯ ಹಾಗೂ ರಾಗ ಸಂಯೋಜನೆ ನೀಡಿದ ಪರಮ ಪೂಜ್ಯ ಶ್ರೀ ನಿಜಗುಣ ಶಿವಯೋಗಿಗಳ ಇನ್ನೊಂದು ಧ್ವನಿಸುರುಳಿ "ಸಮಾನತೆಯ ಶ್ರೀ". "ಹುಕ್ಕೇರಿ ಹಿರೇಮಠದ ವೈಭವ" ಹಾಗೂ ಶ್ರೀ ಗುರು ಶಾಂತೇಶ್ವರ ಆಡಿಯೋ-ವಿಡಿಯೋ ಅರ್ಪಿಸಿದ ಶ್ರೀ ವಿರುಪಾಕ್ಷಲಿಂಗ ವೈದಿಕ ಮತ್ತು ಸಂಸ್ಕೃತ ಪಾಠಶಾಲೆ ಅರ್ಪಿಸುವ "ಶ್ರೀ ರುದ್ರಪಾಠ" ಧ್ವನಿಸುರುಳಿ, ಪರಮಪೂಜ್ಯ ಶ್ರೀ ನಿಜಗುಣದೇವರ ಸಂಯೋಜನೆಯ "ಜಯ ಗುರುಶಾಂತ" ಹುಕ್ಕೇರಿ ಹಿರೇಮಠದ ಸ್ತೋತ್ರ ಹಾಗೂ ಮಂಗಳಾರತಿಗಳು ಪೂಜ್ಯ ಶ್ರೀ ನಿಜಗುಣ ದೇವರು ರಚಿಸಿದ ಸಂಕಲನ ಒಂದು ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನ (ರಿ) ಹಿರೇಮಠ ಹುಕ್ಕೇರಿ – ಇದರ ಪ್ರಕಾಶನದಲ್ಲಿ ಪ್ರಕಟಗೊಂಡಿದೆ. ಅಲ್ಲದೆ ದೂರದರ್ಶನ 'ಸುವರ್ಣ' ಚಾನಲ್‌ನಲ್ಲಿ ಅವರ ಪ್ರವಚನಗಳು ಪ್ರಸಾರಗೊಂಡಿವೆ. 'ಮಠದ ಅಂಗಳ'ವೆಂಬ ಧ್ವನಿತಟ್ಟೆ ಬಿಡುಗಡೆಯಾಗಿದೆ. ಈಗವರು ಹುಕ್ಕೇರಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾಗಿದ್ದಾರೆ.

ಶ್ರೀ.ಷ.ಬ್ರ. ಶ್ರೀ ಚಂದ್ರಶೇಖರ ಶಿವಾಚಾರ್ಯರ ಸಾಹಿತ್ಯ ಕುರಿತು ಇನ್ನೊಂದು ವಿಶೇಷತೆ ಏನೆಂದರೆ ಇವರ ವಚನಗಳಲ್ಲಿಯ ಸರ್ವಧರ್ಮಗಳ ಮರ್ಮವೊಂದೇ ಎಂಬ ಅಂಶಗಳು ಉರ್ದು ಸಾಹಿತಿಯನ್ನು ಆಕರ್ಷಿಸಿವೆ. ಶಿವಾಚಾರ್ಯರ ವಚನ ಕಾರಂಜಿ ಉರ್ದು ಭಾಷೆಗೆ ಅನುವಾದಗೊಂಡಿದೆ. ಅನುವಾದ ಮಾಡಿದವರು ಶರೀಫ ಅಹ್ಮದ್

ಶರೀಫ, ಬೇಳಗಾವಿ ಹೀಗೆ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಸಾಹಿತ್ಯ ಕನ್ನಡಿಗರನ್ನಷ್ಟೇ ಅಲ್ಲದೇ ಅನ್ಯಭಾಷೆಯವರನ್ನು ಆಕರ್ಷಿಸಿದ್ದು ಅವರಲ್ಲಿರುವ ಸರ್ವಧರ್ಮ ಸಮನ್ವಯತೆಯನ್ನು ತೋರಿಸುತ್ತದೆ. ಅಲ್ಲದೇ ಸಾಹಿತಿಗಳು ತಾವು ಬರೆದಂತೆ ಬದುಕಬೇಕು ಎಂಬುದು ಅವರ ಘನ ನಿಲುವು ಆಗಿದೆ.

- **ಡಾ. ಸ.ಜ.ನಾ. ಗ್ರಂಥಾಲಯ** : 'ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠ'ದ ಇಂದಿನ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಶೈಕ್ಷಣಿಕ ಸಾಹಿತ್ಯ ಕಾರ್ಯ ಸಾಧನೆಯನ್ನು ಮೆಚ್ಚಿದ ಡಾ. ಸ.ಜ. ನಾಗಲೋಟಿ ಮಠರವರು ಸ್ವತಃ ಶರಣ ಜೀವಿಗಳು ತಾವು ಓದಿತ್ತಿದ್ದ ಸಾವಿರಾರು ಗ್ರಂಥಗಳನ್ನು ಮಠಕ್ಕೆ ದೇಣಿಗೆ ನೀಡಿದ್ದಾರೆ. ಸುಮಾರು ಒಂದು ಲಕ್ಷ ರೂಪಾಯಿಗಳ ಬೆಲೆಯುಳ್ಳ ಗ್ರಲಂಥಗಳನ್ನು ಸಂಗ್ರಹಿಸಿ "ಡಾ. ಸ.ಜ.ನ ಗ್ರಂಥಾಲಯ" ಎಂದು ನಾಮಕರಣ ಮಾಡಿ ದಿನಾಂಕ ನವ್ಹೆಂಬರ ೧೦ ರಂದು ಕಾಶೀಪೀಠದ ಜ್ಞಾನ ಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ ೧೦೦೮ ಜಗದ್ಗುರು ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು ಉದ್ಘಾಟಿಸಿದರು. ಗ್ರಂಥಾಲಯದಲ್ಲಿ ವಿಜ್ಞಾನ, ಧರ್ಮ, ಸಂಸ್ಕೃತಿ ಹಾಗೂ ಕಲೆಗೆ ಸಂಬಂಧಪಟ್ಟಂತೆ ಗ್ರಂಥಗಳಿವೆ. ಇದು ಗಡಿನಾಡ ಕನ್ನಡಿಗರಿಗೊಂದು ಹೆಮ್ಮೆಯ ಗರಿಯಾಗಿದೆ.
- **ನಾಡು-ನುಡಿ ಚಿಂತನೆ** : ಕರ್ನಾಟಕದ ಗಡಿಭಾಗದಲ್ಲಿ ಚಿಕ್ಕೋಡಿಯ ಚಿಂಚಣಿ ಮಠದ ಅಲ್ಲಮ ಪ್ರಭುಗಳೊಂದಿಗೆ ಕೂಡಿ 'ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಶಿವಾಚಾರ್ಯರು ಗಡಿನಾಡ ಕನ್ನಡ ಭಾಷೆ-ಸಂಸ್ಕೃತಿಯನ್ನು ಜಾಗೃತಗೊಳಿಸುವಲ್ಲಿ ಪ್ರಮುಖರು.

  ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಆಧ್ಯಾತ್ಮದೊಂದಿಗೆ ಆತ್ಮ ಸಾಕ್ಷಾತ್ಕಾರದ ಹಾದಿಯಲ್ಲಿ ಜನಸೇವೆಯೇ ಜನಾರ್ಧನ ಸೇವೆಯೆಂದು ಭಾವಿಸಿ ನಾಡು-ನುಡಿ, ಭಾಷೆ-ಸಂಸ್ಕೃತಿಯನ್ನು ರಕ್ಷಿಸಿ ಬೆಳೆಸಲು ಕಂಕಣ ತೊಟ್ಟವರು. ಕಾಯಾ, ವಾಚಾ, ಮನಸಾ

ಕನ್ನಡಕ್ಕಾಗಿ, ಕನ್ನಡ ಜನರಿಗಾಗಿ, ಕನ್ನಡದ ಮನಗಳಿಗಾಗಿ ಚಿತ್ತ ಶುಧ್ಧಿಯಿಂದ ಕಾಯಕ ಮಾಡುತ್ತಿದ್ದಾರೆ. ಗಡಿಭಾಗದ ಕನ್ನಡಿಗರಿಗೆ ಕನ್ನಡದಲ್ಲಿ ಶಿಕ್ಷಣ, ಕನ್ನಡ ಸಾಹಿತ್ಯದ ಜೊತೆಗೆ ಗ್ರಂಥಾಲಯ, ಸಂಗೀತ, ನಾಟ್ಯಗಳ ಅನುಕೂಲವನ್ನು ಒದಗಿಸುವದರೊಂದಿಗೆ ದೇಶ ವಿದೇಶಗಳಲ್ಲಿ ಆಚರಿಸುವ ಕನ್ನಡ ಸಂಘಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಕನ್ನಡಾಭಿಮಾನವನ್ನು ಗಟ್ಟಿಗೊಳಿಸುತ್ತಿದ್ದಾರೆ. ಇಂದಿನ ವ್ಯವಸ್ಥೆಯಲ್ಲಿ ಕನ್ನಡಿಗರು ಕನ್ನಡ ಭಾಷೆಯನ್ನು ಮರೆಯಬಾರದು ಅತಿಯಾಗಿ ಅನ್ಯ ಭಾಷೆಗಳಿಗೆ ಅವಲಂಬಿತರಾದರೆ ನಮ್ಮತನವನ್ನು ಕಳೆದುಕೊಂಡಂತೆ ಎಂಬ ಭಾಷಾ ಜಾಗೃತಿ ಮೂಡಿಸುತ್ತಾರೆ.

೨೦೦೮ರಲ್ಲಿ ಬೆಳಗಾವಿ ಮಹಾನಗರ ಪಾಲಿಕೆ ಮಹಾಪೌರ ಹಾಗೂ ಉಪ ಮಹಾಪೌರ ಹುದ್ದೆಗಳಿಗೆ ಕನ್ನಡಿಗರೇ ಆಯ್ಕೆಯಾದದ್ದು ಹೆಮ್ಮೆಯ ವಿಷಯವೆಂದ ವಿಜಯ ಕರ್ನಾಟಕ ಸುದ್ಧಿ ಲೇಖದಲ್ಲಿ ಸಂತೋಷವನ್ನು ಹಂಚಿಕೊಂಡಿದ್ದಾರೆ. "ಕನ್ನಡಿಗರ ಆಯ್ಕೆಯಿಂದ ಬೆಳಗಾವಿ ನಗರ ಅಭಿವೃಧ್ಧಿಯಾಗುತ್ತದೆ. ಗಡಿ ನಾಡಿಗೆ ಸಮಸ್ಯೆ ಇರುವುದಿಲ್ಲ"[೨೨]ವೆಂದು ಸಂತೋಷ ವ್ಯಕ್ತಪಡಿಸಿದ್ದಾರೆ. ಕನ್ನಡಿಗರಿಗೆ ನ್ಯಾಯ ದೊರೆತಾಗ ಹರ್ಷಪಡುವ ಶಿವಾಚಾರ್ಯರು ಅವಕಾಶಹೀನ ಕನ್ನಡಿಗರನ್ನು ನೋಡಿ ಮರುಗುತ್ತಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಬಗೆಗೆ ಅಸಮಾಧಾನ ವ್ಯಕ್ತಪಡಿಸಿದ್ದು ಉಂಟು.

ಗೋವಾದಲ್ಲಿ ನಡೆದ ೩ನೇ ಕನ್ನಡ ಸಾಹಿತ್ಯ ಸಂಸ್ಕೃತಿಕ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ದುಬೈನಲ್ಲಿ ಕರ್ನಾಟಕ ಸಂಘ ಹಮ್ಮಿಕೊಂಡ ವಸಂತೋತ್ಸವ ಸಮಾರಂಭವನ್ನು ಉದ್ಘಾಟಿಸಿ ೨೭ ವರ್ಷಗಳಿಂದ ಹೊರ ದೇಶದಲ್ಲಿದ್ದರೂ ತಮ್ಮತನವನ್ನು ಮರೆಯದೆ ಕನ್ನಡದ ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದ ದುಬೈ ಕರ್ನಾಟಕ ಸಂಘದ ಕಾರ್ಯವನ್ನು ಶ್ಲಾಘಿಸುತ್ತಾ "ವಿಶ್ವದ ಯಾವುದೇ ಮೂಲೆಯಲ್ಲಿದ್ದರೂ ಬದುಕು ನೀಡಿದ

ತಾಯಿ ನುಡಿ, ಕನ್ನಡ ಸಂಸ್ಕೃತಿಯನ್ನು ಕಾಪಾಡಿಕೊಂಡು ಹೋಗುವುದು ಕನ್ನಡಿಗರ ಕರ್ತವ್ಯವೆಂದು ಅವರನ್ನು ನೋಡಿ ಹೆಮ್ಮೆಪಟ್ಟಿದ್ದಾರೆ"[೧೩].

ಅವರ ಏಕೈಕ ಸಾಹಿತ್ಯ ಸಿರಿ "ವಚನ ಕಾರಂಜಿಯಲ್ಲಿ ಕನ್ನಡ ನಾಡು-ನುಡಿ ಅಭಿಮಾನಗಳೆಲ್ಲ ಭಾವ ತುಂಬಿ ಹರಿದಿವೆ. 'ನಮಗೆ ಬೇಡಯ್ಯಾ ವಿದೇಶಿ ಭಾಷೆ, ನಮಗೆ ಬೇಕಯ್ಯ ಕನ್ನಡ ಭಾಷೆ. ಹುಕ್ಕೇರಿಶಾ ಭಾಷೆಯೆಂದರೆ ಕನ್ನಡವು ನೋಡಾ" "ಮರವಾದರೆ ಕನ್ನಡ ಸೇವಕರಿಗೆ ನೆರಳಾಗುತಿನಯ್ಯಾ ಕನ್ನಡಿಗ ಕರ್ನಾಟಕದ ಮೇಲಿಡುವುದು ನಾಡ ಪ್ರೇಮ", "ಬಾಳಿರಿ ನೂರು ವರುಷ ಕನ್ನಡಿಗರಿಗಾಗಿ, ನೂರು ಕಾಲ ಕನ್ನಡಿಗರಿಗಾಗಿ ಬಾಳಿದರೆ ಅದೇ ಹುಕ್ಕೇರಿಶನ ವಚನಕ್ಕೆ ಪ್ರಾಸ ಎಂಬಂತಹ ಮಾತುಗಳಲ್ಲಿ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಕನ್ನಡಾಭಿಮಾನದ ಕಿಡಿಗಳಾಗಿವೆ.

ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಗಡಿನಾಡ ಭಾಗದವರ ನಾಡನ್ನು ಕನ್ನಡಮಯವನ್ನಾಗಿ ಉಳಿಸಲು ಅವಿರತ ಕಾಯಕದ ಕಂಕಣ ಕಟ್ಟಿಕೊಂಡಿದ್ದಾರೆ.

- **ಅಕ್ಷರ-ದಾಸೋಹ** : ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠದ ಇಂದಿನ ಪೀಠಾಧ್ಯಕ್ಷರಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಪಂಚಾಚಾರ್ಯರ ಪರಂಪರೆಯನ್ನು ಎಷ್ಟು ಕಾಳಜಿಯಿಂದ ಮಠಕ್ಕೆ ಬದ್ಧರಾಗಿ ನಡೆಸಿಕೊಂಡು ಹೋಗುತ್ತಿದ್ದಾರೆಯೋ ಅಷ್ಟೇ ಕಾಯಕ ದಾಸೋಹಗಳಲ್ಲೂ ತನ್ಮಯತೆಯಿಂದ ಭಾಗಿಯಾಗಿದ್ದಾರೆ. ಹಸಿದವರಿಗೆ ಮೊದಲು ಅನ್ನ ಕೊಟ್ಟು ನಂತರ ಶಿಕ್ಷಣ ಕೊಡಬೇಕೆಂಬ ಮಾತನ್ನು ಅನುಷ್ಠಾನಕ್ಕೆ ತಂದವರು. ಗಡಿನಾಡ ಭಾಗದಲ್ಲಿ ಕನ್ನಡ ಜಾಗೃತಿಯೊಂದಿಗೆ ಕನ್ನಡ ಶಾಲೆಗಳನ್ನು ಪ್ರಾರಂಭಿಸಿ ಜನರಿಗೆ ನಾಡ ಭಾಷೆ ಸಂಸ್ಕೃತಿಯ ಅರಿವು ಮೂಡಿಸುವ ಕೆಲಸ ಶ್ಲಾಘನೀಯವಾಗಿದೆ.

ಕರ್ನಾಟಕ ಸರ್ಕಾರವು ನಾಡಿನ ಸಂಪತ್ತಾದ ವಿದ್ಯಾರ್ಥಿಗಳ ಅಭಿವೃದ್ಧಿಯತ್ತ ಗಮನ ಹರಿಸಿ ಅವರ ಹೆಚ್ಚಿನ ಹಾಜರಾತಿಯನ್ನು ಲೆಕ್ಕಿಸಿ, ಸಮಾಜದಲ್ಲಿ ಎಲ್ಲ ವರ್ಗದ ಮಕ್ಕಳು ಅಕ್ಷರಸ್ಥರಾಗಬೇಕು ಅದಕ್ಕಾಗಿ ಅವರಿಗೆ ಅನ್ನದ ಅವಶ್ಯಕತೆ ಇದೆ ಎಂಬುವುದನ್ನರಿತು ಅಕ್ಷರ-ದಾಸೋಹದಡಿಯಲ್ಲಿ ಬಿಸಿಯೂಟದ ಯೋಜನೆಯನ್ನು ಅನುಷ್ಠಾನಗೊಳಿಸಿತು. ಈ ಯೋಜನೆ ಯಶಸ್ವಿಯಾಗಬೇಕಾದರೆ ಎಲ್ಲರ ಸಹಕಾರ ಬೇಕಾಗುತ್ತದೆ ಆದ್ದರಿಂದ ಸಾರ್ವಜನಿಕರ ಹಾಗೂ ಸಂಘ ಸಂಸ್ಥೆಗಳ ಸಹಕಾರವನ್ನು ಕೋರಿದರು. ಈ ಸಂದರ್ಭದಲ್ಲಿ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಇದರ ಸದ್ಭಳಕೆ ಮಾಡಿಕೊಂಡರು. ಅಕ್ಷರ ಅನ್ನದಾಸೋಹವೊಂದು ಅವರ ಕಾರ್ಯ ಸಾಧನೆಯಲ್ಲಿ ಗರಿಯೊಡೆಯಿತು. ಪಂಚಾಚಾರ್ಯರ ಸಿದ್ಧಾಂತ ಶಿಖಾಮಣಿ, ಬಸವಾದಿ ಶರಣರ ಕಾಯಕದಾಸೋಹ ತತ್ವಗಳು ಶ್ರೀಮಠದಲ್ಲಿ ಸಾಕಾರಗೊಂಡವು. ಸರ್ಕಾರದಿಂದ ಒಪ್ಪಿಗೆ ಪಡೆದುಕೊಂಡು ಸೌಲಭ್ಯವನ್ನು ಪಡೆದುಕೊಂಡು ೨೦೦೫ರಲ್ಲಿ ಪ್ರಾರಂಭಿಸಿದರು. ಹಸಿದವರಿಗೆ ಅನ್ನವೇ ದೇವರು. ಅನ್ನಮಯ ಜೀವಕ್ಕೆ ಅನ್ನವಿದ್ದಾಗಲೇ ಚೈತನ್ಯವನ್ನು ಹೊಂದಿರುತ್ತದೆ. ಚೈತನ್ಯವಿಲ್ಲದ ಮನಸ್ಸಿಗೆ ಶಿಕ್ಷಣವೆಂತು ಹಿಡಿಸೀತು. ಈ ತತ್ವವನ್ನು ಬಲ್ಲ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಹುಕ್ಕೇರಿ ಶ್ರೀ ಶಾಂತೇಶ್ವರ ಹಿರೇಮಠಕ್ಕೆ ಸಂಬಂಧಿಸಿದ ಸ್ಥಳದಲ್ಲಿ ಮಠದಿಂದ ಒಂದುವರೆ ಕಿ.ಮೀ. ಅಂತರದಲ್ಲಿಯ ಪ್ರದೇಶವನ್ನು ದಾಸೋಹಕ್ಕೆ ಬಳಸಿದರು. "ದಾಸೋಹಂ ಶಿವಂ" ಎಂಬ ತತ್ವವನ್ನು ಪಾಲಿಸಿದವರು ಶಿವಾಚಾರ್ಯರು.

ದಾಸೋಹವನ್ನು ಕುರಿತು ಸಿದ್ಧಾಂತ ಶಿಖಾಮಣಿಯಲ್ಲಿ "ಪ್ರಸಾದ ಮೂಲಾ ಸರ್ವೇಷಾಂ ಭಕ್ತಿ ರವ್ಯಬಿಚಾರಿಣಿ ಶಿವ ಪ್ರಸಾದ ಹೀನಸ್ಯ ಭಕ್ತಿ ಶ್ವಾಪಿನ ಸಿದ್ಧ್ಯತಿ:

"ಪ್ರಸಾದೇ ಶಾಂಭವೇ ಸಿದ್ದೇ ಪರಮಾನಂದ ಕಾರಣೇ

ಸರ್ವಂ ಶಿವಮಯಂ ವಿಶ್ವಂ ದೃಶ್ಯತೇ ನಾತ್ರ ಸಂಶಯ"

ಮುಕ್ತಿಗೆ ಭಕ್ತಿ ಮೂಲವಾದರೆ ಜೀವಿಯಲ್ಲಿ ಭಕ್ತಿ ಹುಟ್ಟಲು ಶಿವ ಪ್ರಸಾದವೇ ಮೂಲವಾಗುತ್ತದೆ. ಎಂಬುವುದನ್ನು ಅರಿತ ಶಿವಾಚಾರ್ಯರು ತಮ್ಮ ತನು ಮನವನ್ನು ಸಮರ್ಪಿಸಿ ಭಕ್ತಿ ದಾಸೋಹದೊಂದಿಗೆ ಅನ್ನದಾಸೋಹವನ್ನು ನಡೆಸುತ್ತಿದ್ದರು. ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಸಾಮಾಜಿಕ ಕಾರ್ಯ ಸಾಧನೆಯಲ್ಲಿ ಅನ್ನ ದಾಸೋಹವೊಂದು ಗೋಪುರಕ್ಕೆ ಕಳಸವಿದ್ದಂತಿದೆ. "ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನ"ದಿಂದ ಕಳೆದ ಐದು ವರ್ಷಗಳಿಂದ ಅನ್ನದಾಸೋಹ ಸೇವೆ ನಡೆಯುತ್ತಿದೆ.

ಹುಕ್ಕೇರಿ ತಾಲೂಕಿನ ಪ್ರೌಢಶಾಲೆಗಳು, ಪ್ರಾಥಮಿಕ ಶಾಲೆಗಳು, ನಿಪ್ಪಾಣಿ ವಲಯದ ಪ್ರೌಢಶಾಲೆಗಳು ಸೇರಿದಂತೆ ಸುಮಾರು ೬೦ ರಿಂದ ೬೫ ಸಾವಿರಕ್ಕೂ ಹೆಚ್ಚಿನ ಮಕ್ಕಳಿಗೆ ಮದ್ಯಾಹ್ನದ ಬಿಸಿಯೂಟವನ್ನು ಒದಗಿಸುವ ಹೊಣೆ ಶ್ರೀಮಠದ್ದಾಗಿದೆ. ಚಿಕ್ಕೋಡಿ, ಹುಕ್ಕೇರಿ ರಸ್ತೆ ಬದಿಗಿರುವ ಮಠಕ್ಕೆ ಸಂಬಂಧಿಸಿದ ೪ ಎಕರೆ, ೨೪ ಗುಂಟೆ ಪ್ರದೇಶದಲ್ಲಿ ಸುಸಜ್ಜಿತ ಕಟ್ಟಡವನ್ನು ನಿರ್ಮಿಸಿ ಅಡಿಗೆಗಾಗಿ ಆಧುನಿಕ ಯಂತ್ರೋಪಕರಣಗಳನ್ನು ಬಳಸಿ ಶುದ್ಧ ನೀರಿನೊಂದಿಗೆ ಎರಡು ಗಂಟೆಗಳಲ್ಲಿ ೬೦ ಸಾವಿರ ಮಕ್ಕಳಿಗೆ ಬಿಸಿಯೂಟ ತಯಾರಿಸುವ ವ್ಯವಸ್ಥೆ ಬೆಳಗಾವಿ ಜಿಲ್ಲೆಯಲ್ಲಿಯೇ ಪ್ರಪ್ರಥಮ ಮತ್ತು ಸುಸಜ್ಜಿತ, ಸ್ವಚ್ಛ-ಶುಭ್ರ ಕೇಂದ್ರವಾಗಿದೆ.

ಅಡುಗೆಗೆ ಬಳಸಲು ಬಿಸಿನೀರಿಗಾಗಿ ೨ ದೊಡ್ಡ, ೨ ಚಿಕ್ಕ ಬಾಯ್ಲರ್‌ಗಳನ್ನು ದಿನನಿತ್ಯದ ಅನ್ನ ತಯಾರಿಕೆಗೆ ಒಂದೇ ಬಾರಿಗೆ ೫೦ ಕೆ.ಜಿ. ಅನ್ನ ಬೆಯಿಸುವಂತಹ ೧೨ ಸ್ಟೇನಲೆಸ್ ಸ್ಟೀಲಿನ ಪಾತ್ರೆಗಳನ್ನು ಅಳವಡಿಸಲಾಗಿದೆ. ಇವುಗಳ ಮುಖಾಂತರ ೨೫-೩೦ ನಿಮಿಷಗಳಲ್ಲಿ ೬೦ ಸಾವಿರ ಮಕ್ಕಳಿಗಾಗುವಷ್ಟು ಅನ್ನವನ್ನು ತಯಾರಿಸಲಾಗುತ್ತದೆ. ಪ್ರತಿದಿನ (೬೦) ಅರವತ್ತು ಕ್ವಿಂಟಲ್ ಅಕ್ಕಿಯಿಂದ ಅನ್ನ ತಯಾರಿಸಲಾಗುವುದು.

ಸಾಂಬಾರಿಗೆ ಬೇಕಾಗುವ ತರಕಾರಿಗಳನ್ನು ಕತ್ತರಿಸಲು ಮಶೀನುಗಳಿವೆ. ೪೦ ಸಾವಿರ ರೂಪಾಯಿ ವೆಚ್ಚದಲ್ಲಿ ಅವುಗಳನ್ನು ತಯಾರಿಸಲಾಗಿದೆ. ೧ ತಾಸಿಗೆ ೨ ಕ್ವಿಂಟಲ್

ತರಕಾರಿಗಳನ್ನು ಕತ್ತರಿಸಲಾಗುತ್ತದೆ. ೧೨೦೦ ಲೀ. ನೀರು ಹಿಡಿಯುವಂತಹ ದೊಡ್ಡ ದೊಡ್ಡ ಅಲ್ಯುಮಿನಿಯಂ ಪಾತ್ರೆಗಳಿವೆ. ೨೫ ಕ್ವಿಂಟಲ್ ತೊಗರಿ ಬೆಳೆ, ೧೪ ಡಬ್ಬಿ ಎಣ್ಣೆ, ೨ ಕ್ವಿಂಟಲ್ ತರಕಾರಿ ಮಸಾಲೆಗಳನ್ನು ಬಳಸಿ ಋಚಿ-ಋಚಿಯಾಗಿ ಸಾಂಬಾರು ತಯಾರಿಸಲಾಗುತ್ತದೆ. ಒಂದು ದಿನಕ್ಕೆ ಒಂದು ಟನ್ ಕಟ್ಟಿಗೆಯನ್ನು ಬಳಸಲಾಗುತ್ತದೆ. ಒಂದು ತಿಂಗಳಿಗೆ ಬೇಕಾಗುವ ಆಹಾರ ಸಾಮಾಗ್ರಿಗಳನ್ನು ಸಂಗ್ರಹಿಸಿಡಲು ದೊಡ್ಡ ಉಗ್ರಾಣವಿದೆ. ಅಲ್ಲಿ ಆಹಾರ ಪದಾರ್ಥಗಳನ್ನು ಕೆಡದಂತೆ ಹವಾನಿಯಂತ್ರಣಗೊಳಿಸಲಾಗಿದೆ. ಅಕ್ಕಿಯಲ್ಲಿಯ ಕಸಕಡ್ಡಿ ಧೂಳನ್ನು ಸ್ವಚ್ಚಗೊಳಿಸಲು ವಿದ್ಯುತ್ ಉಪಕರಣದ ವ್ಯವಸ್ಥೆಯಿದೆ. ತಪ್ಪಿ ಉಳಿದ ಅಕ್ಕಿಯಲ್ಲಿಯ ಬತ್ತವನ್ನು ಅಲ್ಲಿ ಕೆಲಸಕ್ಕಿರುವ ಮಹಿಳೆಯರು ಆರಿಸುತ್ತಾರೆ.

ದಿನನಿತ್ಯ ಬೇಕಾಗುವ ನೀರಿಗೆ ಕೊಳವೆ ಬಾವಿಗಳನ್ನು ಅಳವಡಿಸಿಲಾಗಿದೆ. ಹೆಚ್ಚಿನ ನೀರು ಸಂಗ್ರಹಿಸಿಡಲು ಎರಡು ಅಂಡರ್ ಗ್ರೌಂಡ್‌ನಲ್ಲಿ ಟ್ಯಾಂಕ್‌ಗಳನ್ನು ಕಟ್ಟಲಾಗಿದೆ. ಇಲ್ಲಿ ದಿನನಿತ್ಯ ೨೫೦ ಜನ ಯುವಕರು ೨೫ ಜನ ಮಹಿಳೆಯರು ಕೆಲಸ ಮಾಡುತ್ತಾರೆ. ಇವರೆಲ್ಲ ಹುಕ್ಕೇರಿ ಗ್ರಾಮಾಂತರ ಪ್ರದೇಶದವರೇ ಆಗಿದ್ದಾರೆ. ಅಡಿಗೆ ಮಾಡುವ ಸಿಬ್ಬಂದಿಯ ಶಿಸ್ತಿಗೆ ಸ್ವಚ್ಚತೆಗೆ ಮತ್ತು ಆರೋಗ್ಯಕ್ಕೆ ಹೆಚ್ಚಿನ ಗಮನಕೊಡಲಾಗುತ್ತದೆ. ಕಾಲಲ್ಲಿ ಗಮ್‌ಯುಕ್ತ ಭೂಟ್‌ಗಳಿರುತ್ತವೆ. ತಿಂಗಳಿಗೆ ಒಂದು ಬಾರಿ ಆರೋಗ್ಯ ತಪಾಸಣೆ ಮಾಡಲಾಗುತ್ತದೆ.

ಎಲ್ಲ ಶಾಲೆಗಳಿಗೆ ಅಡುಗೆ ಸರಬರಾಜು ಮಾಡಲು ಸುಮಾರು ೨೦ ವಾಹನಗಳಿವೆ. ನಿಗದಿತ ಸಮಯಕ್ಕೆ ಸರಿಯಾಗಿ ಆಹಾರ ಪೂರೈಕೆಯಾಗುತ್ತದೆ. ಇದು ಈ ಮಠದ ವಿಶೇಷ. ಹುಕ್ಕೇರಿ ತಾಲೂಕಿನ ೧೫೦ ಪ್ರಾಥಮಿಕ, ೫೦ ಮಾಧ್ಯಮಿಕ ಶಾಲೆಗಳು, ೧೮ ಉನ್ನತೀಕರಣ ಶಾಲೆಗಳು ಹಾಗೂ ಚಿಕ್ಕೋಡಿ ತಾಲೂಕಿನ ೬೪ ಶಾಲೆಗಳು, ನಿಪ್ಪಾಣಿ ವಲಯಕ್ಕೆ ಸೇರಿದ ೧೫

ಪ್ರೌಢಶಾಲೆಗಳು ಸೇರಿದಂತೆ ಸುಮಾರು ೭೪ ಸಾವಿರ ವಿದ್ಯಾರ್ಥಿಗಳಿಗೆ ಉತ್ತಮ ಗುಣ ಮಟ್ಟದ ಬಿಸಿಯೂಟವನ್ನು ಒದಗಿಸಲಾಗುತ್ತಿದೆ.

ಪರಿಸರದ ಬಗೆಗೆ ಪೂರ್ಣ ಜ್ಞಾನವಿರುವ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ದಾಸೋಹದ ಅಳಿದುಳಿದ ಆಹಾರ ಜೀನಸುಗಳಿಂದ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸಿ ಜಮೀನುಗಳಿಗೆ ಉಪಯೋಗ ಮಾಡುತ್ತಾರೆ. ದಿನನಿತ್ಯ ಉಳಿದ ಆಹಾರ, ಕೊಳೆತ ತರಕಾರಿ, ಅಡುಗೆಗಾಗಿ ಬಳಸಿದ ನೀರಲ್ಲದೆ ಉಳಿದ ಎಲ್ಲ ತ್ಯಾಜ್ಯ ವಸ್ತುಗಳನ್ನು ಬೇರೆಡೆಗೆ ಚೆಲ್ಲದೆ ಸುಮಾರು ೨೦ ಅಡಿ ಆಳದ ಎರಡು ಗುಂಡಿಗಳನ್ನು ತಗ್ಗಿಸಿ ಅದರಲ್ಲಿ ಈ ಎಲ್ಲವನ್ನು ಸಂಗ್ರಹಿಸಿ, ಉತ್ತಮ ಗುಣಮಟ್ಟದ ಕಾಂಪೋಸ್ಟ್ ಗೊಬ್ಬರವನ್ನು ತಯಾರಿಸುತ್ತಾರೆ.

ಮಕ್ಕಳಲ್ಲಿಯೇ ದೇವರನ್ನು ಕಾಣುವ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಮಕ್ಕಳ ಅಭಿರುಚಿಗೆ ತಕ್ಕಂತೆ ಅಡುಗೆ ತಯಾರಿಸುವ ವ್ಯವಸ್ಥೆ ಮಾಡಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯ ಆದೇಶದಂತೆ ಮಾಡುವದರೊಂದಿಗೆ ವಾರದ ಒಂದು ದಿನ ಹಾಗೂ ವಿಶೇಷ ದಿನಗಳಲ್ಲಿ ವೈವಿಧ್ಯಮಯ ಸಿಹಿಯೂಟವನ್ನು ವಿತರಿಸುತ್ತಾರೆ. ಇದರಿಂದ ಮಕ್ಕಳ ಮನಸ್ಸು ಸಂತೋಷಗೊಳ್ಳುತ್ತಿದೆ. ಶಾಲೆಯ ಮಕ್ಕಳ ಹಾಜರಾತಿಯು ಹೆಚ್ಚುತ್ತಿದೆ. ಅಭ್ಯಾಸದಲ್ಲಿ ಪ್ರಗತಿಯು ಕಂಡು ಬರುತ್ತಿದೆ ಎಂಬುವುದನ್ನು ಗಮನಿಸಲಾಗಿದೆ.

ಗಡಿನಾಡ ಭಾಗದಲ್ಲಿ ಇಷ್ಟು ವ್ಯವಸ್ಥಿತವಾಗಿ ನಡೆಯುತ್ತಿರುವ ಅಕ್ಷರ-ಅನ್ನದಾಸೋಹವನ್ನು ನೋಡಲು ನಾಡಿನ ಅನೇಕ ಗಣ್ಯ ಮಾನ್ಯರು ಆಗಮಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸರ್ಕಾರದ ಯೋಜನೆಯನ್ನು ವ್ಯವಸ್ಥಿತ ರೂಪದಲ್ಲಿ ನಾಡಿನ ಜನತೆಗೆ ಮುಟ್ಟಿಸುವಲ್ಲಿ ಯಶಸ್ವಿಯಾಗುತ್ತಿದೆ. ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಿಂದ

ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಹಗಲಿರುಳು ಶ್ರಮಿಸುತ್ತಿರುವುದು ಶ್ಲಾಘನೀಯವೆಂದು ಮೆಚ್ಚುಗೆ ವ್ಯಕ್ತಪಡಿಸುತ್ತಾರೆ.

೨೦೦೭ರಲ್ಲಿ ಕಾಶಿಯ ಡಾ. ಚಂದ್ರಶೇಖರ ಶಿವಾಚಾರ್ಯ ಭಗವತ್ಪಾದರು 'ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ'ದ ಅಕ್ಷರ-ದಾಸೋಹ ಕೇಂದ್ರಕ್ಕೆ ಭೆಟ್ಟಿನೀಡಿ "ಹಸಿದ ವ್ಯಕ್ತಿಗೆ ತುತ್ತು ಅನ್ನವೇ ದೇವರು ಎಂಬ ಹಿನ್ನಲೆಯಲ್ಲಿ ನಿರಂತರವಾಗಿ ಶಿಕ್ಷಣದ ಜೊತೆಗೆ ಅನ್ನದಾಸೋಹವನ್ನು ನಡೆಸಿಕೊಂಡು ಬರುತ್ತಿರುವ ವೀರಶೈವ ಮಠಗಳ ಕಾರ್ಯ ಅನನ್ಯ"ವೆಂದು ಶ್ಲಾಘೀಸಿದರು.

೨೦೦೮ರಲ್ಲಿ "ಬಾಳೆಹೂನ್ನೂರು, ರಂಭಾಪುರಿ ಪೀಠದ ಜಗದ್ಗುರು ಶ್ರೀ ವೀರ ಸೋಮೇಶ್ವರ ಶಿವಾಚಾರ್ಯ ಭಗವತ್ಪಾದರ ಭೆಟ್ಟಿ ನೀಡಿದಾಗ ಮೈಸೂರು ಅರಮನೆ ಜಗದಗಟ್ಟಿ ಮಠದ ಮುಮ್ಮಡಿ ಚಂದ್ರಶೇಖರ ಶಿವಾಚಾರ್ಯ ಶ್ರೀಗಳು ಮಾತನಾಡಿ ಮಕ್ಕಳಿಗೆ ಒಳೆಯ ಶಿಕ್ಷಣದ ಜೊತೆಗೆ ಗುಣಮಟ್ಟದ ಆಹಾರ ನೀಡುತ್ತಿರುವುದು ಶ್ಲಾಘನೀಯ. ಹಲವಾರು ಅಸಹಾಯಕ ಪುರುಷ ಹಾಗೂ ಮಹಿಳೆಯರಿಗೆ ಉದ್ಯೋಗವಕಾಶ ಕಲ್ಪಿಸಿ ಕೊಡುವುದರೊಂದಿಗೆ ಪ್ರೀತಿ ವಿಶ್ವಾಸದೊಂದಿಗೆ ಅವರ ಆರ್ಥಿಕ ಬೆಳವಣಿಗೆಗೆ ಶ್ರೀಗಳು ಕಾರಣರಾಗಿದ್ದಾರೆ"[೧೪] ಎಂದು ಮನಮೆಚ್ಚಿ ನುಡಿದರು. ಇಷ್ಟೇ ಅಲ್ಲದೆ ಪ್ರತಿವರ್ಷವೂ ದಾಸೋಹ ನಡೆದಾಗ ವಿವಿಧ ಕ್ಷೇತ್ರದ ಅಧಿಕಾರಿಗಳು ಭೆಟ್ಟಿನೀಡಿ ಮೆಚ್ಚಿಗೆ ವ್ಯಕ್ತಪಡಿಸುತ್ತಾರೆ.

ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠದ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಆಧ್ಯಾತ್ಮಿಕ ಕಾಯಕ-ದಾಸೋಹ ಸಾಮಾಜಿಕ ಸೇವೆ ಶಿಕ್ಷಣ-ಸಾಹಿತ್ಯ ಕ್ಷೇತ್ರದಲ್ಲಿಯ ಸೇವೆಯನ್ನು ಸಾಧನೆಯನ್ನು ಗಮನಿಸಿದ ನಾಡಿನ ಅನೇಕ ಮಠ ಮಾನ್ಯಗಳು, ಸಂಘ-ಸಂಸ್ಥೆಗಳು ಶಿವಾಚಾರ್ಯರಿಗೆ ಪ್ರತಿಷ್ಠಿತ ಪುರಸ್ಕಾರಗಳನ್ನು ನೀಡಿ ಗೌರವಿಸಿದ್ದಾರೆ.

- **ಶ್ರೀ.ಷ.ಬ್ರ ಚಂದ್ರಶೇಖರ ಶಿವಾಚಾರ್ಯರನ್ನು ಅರಸಿ ಬಂದ ಪ್ರಶಸ್ತಿಗಳು :**

೧) ಬೆಂಗಳೂರಿನ ವೀರಶೈವ ಸಂಸ್ಕೃತಿ ಪ್ರತಿಷ್ಠಾನ ಕೊಡಮಾಡುವ "ಜಗಜ್ಯೋತಿ ಶ್ರೀ ಬಸವೇಶ್ವರ ಸದ್ಭಾವನಾ ಪ್ರಶಸ್ತಿ"

೨) ಸಾಮಾಜಿಕ ಕಾರ್ಯಗಳಲ್ಲಿ ಅತ್ಯುತಮ ಕಾರ್ಯ ನಿರ್ವಹಿಸುತ್ತಿರವು 'ಸಹೇಲಿ' ಸಂಸ್ಥೆ "ಶಾಂತಿ ಸೌಹಾರ್ದ ಪ್ರಶಸ್ತಿ"

೩) ವಾರಣಾಸಿಯ "ಅಕ್ಷರ ದಾಸೋಹ ಪ್ರಶಸ್ತಿ"

೪) ವಚನ ವಸಂತ ಧ್ವನಿಸುರುಳಿಗಾಗಿ "ಸ್ವರ ಮಂದಾರ" ಪ್ರಶಸ್ತಿ

ಇಂಥ ಮಹತ್ವದ ಪ್ರಶಸ್ತಿಗಳು ಸಾಧಕರನ್ನು ಮಾತ್ರ ಹುಡುಕಿಕೊಂಡು ಬರುತ್ತವೆ. ಹೀಗೆ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠವನ್ನು ಉತ್ತುಂಗ ಶಿಖರವೇರುವಂತೆ ಶ್ರಮವಹಿಸುತ್ತಿದ್ದಾರೆಂಬುದು ಗಡಿನಾಡ ಕನ್ನಡ ಗುಡಿಯ ಗೋಪುರಕ್ಕೆ ಹೊನ್ನಿನ ಕಳಸದಂತಿದೆ. ತಮ್ಮನ್ನು ಅರಿಸಿಕೊಂಡು ಬಂದ ಪ್ರಶಸ್ತಿಗಳಿಂದ ಶಿವಾಚಾರ್ಯರು ಎಂದೂ ಅಹಂದಿಂದ ಬೀಗಿಲ್ಲ. ಇನ್ನೂ ಅವರ ಸೌಜನ್ಯ ಮತ್ತು ಕಾಯಕ-ದಾಸೋಹದಲ್ಲಿಯ ನಿಷ್ಠೆ ಇನ್ನೂ ಹೆಚ್ಚಾಗುತ್ತಿದೆ. ನಾಡಿನ ಯಾವ ಭಾಗದಲ್ಲೆ ಆಗಲಿ ಅವರಿಗೆ ಕಾರ್ಯಕ್ರಮಕ್ಕೆ ಕರೆಬಂದರೆ ಇಲ್ಲವೆಂದು ಹೇಳುವುದೇ ಇಲ್ಲ. ದಿನದ ೨೪ ಗಂಟೆಗಳಲ್ಲಿ ೨೦ ಗಂಟೆಗಳನ್ನು ಧಾರ್ಮಿಕ, ಆಧ್ಯಾತ್ಮಿಕ, ಕಾಯಕ-ದಾಸೋಹ ಕಾರ್ಯಕ್ರಮಗಳಲ್ಲಿ ಬಳಸುತ್ತಾರೆಂದರೆ ಅವರು ಬಸವಣ್ಣನವರ "ಕಾಯಕವೇ ಕೈಲಾಸ"ವೆಂಬ ಮಾತನ್ನು ಮನಸಾರೆ ಒಪ್ಪಿಕೊಂಡು ಪಾಲಿಸುತ್ತಿರುವುದು ವೇಧ್ಯವಾಗುತ್ತದೆ.

• **ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಿಂದ ಪ್ರಧಾನ ಮಾಡುವ ಪ್ರಶಸ್ತಿಗಳು :**

ಹುಕೇರಿಯ 'ಶ್ರೀ ಗುರು ಶಾಂತೇಶ್ವರ ಹಿರೇಮಠ'ದ ೫೯ನೇ ಪೀಠಾಧಿಪತಿಗಳಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಪಂಚಾಚಾರ್ಯರ ಮಠ, ಮಠದ ಸಂಪ್ರದಾಯ, ಗುರು ಪರಂಪರೆ, ಧರ್ಮ, ಆಧ್ಯಾತ್ಮ, ಕಾಯಕ–ದಾಸೋಹದಲ್ಲಿ ಎಷ್ಟು ತನ್ಮಯತೆಯನ್ನು ಹೊಂದಿರುವರೋ ಅಷ್ಟೇ ತನ್ಮಯತೆಯನ್ನು ಸಮಾಜ ಸೇವೆ, ಧರ್ಮ ಜಾಗೃತಿ, ಸಮಾಜ ಜಾಗೃತಿ, ಶಿಕ್ಷಣ ಅಕ್ಷರ–ದಾಸೋಹದಲ್ಲಿಯೂ ಹೊಂದಿದ್ದು. ಅವರ ಬದುಕಿನುದ್ದಕ್ಕೂ ತಿಳಿದು ಬರುತ್ತದೆ. ಇಂಥ ಕ್ರೀಯಾಶೀಲರಾದ ಶಿವಾಚಾರ್ಯರು ತಮ್ಮನ್ನು ಗೌರವಿಸಿದ ಸಮಾಜವನ್ನು ಸಮಾಜದಲ್ಲಿಯ ವಿವಿಧ ಸಾಧನೆಗಳನ್ನು ಮಾಡಿದವರನ್ನು ಗೌರವಿಸಿ ಸತ್ಕರಿಸುವ ವಿಶಾಲ ಹೃದಯಿಗಳು. ಈ ಹಿನ್ನೆಲೆಯಲ್ಲಿ ಶ್ರೀ ಗುರು ಶಾಂತೇಶ್ವರ ಹಿರೇಮಠದಲ್ಲಿ ಪ್ರತಿವರ್ಷ ವಿಜ್ರಂಭನೆಯಿಂದ ಆಚರಿಸಲ್ಪಡುವ ದಸರಾ ಉತ್ಸವದಲ್ಲಿ ವಿವಿಧ ರಂಗಗಳಲ್ಲಿ ಸಾಧನೆಗೈದವರನ್ನು ಗುರುತಿಸಿ ಗೌರವಿಸಿ ಪ್ರಶಸ್ತಿ ಪ್ರಧಾನ ಮಾಡುವ ಸಂಪ್ರದಾಯವನ್ನು ನಡೆಸಿಕೊಂಡು ಬಂದಿದ್ದಾರೆ. "ಗುಣಾಃ ಪೂಜಾ ಸ್ಥಾನಂ ಗುಣಿಷು ನಚಲಿಂಗಂ ನಚವಯಃ" ಎಂಬ ಸಂಸ್ಕೃತ ಸುಭಾಷಿತವನ್ನು ಪಾಲಿಸಿದ್ದಾರೆ. ಒಳ್ಳೆಯ ಗುಣವಂತರು, ಸಾಧಕರು, ಸಣ್ಣವರೇ ಇರಲೀ, ದೊಡ್ಡವರೇ ಇರಲೀ ವಯಸ್ಸಿನ ತಾರತಮ್ಯ ಮಾಡಬಾರದೆಂಬುದನ್ನು ಅರಿತವರಾಗಿದ್ದಾರೆ. ಈ ಹಿಂದೆಲ್ಲ ನೋಡಿದ್ದಂತೆ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಗುಣಗ್ರಾಹಿಗಳು, ಕಲೋಪಾಸಕರು, ಒಳ್ಳೆಯದನ್ನು, ಒಳ್ಳೆಯವರನ್ನು ಗೌರವಿಸಿ ಪ್ರೋತ್ಸಾಹಿಸುವ ಅಂತರಂಗವನ್ನು ಹೊಂದಿದವರು. ಇಂಥ ವಿಶಾಲ ಮನೋಭಾವನೆಯಿಂದ 'ರೇಣುಕ ಶ್ರೀ' ಪ್ರಶಸ್ತಿಯನ್ನು ದಸರಾ ಉತ್ಸವದಂದು ಪ್ರಧಾನ ಮಾಡುತ್ತಾರೆ. ವ್ಯಕ್ತಿಗೆ ಪ್ರಾಧಾನ್ಯತೆಯನ್ನೀಯದೆ ವ್ಯಕ್ತಿತ್ವಕ್ಕೆ ಪ್ರಾಧಾನ್ಯತೆ ನೀಡಿ ಆ ವ್ಯಕ್ತಿಯ ನೈತಿಕತೆ, ಧಾರ್ಮಿಕ, ಸಾಹಿತ್ಯಕ ಸೇವೆ, ದೀನರಿಗೆ, ದಲಿತರಿಗೆ, ಬಡವರಿಗೆ ಆತ ಮಾಡಿದ ಸಹಾಯ ಸಹಕಾರಗಳು ಪರಿಸರ ಸಂರಕ್ಷಣೆ, ಕಲಾಕ್ಷೇತ್ರ, ಸಂಗೀತ ಕ್ಷೇತ್ರದಲ್ಲಿ ಸಾಧನೆ ಮಾಡಿದವರಿಗೆ

ದಸರಾ ಸಂದರ್ಭಲ್ಲಿಯೇ 'ಡಾ. ಸ.ಜ. ನಾಗಲೋಟಿ ಮಠ' ಪ್ರಶಸ್ತಿಯನ್ನು ಪ್ರಧಾನ ಮಾಡುತ್ತಾರೆ.

- **ಇಲ್ಲಿಯವರೆಗೂ ಶ್ರೀಗಳು ಪ್ರಧಾನ ಮಾಡಿದ 'ರೇಣುಕ ಶ್ರೀ' ಪ್ರಶಸ್ತಿಯನ್ನು ಪಡೆದವರು ಈ ಕೆಳಗಿನಂತಿದ್ದಾರೆ.**

೧) ಪ್ರೊ. ಶ್ರೀ ಅ.ಸಿ. ಹಿರೇಮಠ, ರಾಣೆಬೆನ್ನೂರು

೨) ಡಾ. ಎಸ್.ಎಂ. ವೃಷಭೇಂದ್ರ ಸ್ವಾಮಿ, ಧಾರವಾಡ

೩) ಡಾ. ಮುಖ್ಯಮಂತ್ರಿ ಚಂದ್ರು, ಅಧ್ಯಕ್ಷರು, ಕ.ಅ.ಪ್ರಾಧಿಕಾರ

೪) ಶ್ರೀ ಮಮತಾಜ ಅಲಿಖಾನ, ಮಾಜಿ ಸಚಿವರು

೫) ಡಾ. ಸ.ಜ. ನಾಗಲೋಟಿ ಮಠ, ಖ್ಯಾತ ವೈದ್ಯರು

೬) ಶ್ರೀಮತಿ ಬಿ. ಜಯಶ್ರೀದೇವಿ, ರಂಗ ಕಲಾವಿಧೆ, ರಾಜ್ಯಸಭಾ ಸದಸ್ಯೆ

೭) ಡಾ. ಪುಟರಾಜ ಗವಾಯಿ, ಸಾಮಾಜಿಕ, ಸಾಹಿತ್ಯ ಸೇವೆ, ಗದಗ

೮) ಡಾ. ಪ್ರಭಾಕರ ಕೋರೆ, ಶಿಕ್ಷಣ ಕ್ಷೇತ್ರ, ಸಾಹಿತ್ಯ ಕ್ಷೇತ್ರದ ಸೇವೆ

೯) ಕುಮಾರಿ. ಕಿರಣ ಸಹೇಲಿ, (ಅಧ್ಯಕ್ಷೆ), ಪಂಜಾಬ

೧೦) ಶ್ರೀ ಸುರೇಶ ಹೆಬ್ಬಳಿಕರ, ಪರಿಸರವಾದಿಗಳು, ಚಲನಚಿತ್ರ ನಟರು, ನಿರ್ಮಾಪಕರು

ಇಷ್ಟೇ ಅಲ್ಲದೇ ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಿಂದ ಕನ್ನಡದ ಘನವಿದ್ವಾಂಸರು, ಖ್ಯಾತ ಸಂಶೋಧಕರು ಆದ ಡಾ. ಎಂ. ಚಿದಾನಂದ ಮೂರ್ತಿಯವರಿಗೆ 'ಸಾಹಿತ್ಯ ಸುಧಾರಕ' ಪ್ರಶಸ್ತಿಯನ್ನು ಕನ್ನಡದ ಖ್ಯಾತ ನಟಿ ಜಯಂತಿಯವರಿಗೆ 'ಕಲಾಕಲ್ಪವಲ್ಲರಿ' ಎಂಬ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಚಿಕ್ಕೋಡಿಯ ಶಂಕರ ಮಗದುಮ್ ಅವರಿಗೆ "ಕರುನಾಡ ಕುವರ' ಎಂಬ ಪ್ರಶಸ್ತಿಯನ್ನು, ಸುಮತಿ ಶ್ರೀ ನವಲಿಮಠ ಅವರಿಗೆ 'ಕರುನಾಡ ಕುವರಿ' ಎಂಬ ಪ್ರಶಸ್ತಿಯನ್ನು, ಡಾ. ಎಚ್.ಡಿ. ದಡ್ಡಿ 'ಕರುನಾಡ ಕುವರ' ಎಂಬ ಪ್ರಶಸ್ತಿಯನ್ನು ನೀಡಿ

ಗೌರವಿಸಿದ್ದಾರೆ. ಇಷ್ಟೇ ಅಲ್ಲದೇ ರಾಯಬಾಗ ತಾಲೂಕಿನ ಮಂಟೂರ ವಿರಕ್ತ ಮಠದ ಶ್ರೀ ಅಪ್ಪಯ್ಯ ದೇವರಿಗೆ "ಸಾಧನಾ ಶ್ರೀ" ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಹಿರೇಬಾಗೇವಾಡಿಯ ಉಪ ತಹಶೀಲ್ದಾರ ಯ.ರು. ಪಾಟೀಲರಿಗೆ 'ಕರುನಾಡ ಕುವರ' ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಹೀಗೆ ನಾಡಿನಾದ್ಯಂತ ವಿವಿಧ ಸಾಧಕರನ್ನು ಗುರುತಿಸಿ ಪ್ರಶಸ್ತಿ ಪ್ರಧಾನ ಮಾಡಿ ಹರಿಸಿದ್ದಾರೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಶ್ರೇಷ್ಠ ಸಾಹಿತಿಗಳಿಗೆ ಉತ್ಕೃಷ್ಟ ಕೃತಿಗೆ ರಾಜ್ಯ ಮಟ್ಟದ ಸಾಹಿತ್ಯ ಪ್ರಶಸ್ತಿ ಗೌರವಿಸುವುದರೊಂದಿಗೆ ಪ್ರೋತ್ಸಾಹಿಸುತ್ತಿದ್ದಾರೆ. ಇನ್ನೂ ಮುಂದುವರೆದು ಶಾಸನ, ಹಸ್ತ ಪತ್ರಿಕೆಗಳ ಸಂಗ್ರಹ, ಗ್ರಾಮೀಣ ತಾಯಂದಿರು ಉಪಯೋಗಿಸುತ್ತಿದ್ದ ಕೌಟುಂಬಿಕ ಸಲಕರಣೆಗಳು, ರೈತ ಬಳಸುತ್ತಿದ್ದ ಕೃಷಿ ಸಲಕರಣೆಗಳು ಸಂಗ್ರಹಿಸಿ ಜನಪದ ಸಂಸ್ಕೃತಿಯ ಅರಿವನ್ನು ನಾಗರಿಕ ಜನಾಂಗಕ್ಕೆ ತಿಳಿಸುವ ಘನವಿಚಾರವನ್ನು ಹೊಂದಿದ್ದಾರೆ. ವಿಶೇಷ, ವಿಶೀಷ್ಠ ಉಪನ್ಯಾಸಗಳನ್ನು ಸಾಹಿತ್ಯಕ ಸಾಂಸ್ಕೃತಿಕ ಚಟುವಟಿಕೆಗಳನ್ನು ಏರ್ಪಡಿಸುತ್ತ ಮುಂದಿನ ಪೀಳಿಗೆಗೆ ಪರಿಚಯಿಸಿ ಕೊಡುವ ಉದ್ದೇಶವನ್ನು ಹೊಂದಿದ್ದಾರೆ. ಹೀಗೆ ಗಡಿನಾಡ ಭಾಗದ ಸರ್ವತೋಮುಖ ಬೆಳವಣಿಗೆಗೆ ಕಂಕಣ ಬದ್ಧರಾದವರು ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ಇಲ್ಲಿಯವರೆಗೆ ಗುರುತಿಸಿದ ಸಂಸ್ಕೃತಿಕ ಮತ್ತು ಸಾಮಾಜಿಕ ಸೇವೆ ಎರಡು ದಶಕಗಳ ಅವಧಿಯಲ್ಲಿ ಆದದ್ದು ತುಂಬ ಗಮನಾರ್ಹ.

ಅಡಿ ಟಿಪ್ಪಣಿ ::

೧. ಎಂ.ಎಂ. ಕಲಬುರ್ಗಿ : ಸಾರಂಗಶ್ರೀ : ಪುಟ : ೦೫

೨. ಹಸಿರು ಕ್ರಾಂತಿ (ದಿನಪತ್ರಿಕೆ) : ದಿನಾಂಕ : ೨೦/೧೦/೨೦೧೨

೩. ಸಂಯುಕ್ತ ಕರ್ನಾಟಕ (ದಿನಪತ್ರಿಕೆ) : ದಿನಾಂಕ : ೦೩/೦೧/೨೦೦೭

೪. ವಿಜಯ ಕರ್ನಾಟಕ (ದಿನಪತ್ರಿಕೆ) : ದಿನಾಂಕ : ೦೬/೦೨/೨೦೦೭

೫. ವಿಜಯ ಕರ್ನಾಟಕ (ದಿನಪತ್ರಿಕೆ) : ದಿನಾಂಕ : ೨೦/೦೭/೨೦೦೬

೬. ಪ್ರಜಾವಾಣಿ (ದಿನಪತ್ರಿಕೆ) : ದಿನಾಂಕ : ೧೦/೧೨/೨೦೦೮

೭. ವಿಜಯ ಕರ್ನಾಟಕ (ದಿನಪತ್ರಿಕೆ)

೮. ಕನ್ನಡಾಧಿಪತಿ (ಮಾಸಪತ್ರಿಕೆ) : ದಿನಾಂಕ : ಮಾರ್ಚ್ ೧೫ ರಿಂದ ಏಪ್ರೀಲ್ ೧೫

೯. ಕನ್ನಡಾಧಿಪತಿ (ಮಾಸಪತ್ರಿಕೆ) : ದಿನಾಂಕ : ಮಾರ್ಚ್ ೧೫ ರಿಂದ ಏಪ್ರೀಲ್ ೧೫

೧೦. ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು : ವಚನ ಕಾರಂಜಿ

೧೧. ಡಿ.ವಿ. ಪುರಾಣಿಕ : ಶ್ರೀ ಗುರುಶಾಂತೇಶ್ವರ ದೀಪ್ತಿ : ಪುಟ : ೪೮

೧೨. ವಿಜಯ ಕರ್ನಾಟಕ (ದಿನಪತ್ರಿಕೆ) ದಿನಾಂಕ : ೦೬/೦೭/೨೦೦೮

೧೩. ಸಂಯುಕ್ತ ಕರ್ನಾಟಕ (ದಿನಪತ್ರಿಕೆ) : ದಿನಾಂಕ : ೨೫/೦೭/೨೦೦೭

೧೪. ವಿಜಯ ಕರ್ನಾಟಕ (ದಿನಪತ್ರಿಕೆ) ದಿನಾಂಕ : ೨೫/೦೭/೨೦೦೮

*****

ಅಧ್ಯಾಯ – ೬

ಸಮಾರೋಪ

ಅಧ್ಯಾಯ : ಆರು

ಸಮಾರೋಪ

"ಚರಿತ್ರೆಯಂದರೆ ನಡೆದುದಷ್ಟೇ ಅಲ್ಲಾ, ನಡೆಯುತ್ತಿರುವುದು ಕೂಡಾ" ಎಂಬ ಜೀ.ಎಸ್. ಶಿವರುದ್ರಪ್ಪನವರ ಮಾತನ್ನು ಅಕ್ಷರಶಃ ಸತ್ಯಗೊಳಿಸಿರಿಸುವುದು ಕರ್ನಾಟಕದ ಗಡಭಾಗದ "ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ" ಇಲ್ಲಿಯವರೆಗೆ ಹುಕ್ಕೇರಿ ಹಿರೇಮಠದ ವಿವರವಾದ ವಿಹಂಗಮ ನೋಟವನ್ನು ಅವಲೋಕಿಸಿದೆವು. ಹಿರೇಮಠವು ೯ನೇ ಶತಮಾನಕ್ಕಿಂತ ಪೂರ್ವದಲ್ಲಿಯೇ ಅಸ್ತಿತ್ವದಲ್ಲಿದ್ದು, ಸಾವಿರಾರು ವರ್ಷಗಳ ನಡೆಗಮನವಿದೆ. ಅಲ್ಲಿಂದ ಇಲ್ಲಿಯವರೆಗಿನ ಸಿಂಹಾವಲೋಕನದಲ್ಲಿ, ಪಂಚಾಚಾರ್ಯರುಗಳಾದ ರೇವಣಸಿದ್ಧರು ರಂಭಾಪುರಿಯಲ್ಲಿ ಸ್ಥಾಪಿಸಿದ ವೀರಸಿಂಹಾಸನಾಪೀಠ, ಮರುಳಾಧ್ಯರು ಉಜ್ಜಯಿನಿಯಲ್ಲಿ ಸ್ಥಾಪಿಸಿದ ಸದ್ಧರ್ಮಸಿಂಹಾಸನಾಪೀಠ, ಏಕೋರಾಮಾರಾಧ್ಯರು ಕೇದಾರದಲ್ಲಿ ಸ್ಥಾಪಿಸಿದ ವೈರಾಗ್ಯಪೀಠ, ಪಂಡಿತಾರಾಧ್ಯರು ಶ್ರೀಶೈಲದಲ್ಲಿ ಸ್ಥಾಪಿಸಿದ ಸೂರ್ಯಸಿಂಹಾಸನಪೀಠ, ವಿಶ್ವಾರಾಧ್ಯರು ಕಾಶಿಯಲ್ಲಿ ಸ್ಥಾಪಿಸಿದ ಜ್ಞಾನ ಸಿಂಹಾಸನ ಪೀಠಗಳು ವೀರಶೈವ ಮಠ ಪರಂಪರೆಯ ತಾಯಿಬೇರುಗಳು. ಈ ಪೀಠದ ಜಗದ್ಗುರುಗಳು ಉತ್ತರ ಭಾರತದಿಂದ

ದಕ್ಷಿಣ ಭಾರತದವರೆಗೂ ಸಂಚರಿಸಿ ವೀರಶೈವ ಧರ್ಮದ ಸುಭದ್ರ ಮುದ್ರೆಗಳೊತ್ತಿರುವುದು ಸ್ಪಷ್ಟವಾಗುತ್ತದೆ.

ಪಂಚಾಚಾರ್ಯರು ಉತ್ತರ ಭಾರತದಿಂದ ದಕ್ಷಿಣದವರೆಗೆ ಸಂಚಾರದಲ್ಲಿದ್ದಾಗ, ಶ್ರೀಮದ್ ರಂಭಾಪುರಿ ಪೀಠದ ಜಗದ್ಗುರು ರೇಣುಕಾಚಾರ್ಯರು ತಮ್ಮ ಅನುಯಾಯಿಗಳಾಗಿದ್ದ ಶ್ರೀ ಗುರು ಶಾಂತೇಶ್ವರರಿಗೆ ಈ ಭಾಗದಲ್ಲಿ ಚರಜಂಗಮ ತತ್ವಾನ್ವಯ ಸಂಚರಿಸುತ್ತ ಧರ್ಮ ಜಾಗೃತಿ, ಜನಸೇವೆ, ಸಾಮಾಜಿಕ ಸ್ವಾಸ್ಥ್ಯಗಳನ್ನು ಕಾಪಾಡಲು ಸೂಚಿಸಿ, ನಿಮ್ಮ ಚರಜಂಗಮ ಮುದ್ರೆಗಳು ಈ ಭಾಗದಲ್ಲಿ ಸೂರ್ಯ ಚಂದ್ರರಿರುವವರೆಗೆ ಬೆಳಗಲಿ ಎಂದು ಅನುಗ್ರಹಿಸಿದ, ಈ ನಿಟ್ಟಿನಲ್ಲಿ ಗುರು ಶಾಂತೇಶ್ವರರು ಈ ಭಾಗದಲ್ಲಿ ಧರ್ಮ ಜಾಗೃತಿ ಕಾರ್ಯ ಕೈಕೊಂಡು ವೀರಶೈವ ಮಹತ್ವ, ತ್ರಿವಿಧ ದಾಸೋಹ ಮಾನವೀಯ ಅಂತಃಕರುಣ, ದಯೆ ಕಾರುಣ್ಯ, ಅಷ್ಟಾವರಣ ಪಂಚಾಚಾರ ಷಟಸ್ಥಳಗಳ ತಾತ್ವಿಕ ವಿವೇಚನೆಯನ್ನು ಬಿತ್ತರಿಸುತ್ತ, ನೈತಿಕ ಜಾಗೃತಿಯನ್ನು ಕೈಕೊಂಡು ಲೋಕಕಲ್ಯಾಣಾರ್ಥ ಸಂಚರಿಸಿದ ವಿವರಗಳನ್ನೆಲ್ಲ ವಿವರಿಸಲಾಗಿದೆ. ಕಾಲಾಂತರದಲ್ಲಿ ಶ್ರೀ ಗುರು ಶಾಂತೇಶ್ವರರ ಕುಠೀರವೇ ಮಠವಾಯಿತೆಂಬುದು ಇಲ್ಲಿಯವರೆಗಿನ ಅಧ್ಯಯನದಿಂದ ತಿಳಿದು ಬರುತ್ತದೆ. ಆದರೆ ಹುಕ್ಕೇರಿ ಹಿರೇಮಠದ ಸಂಸ್ಥಾಪಕರಾದ ಶ್ರೀ ಗುರು ಶಾಂತೇಶ್ವರರ ಪೂರ್ವಾಶ್ರಮದ ತಂದೆ-ತಾಯಿಗಳಾಗಲಿ, ಹುಟ್ಟಿದ ಸ್ಥಳವಾಗಲಿ ತಿಳಿದು ಬಂದಿಲ್ಲ. ಇದರಂತೆ ಈ ಪೀಠದ ೫ಳನೇ ಪೀಠಾಧಿಪತಿಗಳವರೆಗೆ ಪೂರ್ವಾಶ್ರಮದ ಯಾವ ಸಂಗತಿಯೂ ತಿಳಿದಿಲ್ಲ. ಆದರೂ ಹುಕ್ಕೇರಿ ಹಿರೇಮಠದ ಪೀಠಾಧ್ಯಕ್ಷರು ಮಠವನ್ನು ಇಲ್ಲಿಯವರೆಗೆ ಬೆಳಗಿದ್ದು ಇತಿಹಾಸದಲ್ಲಿ ಸ್ಪಷ್ಟವಾಗಿ ಅಲ್ಲದಿದ್ದರೂ ಮಠದ ಹಳೇ ಕಟ್ಟಡವನ್ನು ಶೋಧಿಸಿದಾಗ ತಿಳಿದು ಬರುತ್ತದೆ.

ಸಾವಿರ ವರ್ಷಗಳ ಇತಿಹಾಸವುಳ್ಳ "ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠ"ವು ಕರ್ನಾಟಕದ ಗಡಿಭಾಗದಲ್ಲಿ ತನ್ನದೇ ಆಸ್ತಿತ್ವವನ್ನು ಹೊಂದಿ ಪಂಚಾಚಾರ್ಯರ, ಬಸವಾದಿ

ಶರಣರ ಧ್ಯೆಯೋದ್ದೇಶಗಳನ್ನು ಅನುಷ್ಠಾನಗೊಳಿಸುತ್ತ ಬಂದಿದೆ. ಪಂಚಾಚಾರ್ಯರ ಮಠಕ್ಕೊಂದು ಇತಿಹಾಸವಿದ್ದಂತೆ ವಿರಕ್ತ ಮಠಕ್ಕೊಂದು ಇತಿಹಾಸವಿದೆ. ಈ ಎರಡೂ ಒಂದಕ್ಕೊಂದು ಸಾಮರಸ್ಯದಿಂದ ಬೆರೆತು ಬಸವಾದಿ ಶರಣರ ನಡೆನುಡಿ ಆಚಾರ-ವಿಚಾರ, ಕಾಯಕ ದಾಸೋಹ ಕ್ರಿಯಾಜ್ಞಾನವನ್ನು ಸಾಮರಸ್ಯದೊಂದಿಗೆ ಪಂಚಾಚಾರ್ಯರ ಪೀಠದ ಧರ್ಮ ಜಾಗೃತಿ ಕಾರ್ಯಗಳನ್ನು ಮಾಡುತ್ತ ಇಲ್ಲಿಯವರೆಗೂ ನಡೆದು ಬಂದಿದೆ. ಹುಕ್ಕೇರಿ ಹಿರೇಮಠಕ್ಕೆ ೫೯ ಜನ ಪೀಠಾಧಿಪತಿಗಳ ಗುರು ಪರಂಪರೆಯಿರುವುದು ಶ್ಲಾಘನೀಯ.

ಇಂದಿನ ೫೯ನೇ ಪೀಠಾಧ್ಯಕ್ಷರಾದ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು, ಪೂರ್ವಾಶ್ರಮದಲ್ಲಿಯ ಸಂಸ್ಕಾರ ಬಲದಿಂದ, ಅಪೂರ್ವ ಮಠವನ್ನು ನಡೆಸಿಕೊಂಡು ಬರುತ್ತಿರುವ ಧಾರ್ಮಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹೆಜ್ಜೆಗಳನ್ನು ವಿಸ್ತಾರವಾಗಿ ನೋಡಲಾಗಿದೆ. ಇವರಿಗಿರುವ ಪಂಚಾಚಾರ್ಯರ ಧಾರ್ಮಿಕ, ಆಧ್ಯಾತ್ಮಿಕ, ಸಾಂಸ್ಕೃತಿಕ ಕೊಡುಗೆಗಳೊಂದಿಗೆ ಬಸವಾದಿ ಪ್ರಮಥರ ಹಾದಿಯಲ್ಲಿ ನಡೆಯಲು ಕಂಕಣ ಕಟ್ಟಿ ನಿಂತ ಶಿವಾಚಾರ್ಯರು 'ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ' ಪ್ರತಿಷ್ಠಾನವನ್ನು ಸ್ಥಾಪಿಸಿ ಆಮುಖೇನ ಸಮಾಜವನ್ನು ಮಾತೃವಾತ್ಸಲ್ಯದಿಂದ ಪಾಲಿಸುತ್ತಿರುವ ಸೇವೆ ಸ್ಮರಣಾರ್ಹವಾದುದು. ಅವರಿಡುವ ಒಂದೊಂದು ಹೆಜ್ಜೆಯೂ ವೀರಶೈವ ತತ್ವೋನ್ನತಿಯ ಮೈಲಿಗಲ್ಲುಗಳು. ನಿಜಗುಣ ಶಿವಯೋಗಿಗಳ ಮಾತಿನಂತೆ "ಕಾಯವನ್ನು ಕಾಂತಾರವನ್ನಾಗಿ ಮಾಡಿ ಮಾಯ-ಮೋಹದ ಮೃಗಗಳನ್ನು ಬೇಟೆಯಾಡಿ ಶರೀರವನ್ನು ಹಸನಾದ ಹೊಲವನ್ನಾಗಿ ಮಾಡಿ ಪರತತ್ವದ ಬೆಳೆಯನ್ನೇ ಬೆಳೆದುಣ್ಣು"ವಂತವರು ಎಂಬುದನ್ನು ವಿವೇಚಿಸಲಾಗಿದೆ.

"ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ"ದ ಅಧ್ಯಯನವೆಂದರೆ ಪ್ರಸ್ತುತ ಪೀಠಾಧಿಪತಿಗಳ ಸಾಧನೆಯ ಮೈಲಿಗಲ್ಲುಗಳೇ. ಶಿವಾಚಾರ್ಯರು ಪರಂಪರಾಗತವಾಗಿ ನಡೆದುಕೊಂಡಿರುವ ಸಾಂಸ್ಕೃತಿಕ ಹಬ್ಬವಾದ ದಸರಾ ಹಬ್ಬದ ಆಚರಣೆಯೇ ವಿಶಿಷ್ಟವಾದುದು.

ಪೌರಾಣಿಕ, ಐತಿಹಾಸಿಕ ಹಿನ್ನಲೆಯನ್ನಲ್ಲದೆ ಆಧುನಿಕ ಸಾಮಾಜಿಕ ವ್ಯವಸ್ಥೆಯಲ್ಲಿ ವೈಚಾರಿಕತೆಯನ್ನು ಜನ ಮಾನಸದಲ್ಲಿ ಮೂಡಿಸುವ ನಿಟ್ಟಿನಲ್ಲಿ ಆಚರಿಸುವ 'ದಸರಾ' ಹಬ್ಬವೇ ಈ ಮಠದ ವಿಶಿಷ್ಟ ಸಾಂಸ್ಕೃತಿಕ ಕೊಡುಗೆಯಗಿದೆ.

"ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನ"ವನ್ನು ಸ್ಥಾಪಿಸಿ ಅದರ ಮುಖಾಂತರ ಆಧ್ಯಾತ್ಮಿಕ, ಧಾರ್ಮಿಕ, ಜಾಗೃತಿ, ಸಾಮಾಜಿಕ ಜಾಗೃತಿಯೊಂದಿಗೆ ಸಮಾಜ ಸೇವೆ, ಶಿಕ್ಷಣ, ಸಾಹಿತ್ಯ ಅಕ್ಷರ–ದಾಸೋಹ ಸೇವೆಸಲ್ಲಿಸುತ್ತಿರುವುದನ್ನು ನೋಡಿ ಎಂಥವರು ಕಣ್ಣರಳಿಸುತ್ತಾರೆ. ಮಹಿಳೆಯರ ಬಗೆಗೆ ಶಿವಾಚಾರ್ಯರರಿಗೆ ವಿಶೇಷ ಕಾಳಜಿಯಿದೆ. ಮಹಿಳಾ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಅನೇಕ ಮಹಿಳೆಯರಿಗೆ ವೇಧ ಪಠಣ ತರಬೇತಿ ಅನುಗ್ರಹಿಸಿ ಧಾರ್ಮಿಕ ಆಧ್ಯಾತ್ಮಿಕ ಸಾಧನೆಯತ್ತ ಕೊಂಡೊಯ್ಯುವಲ್ಲಿ ಮಹತ್ವದ ಸಾಧನೆಯಾಗಿದೆ. ಚರಿತ್ರಾರ್ಹ ಸಂಗತಿಯೆಂದರೆ ವಿದೇಶ (ಇಟಲಿ)ದ ಮಹಿಳೆ ತತ್ಸಿಯಾನಾ ರೀಪೇಪ ಅವರಿಗೆ ಇಷ್ಟಲಿಂಗ ಸಂಕಲ್ಪನೆಯನ್ನು ತಿಳಿಸಿ ಅಂಗ–ಲಿಂಗ ಸಾಮರಸ್ಯವಾಗುವ ಜ್ಞಾನ ದೀಕ್ಷೆಯನ್ನು ಅನುಗ್ರಹಿಸಿದ್ದು ಸ್ತುತ್ಯಾರ್ಹ.

ಜನರಲ್ಲಿ ಪಾರಂಪರಿಕ ಸಂಸ್ಕೃತಿ, ನೈತಿಕತೆ, ಧಾರ್ಮಿಕ ಜಾಗೃತಿಯೊಂದಿಗೆ, ಸದ್ಭಾವನೆಯನ್ನು ಬೆಳೆಸಿಕೊಳ್ಳುವಂತಹ ಕಾರ್ಯಕ್ರಮಗಳನ್ನು ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಡಿಯಲ್ಲಿ ಪ್ರತಿ ವರ್ಷವೂ ಮಕ್ಕಳಿಗಾಗಿ ಸಂಸ್ಕಾರ ಶಿಬಿರಗಳನ್ನು ಹಮ್ಮಿಕೊಳ್ಳುತ್ತಾ ಸಂಸ್ಕಾರವಂತ ಸಮಾಜವನ್ನು ನಿರ್ಮಿಸುವ ಕಾರ್ಯ ಜನಜನಿತ. ನಾಡಿನಾದ್ಯಂತ ಸಾವಿರಾರು ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತ ಜನರಲ್ಲಿ ಪರಿಸರ ಸಂರಕ್ಷಣೆಯ ವಿಚಾರಗಳನ್ನು ತಿಳಿಸುತ್ತ ಶ್ರೀ ಗುರುಶಾಂತೇಶ್ವರ ಪ್ರತಿಷ್ಠಾನದಡಿಯಲ್ಲಿ ಪರಿಸರ ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಂಡು ಸುಮಾರು ಮೂರು ಲಕ್ಷಕ್ಕೂ ಅಧಿಕ ಸಸಿಗಳನ್ನು ಶ್ರೀ ಮಠದಿಂದ ವಿತರಿಸಿ ಪರಿಸರ ಸಂರಕ್ಷಣೆಯಲ್ಲಿ ವಿಶೇಷ ಕಾಳಜಿವಹಿಸಿರುವರು.

ಗಡಿಭಾಗದಲ್ಲಿ ಕನ್ನಡ ನುಡಿಯ ಜಾಗೃತಿ ಇದರ ಮುಖ್ಯಧ್ಯೇಯ, ಗಡಿನಾಡ ಮಕ್ಕಳಿಗಾಗಿ ಕನ್ನಡ ಪ್ರಾಥಮಿಕ ಶಾಲೆ, ಮಾಧ್ಯಮಿಕ ಶಾಲೆಯಿಲ್ಲದೆ ದೂರ ಶಿಕ್ಷಣ ಕೇಂದ್ರವನ್ನು ಪ್ರಾರಂಭಿಸಿ ಶಿಕ್ಷಣಾರ್ಥಿಗಳಿಗೆ ಅನುಕೂಲ ಮಾಡಿಕೊಟ್ಟ ಹೆಮ್ಮೆ ಇವರದು. ಇದರೊಂದಿಗೆ ಸಾಹಿತ್ಯಕವಾಗಿಯೂ ಜನರ ಸಮಾಜದ ಜಾಗೃತಿ ಕೈಕೊಂಡವರು. ಅವರ 'ವಚನ ಕಾರಂಜಿ'ಯು ಸಮಾಜದ ಮೇಲೆ ಹೊಸ ಬೆಳಕನ್ನು ಚೆಲ್ಲಿದೆ, ಜನರ ಆಷಾಡಭೂತಿತನ, ಆಡಂಬರದ ಭಕ್ತಿ, ಸುಳ್ಳು ಮೋಸಗಳು, ಕನ್ನಡ ಭಾಷೆ, ಸಂಸ್ಕೃತಿಯ ಅಸಡ್ಡತನಗಳನ್ನೆಲ್ಲ ವಿಡಂಬಿಸುತ್ತಾ ರಚಿಸಿದ 'ಹುಕ್ಕೇರಿಶಾ' ಎಂಬ ವಚನಾಕಿಂತದಲ್ಲಿ ರಚಿಸಿದ ೧೨೭ ವಚನಗಳು ಜನಮನಕ್ಕೆ ಮುಟ್ಟುವಂಥವುಗಳಾಗಿವೆ. ಧರ್ಮ, ಪರಂಪರೆ ವೈಚಾರಿಕತೆ, ಸಮನ್ವಯತೆ, ಕರ್ತವ್ಯ ಪಾಲನೆಯ ಜಾಗೃತಿಯದೆ. ದುಷ್ಟ ಶಕ್ತಿಗಳಿಂದ ಹೇಗೆ ದೂರವಿರಬೇಕೆಂಬುದನ್ನು ಸಮರ್ಥವಾಗಿ ಅಭಿವ್ಯಕ್ತಿಸಿದ್ದಾರೆ. ಪ್ರತಿಷ್ಠಾನದಿಂದ ಪ್ರಕಾಶನವನ್ನು ನಡೆಸಿ, 'ವಚನ ಕಾರಂಜಿ' ಹಾಗೂ ಪೂಜ್ಯ ಶ್ರೀ ನಿಜಗುಣ ದೇವರು ರಚಿಸಿದ "ಹುಕ್ಕೇರಿ ಹಿರೇಮಠದ ಸ್ತೋತ್ರ ನಾಮಾವಳಿ ಭಕ್ತಿಗೀತೆ ಮಂಗಳಾರತಿ" ಸಂಕಲನವನ್ನು ಪ್ರಕಾಶಿಸಿದ್ದಾರೆ. ಶ್ರೀ ಗುರು ಶಾಂತೇಶ್ವರ ಜನ ಕಲ್ಯಾಣ ಆಡಿಯೋ ಮತ್ತು ವೀಡಿಯೋದಿಂದ "ಮನುಕುಲದ ಮಂದಾರ", "ಸಮಾನತೆಯ ಶ್ರೀ", "ಹುಕ್ಕೇರಿ ಹಿರೇಮಠದ ವೈಭವ", "ಶ್ರೀ ರುದ್ರಪಾಠ", "ಜಯಗುರು ಶಾಂತೇಶ" ಎಂಬ ಧ್ವನಿಸುರುಳಿಗಳನ್ನು ಬಿಡುಗಡೆ ಮಾಡಿದ್ದಾರೆ. ಸರ್ಕಾರದ ಅಕ್ಷರ-ದಾಸೋಹದ ಬಿಸಿಯೂಟ ವಿತರಿಸುವ ಗುತ್ತಿಗೆಯನ್ನು ಪಡೆದು "ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಡಿಯಲ್ಲಿ ಯಶಸ್ವಿಯಾಗಿ ನಡೆಸುತ್ತಿರುವುದು ಕರ್ನಾಟಕದಾದ್ಯಂತ ಮೆಚ್ಚುಗೆ ಪಡೆದ ಸೇವೆಯಾಗಿದೆ. ಕರ್ನಾಟಕದ ಗಡಿಭಾಗದಲ್ಲಿ ಅಕ್ಷರ-ಅನ್ನ ದಾಸೋಹದಡಿಯಲ್ಲಿ ನಾಡು-ನುಡಿ, ಸಂಸ್ಕೃತಿ, ಶಿಕ್ಷಣ, ಸಾಹಿತ್ಯಗಳೆಲ್ಲ ಯಶಸ್ವಿಯಾಗುತ್ತಿವೆ. ಹುಕ್ಕೇರಿ, ನಿಪ್ಪಾಣಿ ವಲಯ, ಚಿಕ್ಕೋಡಿ ಭಾಗದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ಶುದ್ಧವಾದ ಮತ್ತು ರುಚಿಯಾದ ಬಿಸಿಯೂಟವನ್ನು ಒದಗಿಸುವಲ್ಲಿ

ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ತ್ರಿಕರಣಪೂರ್ವಕವಾಗಿ ಭಾಗಿಯಾಗಿದ್ದಾರೆ. ಸಂಕೇಶ್ವರದ ಶ್ರೀ ಜಗದ್ಗುರು ಪಂಚಾಚಾರ್ಯ ಶಿಕ್ಷಣ ಸಂಸ್ಥೆಯ ಗೌರವ ಅಧ್ಯಕ್ಷರಾಗಿ ಹುಕ್ಕೇರಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷರಾಗಿ ಗಡಿನಾಡ ಭಾಗದಲ್ಲಿ ಕನ್ನಡ ಜನರ ಅಭಿವೃದ್ಧಿ ಕಾರ್ಯಗಳನ್ನು ನಡೆಸುತ್ತಿರುವುದು ವರ್ತಮಾನದ ಕನ್ನಡಿ.

ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು ದೀನರ, ದಲಿತರ, ಅಂಧರ, ವೃದ್ಧರ, ವಿಧವೆಯರ ಸೇವೆಯಲ್ಲಿ ಪರಮಾತ್ಮನನ್ನು ಕಂಡುವರು. ಆತ್ಮೋದ್ಧಾರದೊಂದಿಗೆ ಧರ್ಮೋದ್ಧಾರ ಸಮಾಜದ ಉದ್ಧಾರದ ಕಾರ್ಯ ಕೈಕೊಂಡು ಹುಕ್ಕೇರಿ ಮಠವನ್ನು ಪಾವನಗೊಳಿಸಿದ್ದಾರೆ.

ಶ್ರೀ ಗುರುಶಾಂತೇಶ್ವರ ಜನ ಕಲ್ಯಾಣ ಪ್ರತಿಷ್ಠಾನದಡಿಯಲ್ಲಿ ನಾಡಿನಾದ್ಯಂತ, ಸಮಾಜಸೇವೆ, ಸಾಹಿತ್ಯಿಕ ಸಾಧನೆ, ಉತ್ತಮ ರಾಜಕೀಯದಲ್ಲಿ, ಶಿಕ್ಷಣದಲ್ಲಿ, ಧರ್ಮಕಾರ್ಯಗಳಲ್ಲಿ ಅವಿರತ ಸೇವೆಯೊಂದಿಗೆ ಸಾಧನೆ ಮಾಡಿದವರಿಗೆ ಪುರಸ್ಕಾರ ನೀಡಿ ಗೌರವಿಸುವುದರೊಂದಿಗೆ ಪ್ರೋತ್ಸಾಹಿಸುವ ಕಾರ್ಯ ಮೆಚ್ಚುವಂತಹದು. ಹುಕ್ಕೇರಿಯಲ್ಲಿ ರಾಷ್ಟ್ರೀಯ ಹಬ್ಬಗಳಾದ ಗಾಂಧಿ ಜಯಂತಿ, ಸ್ವಾತಂತ್ರ್ಯ ದಿನಾಚರಣೆ, ಕನ್ನಡ ರಾಜ್ಯೋತ್ಸವ, ಮಕ್ಕಳ ದಿನಾಚರಣೆ, ಶಿಕ್ಷಕರ ದಿನಾಚರಣೆಯಂತಹ ಕಾರ್ಯಕ್ರಮಗಳನ್ನು ಕೇವಲ ಸೀಮಿತ ಪ್ರದೇಶದಲ್ಲಿ ಮಾತ್ರ ಆಚರಿಸದೆ ಹುಕ್ಕೇರಿ ನಗರದಲ್ಲೆಲ್ಲ ಜನ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಊರು ಸ್ವಚ್ಛಗೊಳಿಸುವ ಕಾರ್ಯದಲ್ಲಿ ಸ್ವತಃ ಭಾಗಿಗಳಾಗುತ್ತಾರೆ. ಕೇವಲ 'ಮಾಡಿರಿ' ಎಂಬ ತತ್ವ ಉಪದೇಶವನ್ನಷ್ಟೇ ಮಾಡದೇ ಸ್ವತಃ ಆ ತತ್ವಗಳನ್ನು ಅನುಸರಿಸುವ ಕ್ರೀಯಾಶೀಲರಾಗಿ, ಮಾರ್ಗದರ್ಶಿಗಳಾಗಿದ್ದಾರೆ. ಜಾತಿ–ಮತಗಳ ಧರ್ಮದ ಭೇದವನ್ನಳಿದು ಸರ್ವಧರ್ಮ ಸಮನ್ವಯತೆಯ ಸಾಕಾರ, ಶಿವಾಚಾರ್ಯರ ಮುಖೇನ ಶ್ರೀ ಮಠದ್ದಾಗಿದೆ.

"ಹುಕ್ಕೇರಿ ಶ್ರೀ ಗುರುಶಾಂತೇಶ್ವರ ಹಿರೇಮಠ"ವನ್ನೊಳಗೊಂಡು ೫೨ ಶಾಖಾ ಮಠಗಳಿದ್ದು ಅವು ಈಗ ದಾಖಲೆಗಳಿಲ್ಲದೇ ನಶಿಸಿ ಹೋಗಿವೆ. ಅಸ್ತಿತ್ವವನ್ನು ಕಳೆದುಕೊಂಡಿವೆ

ಎಂದು ಹೇಳಲಾಗುತ್ತದೆ. ಆದರೆ ಸರಿಯಾದ ಸಂಶೋಧನೆ ನಡೆದರೆ ಸತ್ಯ ತಿಳಿಯಬಹುದೇನೋ? 'ಒಟ್ಟಾರೆ ಶ್ರೀ ಗುರುಶಾಂತೇಶ್ವರ ಶಾಂತೇಶ್ವರ ಹಿರೇಮಠ'ವು ನಾಡಿನಾದ್ಯಂತ ಸ್ವದೇಶ-ವಿದೇಶಗಳಲ್ಲಿಯೂ ಪ್ರಚಾರವನ್ನು ಪಡೆದು ಜನಮಾನಸದಲ್ಲಿ ಉಳಿಯುತ್ತಿದೆಯೆಂದರೆ, ಇದಕ್ಕೆ ಪ್ರಸ್ತುತ ಮಠಾಧ್ಯಕ್ಷರಾಧ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಅವಿರತ ಸೇವೆಯೇ ಕಾರಣ. ಇವರ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಸಾಹಿತ್ಯಕ, ಅಕ್ಷರ-ದಾಸೋಹ, ಸಾಂಸ್ಕೃತಿಕ ಸೇವೆಯನ್ನು ಗುರುತಿಸಿ ನಾಡಿನ ಪ್ರತಿಷ್ಠಿತ ಪ್ರಶಸ್ತಿಗಳಲ್ಲಿ ಅವರನ್ನರಿಸಿಕೊಂಡು ಬಂದು ಮುಡಿಸೇರಿದೆ.' "ಶ್ರೀ ಜಗಜ್ಯೋತಿ ಶ್ರೀ ಬಸವೇಶ್ವರ ಸದ್ಭಾವನಾ" ಪ್ರಶಸ್ತಿ", "ಶಾಂತಿ ಸೌಹಾರ್ದ" ಪ್ರಶಸ್ತಿ, "ಅಕ್ಷರ-ದಾಸೋಹ" ಪ್ರಶಸ್ತಿಗಳಲ್ಲದೆ "ಸ್ವರ ಮಂದಾರ", "ವೃತ್ತಿ ಶ್ಚೈತನ್ಯ ರತ್ನ" ಪ್ರಶಸ್ತಿ, "ಕರ್ನಾಟಕ ವಿಕಾಸ ರತ್ನ", "ಕಾಯಕಯೋಗಿ", "ನಾಡ ಚೇತನ", "ರಾಜಾವೀರ ಮದಕರಿ ನಾಯಕ", "ಗೋವರ್ಧನ ಗಿರಿರತ್ನ" ಪ್ರಶಸ್ತಿಗಳೆಲ್ಲ ಅವರ ಕೀರ್ತಿಗೆ ಒಲಿದು ಬಂದವುಗಳು. ಇವುಗಳ ಹಿಂದೆ ಶಿವಾಚಾರ್ಯರ ಅವಿರತ ಶ್ರಮವಿದೆ. ಕಾಯಕ ದಾಸೋಹದ ಫಲವಿದೆ. ಭಕ್ತರ ಭಕ್ತಿಯನ್ನು ಸಾಕಾರಗೊಳಿಸುತ್ತ ಸಮಾಜದ ಅಭಿವೃದ್ಧಿಗೆ ಮಾದರಿಯಾಗಿದ್ದಾರೆ. ಇಂಥ ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಅವಿರತ ಪ್ರಯತ್ನದಿಂದ ಇಂದು 'ಹುಕ್ಕೇರಿ ಶ್ರೀ ಗುರು ಶಾಂತೇಶ್ವರ ಹಿರೇಮಠ'ವು ಅಧ್ಯಯನ ಮಾಡುವಷ್ಟರ ಮಟ್ಟಿಗೆ ಚರಿತ್ರೆಯನ್ನು ಹೊಂದಿದೆ ಎಂಬುದನ್ನು ಕೂಲಂಕಶವಾಗಿ ನಿರ್ಧಿಷ್ಟ ಚೌಕಟ್ಟಿನಲ್ಲಿ ವಿವೇಚಿಸಲಾಗಿದೆ.

*****

ಅನುಬಂಧ – ೧

ಹುಕ್ಕೇರಿ 'ಶ್ರೀ ಗುರುಶಾಂತೇಶ್ವರ ಹಿರೇಮಠ'ದ ಪೀಠಾಧಿಪತಿಗಳ ಪರಂಪರೆ

ಅನುಬಂಧ – ೧

ಹುಕ್ಕೇರಿ 'ಶ್ರೀ ಗುರುಶಾಂತೇಶ್ವರ ಹಿರೇಮಠ'ದ ಪೀಠಾಧಿಪತಿಗಳ ಪರಂಪರೆ

ಅ.ನಂ.	ಪೀಠಾಧಿಪತಿಗಳ ಹೆಸರು
೧	ಶ್ರೀ ಗುರು ಶಾಂತೇಶ್ವರರು ಸ್ಥಾಪನಾಚಾರ್ಯರು
೨	ಶ್ರೀ.ಷ.ಬ್ರ. ಗುರುಪಾದ ಶಿವಾಚಾರ್ಯರು
೩	ಶ್ರೀ.ಷ.ಬ್ರ. ಗುರುಶಾಂತೇಶ ಶಿವಾಚಾರ್ಯರು
೪	ಶ್ರೀ.ಷ.ಬ್ರ. ಗುರುಲಿಂಗ ಶಿವಾಚಾರ್ಯರು
೫	ಶ್ರೀ.ಷ.ಬ್ರ. ರುದ್ರಮುನಿ ಶಿವಾಚಾರ್ಯರು
೬	ಶ್ರೀ.ಷ.ಬ್ರ. ರೇಣುಕ ಶಿವಾಚಾರ್ಯರು
೭	ಶ್ರೀ.ಷ.ಬ್ರ. ಚೆನ್ನಮಲ್ಲ ಶಿವಾಚಾರ್ಯರು
೮	ಶ್ರೀ.ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರು
೯	ಶ್ರೀ.ಷ.ಬ್ರ. ಶಿವಯೋಗಿ ಶಿವಾಚಾರ್ಯರು
೧೦	ಶ್ರೀ.ಷ.ಬ್ರ. ಶಂಭುಲಿಂಗ ಶಿವಾಚಾರ್ಯರು
೧೧	ಶ್ರೀ.ಷ.ಬ್ರ. ಗುರುಶಾಂತೇಶ ಶಿವಾಚಾರ್ಯರು
೧೨	ಶ್ರೀ.ಷ.ಬ್ರ. ಶಿವಲಿಂಗ ಶಿವಾಚಾರ್ಯರು
೧೩	ಶ್ರೀ.ಷ.ಬ್ರ. ಸಿದ್ಧಪಾದ ಶಿವಾಚಾರ್ಯರು
೧೪	ಶ್ರೀ.ಷ.ಬ್ರ. ಗುರುಪಾದ ಶಿವಾಚಾರ್ಯರು
೧೫	ಶ್ರೀ.ಷ.ಬ್ರ. ಗುರುಲಿಂಗ ಶಿವಾಚಾರ್ಯರು
೧೬	ಶ್ರೀ.ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರು
೧೭	ಶ್ರೀ.ಷ.ಬ್ರ. ಶಿವಯೋಗಿ ಶಿವಾಚಾರ್ಯರು
೧೮	ಶ್ರೀ.ಷ.ಬ್ರ. ಚೆನ್ನಮಲ್ಲ ಶಿವಾಚಾರ್ಯರು
೧೯	ಶ್ರೀ.ಷ.ಬ್ರ. ಮಲ್ಲಿಕಾರ್ಜುನ ಶಿವಾಚಾರ್ಯರು
೨೦	ಶ್ರೀ.ಷ.ಬ್ರ. ಗುರುಶಾಂತ ಶಿವಾಚಾರ್ಯರು
೨೧	ಶ್ರೀ.ಷ.ಬ್ರ. ಗುರುಪಾದ ಶಿವಾಚಾರ್ಯರು
೨೨	ಶ್ರೀ.ಷ.ಬ್ರ. ಗುರು ಮಲ್ಲಿಕಾರ್ಜುನ ಶಿವಾಚಾರ್ಯರು
೨೩	ಶ್ರೀ.ಷ.ಬ್ರ. ಶಿವಲಿಂಗ ಶಿವಾಚಾರ್ಯರು
೨೪	ಶ್ರೀ.ಷ.ಬ್ರ. ಸಿದ್ಧಯೋಗಿ ಶಿವಾಚಾರ್ಯರು
೨೫	ಶ್ರೀ.ಷ.ಬ್ರ. ಗುರುಪಾದ ಶಿವಾಚಾರ್ಯರು
೨೬	ಶ್ರೀ.ಷ.ಬ್ರ. ಚೆನ್ನಮಲ್ಲ ಶಿವಾಚಾರ್ಯರು
೨೭	ಶ್ರೀ.ಷ.ಬ್ರ. ಶಿವಯೋಗಿ ಶಿವಾಚಾರ್ಯರು
೨೮	ಶ್ರೀ.ಷ.ಬ್ರ. ಗುರುಶಾಂತ ಶಿವಾಚಾರ್ಯರು
೨೯	ಶ್ರೀ.ಷ.ಬ್ರ. ಗುರುಲಿಂಗ ಶಿವಾಚಾರ್ಯರು
೩೦	ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು
೩೧	ಶ್ರೀ.ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರು

ಅ.ನಂ.	ಪೀಠಾಧಿಪತಿಗಳ ಹೆಸರು
೩೨	ಶ್ರೀ.ಷ.ಬ್ರ. ವಿರೂಪಾಕ್ಷ ಶಿವಾಚಾರ್ಯರು
೩೩	ಶ್ರೀ.ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರು
೩೪	ಶ್ರೀ.ಷ.ಬ್ರ. ಗುರುಪಾದ ಶಿವಾಚಾರ್ಯರು
೩೫	ಶ್ರೀ.ಷ.ಬ್ರ. ಪಂಚಾಕ್ಷರಿ ಶಿವಾಚಾರ್ಯರು
೩೬	ಶ್ರೀ.ಷ.ಬ್ರ. ಮಹಾಂತಲಿಂಗ ಶಿವಾಚಾರ್ಯರು
೩೭	ಶ್ರೀ ಗುರುಶಾಂತಲಿಂಗ ಶಿವಾಚಾರ್ಯರು
೩೮	ಶ್ರೀ.ಷ.ಬ್ರ. ಗುರುಲಿಂಗ ಶಿವಾಚಾರ್ಯರು
೩೯	ಶ್ರೀ.ಷ.ಬ್ರ. ಶಿವಯೋಗಿ ಶಿವಾಚಾರ್ಯರು
೪೦	ಶ್ರೀ.ಷ.ಬ್ರ. ಶಂಕರಲಿಂಗ ಶಿವಾಚಾರ್ಯರು
೪೧	ಶ್ರೀ.ಷ.ಬ್ರ. ನೀಲಕಂಠ ಶಿವಾಚಾರ್ಯರು
೪೨	ಶ್ರೀ.ಷ.ಬ್ರ. ಗುರುಶಾಂತ ಶಿವಾಚಾರ್ಯರು
೪೩	ಶ್ರೀ.ಷ.ಬ್ರ. ಚೆನ್ನಮಲ್ಲಿಕಾರ್ಜುನ ಶಿವಾಚಾರ್ಯರು
೪೪	ಶ್ರೀ.ಷ.ಬ್ರ. ಗುರುಲಿಂಗ ಶಿವಾಚಾರ್ಯರು
೪೫	ಶ್ರೀ.ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರು
೪೬	ಶ್ರೀ.ಷ.ಬ್ರ. ರಾಚೋಟಿ ಶಿವಾಚಾರ್ಯರು
೪೭	ಶ್ರೀ.ಷ.ಬ್ರ. ನಾಗಲಿಂಗ ಶಿವಾಚಾರ್ಯರು
೪೮	ಶ್ರೀ.ಷ.ಬ್ರ. ಗುರುಶಾಂತ ಶಿವಾಚಾರ್ಯರು
೪೯	ಶ್ರೀ.ಷ.ಬ್ರ. ರೇಣುಕ ಶಿವಾಚಾರ್ಯರು
೫೦	ಶ್ರೀ.ಷ.ಬ್ರ. ವಿರಪಾಕ್ಷ ಶಿವಾಚಾರ್ಯರು
೫೧	ಶ್ರೀ.ಷ.ಬ್ರ. ರುದ್ರಮುನಿ ಶಿವಾಚಾರ್ಯರು
೫೨	ಶ್ರೀ.ಷ.ಬ್ರ. ಪಂಚಾಕ್ಷರಿ ಶಿವಾಚಾರ್ಯರು
೫೩	ಶ್ರೀ.ಷ.ಬ್ರ. ಗುರುಶಾಂತ ಶಿವಾಚಾರ್ಯರು
೫೪	ಶ್ರೀ.ಷ.ಬ್ರ. ಗುರುಲಿಂಗ ಶಿವಾಚಾರ್ಯರು
೫೫	ಶ್ರೀ.ಷ.ಬ್ರ. ಬಸವಲಿಂಗ ಶಿವಾಚಾರ್ಯರು
೫೬	ಶ್ರೀ.ಷ.ಬ್ರ. ಚೆನ್ನಬಸವ ಶಿವಾಚಾರ್ಯರು
೫೭	ಶ್ರೀ.ಷ.ಬ್ರ. ಶಂಕರಲಿಂಗ ಶಿವಾಚಾರ್ಯರು
೫೮	ಶ್ರೀ.ಷ.ಬ್ರ. ವಿರೂಪಾಕ್ಷ ಶಿವಾಚಾರ್ಯರು
೫೯	ಶ್ರೀ.ಷ.ಬ್ರ. ಚಂದ್ರಶೇಖರ ಶಿವಾಚಾರ್ಯರು (ಸದ್ಯದ ಪೀಠಾಧಿಪತಿಗಳು)

ಅನುಬಂಧ – ೨

ಛಾಯಾ ಚಿತ್ರಗಳು,

ಪತ್ರಿಕಾ ವರದಿಗಳು

[illegible]




[illegible]




[illegible]

ಅನುಬಂಧ – ೨

ಛಾಯಾ ಚಿತ್ರಗಳು



ಮುಖ್ಯ ಮಂತ್ರಿ ಚಂದ್ರು ಅವರಿಗೆ 'ರೇಣುಕ ಶ್ರೀ ಪ್ರಶಸ್ತಿ' ನೀಡಿ ಗೌರವಿಸುತ್ತಿರುವ ಶ್ರೀಗಳು




ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ನಿಮಿತ್ಯವಾಗಿ ರೋಗಿಗಳಿಗೆ ಫಲವಿತರಣೆ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ರಂಭಾಪುರಿ ಜಗದ್ಗುರುಗಳೊಂದಿಗೆ ಶ್ರೀಗಳು













ಮರದ ಕಟ್ಟಿಗೆಗಳಿಂದ ನಿರ್ಮಿತವಾದ ಹಳೆಯ ಶ್ರೀ ಗುರುಶಾಂತೇಶ್ವರ ಹಿರೇಮಠ




ನೂತನವಾಗಿ ನಿರ್ಮಾಣಗೊಂಡ ಶ್ರೀ ಗುರುಶಾಂತೇಶ್ವರ ಹಿರೇಮಠ





ಹುಕ್ಕೇರಿ ಹಿರೇಮಠದ ಶ್ರೀ ಜ.ರೇ.ಅಕ್ಷರದಾಸೋಹ ಕಾರ್ಯಗಾರದಲ್ಲಿ ಬಿಜಾಪೂರದ ಶ್ರೀ ಸಿದ್ಧೇಶ್ವರ ಶ್ರೀಗಳು ಉಪನ್ಯಾಸ ನೀಡುತ್ತಿರುವುದು.


ಪತ್ರಿಕಾ ವರದಿ ಗಳು



ಇದೇ ದಿನಾಂಕ 28 ರಂದು ಹುಕ್ಕೇರಿ ಹಿರೇಮಠದಲ್ಲಿ ಒಂಭತ್ತು ದಿನಗಳ ವರೆಗೆ ದಸರಾ ಉತ್ಸವ ಜರುಗುತ್ತಲಿದೆ.

- ಮಹಾದೇವ ಬಿರಾದಾರ, ಉಡುಗೂರ

ಶ್ರೀ ಮಠದ ದಸರಾ ಉತ್ಸವದ ಬಗ್ಗೆ ಹಸಿರು ಕ್ರಾಂತಿ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಲೇಖನ



ಹುಕ್ಕೇರಿ ಹಿರೇಮಠದ ದಸರಾ ಉತ್ಸವ 2008 ರ ವಿಶೇಷ

ಹುಕ್ಕೇರಿಯ ಶ್ರೀ ಗುರುಶಾಂತೇಶ್ವರ ಮಠ

ದಸರಾ ಉತ್ಸವದ ನಿಮಿತ್ಯವಾಗಿ ಹುಕ್ಕೇರಿ ಹಿರೇಮಠದ ವೈಭವದ ಬಗ್ಗೆ ಹಸಿರು ಕ್ರಾಂತಿ ಪತ್ರಿಕೆಯಲ್ಲಿ ಪ್ರಕಟಣೆಗೊಂಡ ಲೇಖನ







ಅನಾದಿಕಾಲದಿಂದಲೂ ಸಂಸ್ಕಾರದ ಹೊಣೆ ಹೊತ್ತ ಹುಕ್ಕೇರಿ ಸಂಸ್ಥಾನ ಹಿರೇಮಠ

ವೀರಶೈವ ಲಿಂಗಾಯತ ಧರ್ಮ ಪರಂಪರೆಯಲ್ಲಿ ಲಿಂಗ ದೀಕ್ಷಾ ಮಹತ್ವದ ಪಾತ್ರ. ಶರಣ ಸತಿ ಲಿಂಗ ಪತಿ ಎಂಬ ಮಾತಿನಲ್ಲಿ ಮದುವೆಯ ಮಾಡಿದರೋ ಲಿಂಗೈಯಗ ಮದುವೆಯ ಮಾಡಿದರೊ ಎಂಬ ಹಾಡು ಕೇಳಿ ಬರುವದು.

ಲಿಂಗ ದಿಕ್ಷಾ ಸಂಸ್ಕಾರದ ಹಕ್ಕು ಹಿರೇಮಠದ ಗುರುಗಳಿಗೆ ಇದೆ ಹುಕ್ಕೇರಿ ಪಟ್ಟಣದ ಹಿರೇಮಠ ಅನಾದಿಕಾಲದಿಂದಲೂ ಮದುವೆಯ ಮುಂದೆ ನಡೆಯುವ ಗುಗ್ಗಳೋತ್ಸವದ ಮೆರವಣಿಗೆ ಹಿರೇಮಠಕ್ಕೆ ಬರುವ ದೃಶ್ಯ, ದಸರಾ ವೈಭವ ದ ಬನ್ನಿ ಮಂಟಪಕ್ಕೆ ಬರುವ ಗುರುಗಳ ದಸರಾ ಪಲ್ಲಕ್ಕಿ ಉತ್ಸವ ಸದ್ಭಕ್ತರಲ್ಲಿ ರೋಮಾಂಚನ ಮೂಡಿಸುತ್ತದೆ. ಶಿವಸ್ಮೃತ ನೀ....ವರ್ಷವಿಡೀ ನಡೆಯುವ ದೇವಿ ಪುರಾಣ, ರೇಣುಕಾ ವಿಜಯಗ್ರಂಥ ಪಟಣ ಜನ ಶ್ರೀಮಠಕ್ಕೆ ... ಬರುವಂತೆ ಪರಂಪರೆ ಮುಂದು ವರೆದಿದೆ.



ಈ ಸಂಸ್ಕಾರದ ದಾರಿಯಲ್ಲಿ ಮಂಜೂನಿಯಲ್ಲಿದೆ. ರಂಭಾಪುರಿ ಪಾಠದ ಶಾಖಾ ಮಠವಾದ ಈ ಮಠದಲ್ಲಿ ಜಂಗಮ ವಟುಗಳಿಗೆ ಅಯ್ಯಾಜಾತಿ ಮಾನ... ನೀಡಲಾಗುತ್ತದೆ. ವಿಶಾಲ ವಾದ ಉದ್ಯಾನೆಯ ಶ್ರೀಮಠ, ಮರದ ಕಂಬಗಳಿಂದ ಅಲಂಕೃತವಾಗಿ ಸುಂದರ ಪ್ರಾಂಗಣ ಹೊಂದಿದೆ.

ಹುಕ್ಕೇರಿ ಮಠದ ಶಿಷ್ಯವರ್ಗ ಅರಸು ಮನೆತನದವರೂ ಆಗಿದ್ದು ಶ್ರೀ ಜಂಗಮವಾಡಿ ಮಠ ಜೀರ್ಣೋದ್ಧಾರ ಮಾಡಿದ ಖ್ಯಾತಿ ಈ ನಾಯಕ ಮನೆತನಕ್ಕಿದೆ. ಅರಸರಿಗ ಆಶ್ರಯ ನೀಡಿದೆ ಗುರುಹಿರೆಮಠರ ಮಹಿಮೆ ಬಹಳ ಮದುವೆಗಳು

ಶ್ರೀಮಠಕ್ಕೆ ಬಂದ ಗುರು ಪರಂಪರೆಯಲ್ಲಿ ಯೋಗ ಸಾಧಕರು, ಶಿವಯೋಗಿಗಳು ಸಾಧಕ ಸದ್ಗುರು, ಸಾಧಕರ ಪರಂಪರೆಯೂ ಇದೆ. ಪ್ರೇತ ದೋಷಗಳನ್ನು ಬಗೆಹರಿಸುವ ಶ್ರೀಮಠ ಸದ್ಭಕ್ತರಿಗೆ ನಿರ್ವಿಘ್ನದ ಸ್ಥಿತಿ ಕರುಣಿಸುವದು. ಗುರು ಪರಂಪರೆಯಲ್ಲಿ ಸಂಗೀತ ಪ್ರವೀಣರು, ರುದ್ರ ವೀಣೆ, ... ವೃಂದ ನುಡಿಸುವ ಸಂಗೀತಕಾರರೂ ಇದ್ದಾರೆ. ಈಗಲೂ ಶ್ರೀಮಠದಲ್ಲಿ ಸಂಗೀತ ಪಾಠಶಾಲೆ, ವೈದಿಕ ಪಾಠಶಾಲೆ, ಸರ್ವಶಿಕ್ಷಣ ಅಭಿಯಾನದ ಶಾಲೆ ಹಾಗೂ ಅಕ್ಷರ ದಾಸೋಹ ನಿರಂತರ ಜಾರಿಯಲ್ಲಿ ಇದೆ. ಹುಕ್ಕೇರಿ ಸದ್ಭಕ್ತರಲ್ಲಿ ಮಹಿಳಾ ಮನಿಗಳು ರುದ್ರ ನುಡಿಸುವಲ್ಲಿ



ಪ್ರವೀಣರು ಆದಿ ಪಂಚಾಚಾರ್ಯರಲ್ಲಿ ರೇಣುಕಾ ಭಗವತ್ಪಾದ ಮೊದಲು ಮಾಡಿಕೊಡು ಪಂಚ ಪೀಠದ ಜಗದ್ಗುರುಗಳು ಇಲ್ಲಿಗೆ ಸಾಗಿ ಬಂದಿದ್ದು ಅವರ ಕುರುಹುಗಳಿವೆ.

ಇಂದಿನ ಮಠಾಧೀಶ ಶ್ರೀ ಷಸ್ಥಲ ಬ್ರಹ್ಮಿ ಚಂದ್ರಶೇಖರ ಶ್ರೀಗಳ ಪಟ್ಟಾಧಿಕಾರ ಪಂಚ ಪೀಠದ ಜಗದ್ಗುರುಗಳ ಸಮ್ಮುಖದಲ್ಲಿ ನಡದದ್ದು ಇಂದಿನ ಭಕ್ತರ ಭಾಗ್ಯವೆನಿಸಿದೆ......... ಶ್ರೀ ಶ್ರೀ ಜಗದ್ಗುರುಗಳು, ಶ್ರೀಯುತ ಶ್ರೀಶೈಲ ಜಗದ್ಗುರುಗಳು, ಶ್ರೀಮದ್ದ ..... ಜಗದ್ಗುರುಗಳು ಪ್ರತಿ ವರ್ಷವೂ ಶ್ರೀಮಠದ ಕ್ಷೇತ್ರಕ್ಕೆ ದರ್ಶನ ನೀಡುವದು ಒಂದು ವಿಶೇಷ. ಇದಕ್ಕೆ ಮುಖ್ಯ ಕಾರಣ ಹುಕ್ಕೇರಿ ಹಿರೇಮಠ ನೇತೃತ್ವದಲ್ಲಿ ಪರಿಸರದಲ್ಲಿ ಶಿಥಿಲಗೊಂಡ ವಿವಿಧ ಹಿರೇಮಠಗಳ ಜೀರ್ಣೋದ್ಧಾರ ಆಗುತ್ತಿವೆ.

ಪ್ರೇರಣಾ ಶಕ್ತಿಯನ್ನು ಹೊಂದಿದ ಮಠಕ್ಕೆ ಚಾಲನೆ ನೀಡಿದವರು ಎಂ.ಸಂದರಗಿ ಶ್ರೀ ಗುರು ಗಡದೇಶ್ವರ ಹಿರೇಮಠದ ಪಟ್ಟಾಧಿಕ್ಷ ತಪೋಭೂಷಣ ಶಿವಯೋಗಿ ಶ್ರೀ ಷ.ಬ್ರ ವೀರಭದ್ರ ಶಿವಾಚಾರ್ಯರು ಈ ಭಾಗಕ್ಕೆ ಪಂಚಪೀಠಗಳ ಪಂಚಾಚಾರ್ಯರನ್ನು ಸದ್ಯದ ಕಾಲದಲ್ಲಿ ಕೀರ್ತಿ ಅವರದು. ಅವರು ಹುಕ್ಕೇರಿ ಹಿರೇಮಠ ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯರ ಹಿರಿಯ ಸಹೋದರರು ಅವರು ಪಂಚಾಚಾರ್ಯರ ಅನತಿಯಂತೆ ಪ್ರತಿವರ್ಷ ಒಂದು ತಿಂಗಳು ಪೂಜಾ ಅನುಷ್ಠಾನ ಗೈದು ಭಕ್ತರನ್ನು ಪ್ರೇರೇಪಿಸುವರು.

ಅವ್ಯಾಹತವಾಗಿ ಕಾರ್ಯಕ್ರಮ ನಡೆಯುವ ಹುಕ್ಕೇರಿ ಹಿರೇಮಠಕ್ಕೆ ಸಚಿವರ, ಶಾಸಕರು. ಸಾಹಿತಿಗಳು, ಕವಿಗಳು, ಸಂಗೀತಕಾರರು, ವಿದ್ಯನ್ಮಣಿಗಳು , ಸಮಾಜ ಸೇವಕರು ಬಂದು ಶಿವ ಪ್ರೇರಣೆ ಪಡೆಯುವರು.

ಇಂಥಹ ಮಹನಮಠದ ಶಿಷ್ಯ ಸಂಗದಲ್ಲಿ ನಾನೂ ಒಬ್ಬನೆಂಬುದು ನನಗೆ ಹೆಮ್ಮೆ.

- ಬಾಬು ನಾಯಿಕ



ಯುವಕರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿರುವ ಶ್ರೀಗಳು

ಶ್ರೀಗಳ ಅನೇಕ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಹಿತೋಪದೇಶ ನೀಡುವಾಗ ಸೆರೆ ಹಿಡಿದು ಕನ್ನಡಾಧಿಪತಿ ಪತ್ರಿಕೆಯು ಪ್ರಕಟಿಸಿರುವುದು









ಯುವಕರಲ್ಲಿ ಆಧ್ಯಾತ್ಮಿಕ ಜ್ಞಾನ, ಆರೋಗದ್ಯ ಅರಿವು ತುಂಬಿ ದೇಶ ರಕ್ಷಿಸಬೇಕು.

ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯ ಸ್ವಾಮಿಗಳು



ಷಿಟಿತು ಸಾಧನೆ ಆಗಬಾರದು. ನಮ್ಮ ಸಾಧನೆಯೇ ಮಾತಾಗಬೇಕು ಇದು ಹುಕ್ಕೇರಿಯ ಶ್ರೀ ಗುರುಶಾಂತೇಶ್ವರ ಹಿರೇಮಠದ ಶ್ರೀ ಷ.ಬ್ರ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಮಾತು ಈ ತಮ್ಮ ಮಾತುಗಳಿಗೆ ತಕ್ಕಂತೇ ಶ್ರೀಗಳು ಬದುಕಿದ್ದಾರೆ ಏಕೆಂದರೆ ಮಾತಾಡಿಸಬೇಕೆಂದರೆ ನಮ್ಮ ಕೈಗೆ ಅವರು ಸುಲಭದಲ್ಲಿ ಸಿಗುವದೇ ಇಲ್ಲ, ಸದಾ ಕ್ರಿಯಾಶೀಲರಾಗಿರುತ್ತಾರೆ. ಇಂದು ಮಧ್ಯಾಹ್ನ ಹುಕ್ಕೇರಿಯಲ್ಲಿ ಕಾರ್ಯಕ್ರಮವೊಂದರಲ್ಲಿ ಪಾಲ್ಗೊಂಡಿದ್ದರೆ...... ನಾಳೆ ಬೆಳಿಗ್ಗೆ ಹನ್ನೊಂದಾಗುವದರಲ್ಲಿ ಕಾರವಾರದಲ್ಲಿ ಯಾವದೊ ಕಾರ್ಯಕ್ರಮದಲ್ಲಿ ಸಾನಿಧ್ಯ ವಹಿಸಿರುತ್ತಾರೆ. ಸಂಜೆ ಮತ್ತೊಂದು ಕಾರ್ಯಕ್ರಮದಲ್ಲಿರುತ್ತಾರೆ ...... ಇಲ್ಲ ಮಕ್ಕಳಿಗೆ ಆಧ್ಯಾತ್ಮಿಕ ಅಥವಾ ಸಂಗೀತದ ಪಾಠ ಹೇಳುತ್ತಿರುತ್ತಾರೆ.

ದಿಗ್ಸೌ.... ಈ ಸಿ ದಿ.ಷ.ಬ್ರ ಚಂದ್ರಶೇಖರ ಶಿವಾಚಾರ್ಯಸ್ವಾಮೀಜಿ!

ನಮ್ಮ ಪತ್ರಿಕೆ ಇನ್ನು ಮುಂದೆ ಹೊಸರೂಪದಲ್ಲಿ ಇನ್ನೂ ಹೆಚ್ಚಿನ ಒಳ್ಳೆಯ ಲೇಖನಗಳೊಂದಿಗೆ ಪ್ರಕಟ ಆಗುತ್ತಿರುವ ಈ ಸಂದರ್ಭದಲ್ಲಿ ಅವರ ಜೊತೆ ಪುಟ್ಟ ಸಂದರ್ಶನವ ಮಾಡಿದೆ.

ಪ್ರ. ಇಂದಿನ ಸ್ಥಿತಿಯಲ್ಲಿ ಸ್ವಾಮಿಗಳ ಕರ್ತವ್ಯ ಏನು ಸ್ವಾಮೀಜಿ?

ಉ: ನೈಜತೆಯ ಬಗ್ಗೆ ಆಸಕ್ತಿ ಕೊಡಬೇಕು. ನಾವು ಬರೀ ಪೂಜೆ, ಮಂತ್ರ, ಇವುಗಳಲ್ಲೇ ಮುಳುಗಿ ಹೋಗಬಾರದು. ನಮ್ಮ ಆತ್ಮ ಕಲ್ಯಾಣದ ಜೊತೆಗೇ ಲೋಕದ ಕಲ್ಯಾಣಕ್ಕೂ ಆದ್ಯತೆ ಕೊಡಬೇಕು. ದೇಶ ಇಂದು ಎಷ್ಟೋ ಆತಂಕಗಳನ್ನು ಎದುರಿಸುತ್ತಿದೆ. ಇಂಥ ಸಮಕಾಲೀನ ಸಮಸ್ಯೆಗಳಿಗೆ ನಾವು ಸ್ಪಂದಿಸಬೇಕು. ಈ ಬಗ್ಗೆ ಕಾರ್ಯ ಮಾಡುತ್ತಿದ್ದೇವೆ ಎಂದು ಮನಸ್ಸಿಗೆ ಕೊಂಚ ತೃಪ್ತಿ ಆಗುತ್ತಿರುವದೇನೂ ನಿಜ! ಆದರೂ ಒಳಗಿನ ಮನಸ್ಸು ಮತ್ತೂ ಹೇಳುತ್ತದೆ.... ಇಲ್ಲ... ಇನ್ನೂ ಮಾಡಬೇಕು. ಇನ್ನಷ್ಟು ಚಿಂತನೆ ಮಾಡಿ ಸಮಾಜ ರಕ್ಷಣೆಯ ಕಾರ್ಯ ಇನ್ನೂ ಬಹಳ ಮಾಡಬೇಕಾಗಿದೆ. - ಎಂದು ಈ ನಿಟ್ಟಿನಲ್ಲಿ ಬಹಳ ಪ್ರಯತ್ನ ಆಗಬೇಕಿದೆ. ನಮ್ಮ ಕಾರ್ಯಗಳಿಗೆ




ವಿದೇಶಿ ಮಹಿಳೆಗೆ ವೀರಶೈವ ಧರ್ಮದ ಮಹತ್ವ ತಿಳಿಸುತ್ತಿರುವದು.

ಅತಿಯಾದ ವೈಭವೀಕರಣವೂ ಒಳ್ಳೆಯದಲ್ಲ, ನಾವೆಲ್ಲ ಇಂದು ದೇಶವನ್ನು ಉಳಿಸಬೇಕಾಗಿದೆ. ದೇಶ ಉಳಿದರೆ ಧರ್ಮ ತಾನೇ ಉಳಿಯುತ್ತದೆ.

ಪ್ರ : ಕೆಲ ಮುಗ್ಧರು ಮತಾಂತರವಾಗುತ್ತಿದ್ದಾರೆ... ಇದಕ್ಕೆ ಪರಿಹಾರ?

ಉ: ನಾವೆಲ್ಲ ಮಠಾಧಿಪತಿಗಳು ಈ



ಡಾ|| ಎಮ್. ಚಿದಾನಂದ ಮೂರ್ತಿ ಹಾಗೂ ಮತೀತ್ತರ ಸ್ವಾಮಿಜಿಗಳೊಡನೆ ಕಾರ್ಯಕ್ರಮವೊಂದರಲ್ಲಿ ಷ.ಬ್ರ. ಚಂದ್ರಶೇಖರ ಸ್ವಾಮೀಜಿ

ಮುಗ್ಧರ ಬಳಿ ಹೋಗಬೇಕು ನೊಂದವರನ್ನು ಹಿಂದುಳಿದವರನ್ನು ಅಪ್ಪಿಕೊಳ್ಳಬೇಕು. ನಾವೆಲ್ಲ ಸಮಾನರೆಂಬ ತತ್ವವನ್ನು ಬದುಕಿನಲ್ಲಿ ನಿಜವಾಗಿಸಬೇಕು. ಪ್ರೀತಿ ತೋರಿಸಿದರೆ ಯಾರೂ ದೂರ ಹೋಗುವದಿಲ್ಲ. ಆಗ ನಮ್ಮವರು ನಮ್ಮವರಾಗೇ ಉಳಿಯುತ್ತಾರೆ.

ಪ್ರ. ನಮ್ಮಲ್ಲೇ ಇರುವ ಚಿಕ್ಕ ಪುಟ್ಟ ಬೇಧ ಭಾವಗಳ ಬಗ್ಗೆ ಏನು ಹೇಳುತ್ತೀರಾ ...?

ಉ: ಅದೇ ನಮ್ಮ ಮನಸ್ಸಿಗೂ ಖೇದ ಆಗುವದು. ನೋಡಿ... ಸಿದ್ಧಾಂತ ಶಿಖಾಮಣಿ ಪಂಚಾಚಾರ್ಯರ ಸೊತ್ತಲ್ಲ, ವಚನ ಸಾಹಿತ್ಯ ವಿರಕ್ತರ ಸೊತ್ತಲ್ಲ, ನಿಜಗುಣ ಸಾಹಿತ್ಯ ಅದ್ವೈತಿಗಳ ಸೊತ್ತಲ್ಲ. ಇವೆಲ್ಲವೂ ಕೇವಲ ಯಾವದೇ ಒಂದು ಗುಂಪಿನ ಸ್ವತ್ತಲ್ಲ, ಈ ಅಮೂಲ್ಯ ಸಂಪತ್ತು ಎಲ್ಲರ ಸೊತ್ತು. ಇವು ಕೆಲವೊಬ್ಬರಿಗೇ ಸೀಮಿತ ಆಗಬಾರದು.

ಪ್ರ : ಇಂದಿನ ಯುವಕರು ಹಾಳಾಗುತ್ತಿದ್ದಾರೆ. ಅದರಲ್ಲೂ ಇನ್ನೂ ಹದಿನೈದರ ಆಸುಪಾಸಿನ ಹುಡುಗರು ವ್ಯಸನಗಳಿಗೆ ಅಂಟಿಕೊಳ್ಳುತ್ತಿದ್ದಾರೆ. ಇದು ನಿಜಕ್ಕೂ ದೊಡ್ಡ ಆತಂಕದ ವಿಷಯ. ಈ ನಮ್ಮ ಪೀಳಿಗೆಯ ರಕ್ಷಣೆಯ ಬಗ್ಗೆ ಏನಾದರೂ ಮಾಡಿದ್ದೀರಾ...?

ಉ: ಖಂಡಿತ ನೀವಂದಂತೇ ಇದು ನಮ್ಮ ಇಂದಿನ ದೊಡ್ಡ ಸಮಸ್ಯೆ ಮಕ್ಕಳು ಹಾಳಾಗದಂತೆ ಪಾಲಕರೂ ನೋಡಿಕೊಳ್ಳಬೇಕು. ನಾವೂ ಬೆಳಗಾವಿ, ಧಾರವಾಡ,

(5ನೇ ಪುಟಕ್ಕೆ)

ವಿದೇಶಿ ಮಹಿಳೆಗೆ ವೀರಶೈವ ಧರ್ಮದ ಮಹತ್ವ ಮತ್ತು ಯುವಕರಿಗೆ ಆಧ್ಯಾತ್ಮ ಆರೋಗ್ಯದ ಬಗ್ಗೆ ಬೋಧೆಗಯ್ಯುತ್ತಿರುವಾಗ ಕನ್ನಡಾಧಿಪತಿ ಪತ್ರಿಕೆಯವರು ಪ್ರಕಟಗೊಳಿಸಿರುವುದು

ಅನುಬಂಧ – ೩

ಆಕರಗ್ರಂಥಗಳು, ನಿಘಂಟುಗಳು,

ಪತ್ರಿಕೆಗಳು

ಅನುಬಂಧ – ೩

ಆಕರ ಗ್ರಂಥಗಳು

ಕ್ರಸಂ.	ಕೃತಿ	ಲೇಖಕರು	ಪ್ರಕಾಶನ	ವರ್ಷ
೧	ಕನ್ನಡ ಸಾಹಿತ್ಯ ಚರಿತ್ರೆ	ರಂ.ಶ್ರೀ. ಮುಗಳಿ	ಗೀತಾ ಬುಕ್ ಹೌಸ, ಮೈಸೂರು	೧೯೯೦
೨	ಕರ್ನಾಟಕದ ಮಠಗಳು ಮತ್ತು ಕನ್ನಡ ಸಾಹಿತ್ಯ	ಕೆ. ರವೀಂದ್ರನಾಥ	ಪ್ರಭುದೇವ ಜನಕಲ್ಯಾಣ ಸಂಸ್ಥೆ, ಸೊಂಡುರು	೨೦೦೭
೩	ಕರ್ತಾನ ಕಮ್ಮಟ	ಡಾ. ಎಚ್. ತಿಪ್ಪೆರುದ್ರ ಸ್ವಾಮಿ	ವಯಸ್ಕರ ಶಿಕ್ಷಣ ಸಮಿತಿ	೧೯೭೨
೪	ಕದಳಿ ಕರ್ಪುರ	ಡಾ. ಎಚ್. ತಿಪ್ಪೆರುದ್ರ ಸ್ವಾಮಿ	ಎ.ಜಿ. ಸುರ್ವತೀಂದ್ರ ವಾಣಿ ಪ್ರೆಸ್, ಮೈಸೂರು	೧೯೬೨
೫	ಕಲ್ಯಾಣದ ಹಾದಿ	ಸಿದ್ಧಲಿಂಗ	ಶ್ರೀ.ಜ. ತೊಂಟದಾರ್ಯ ಸಂಸ್ಥಾನ ಮಠ, ಡಂಬಳ	೧೯೯೯
೬	ಕರ್ನಾಟಕದ ವೀರಶೈವ ಮಠಗಳು (ಸಂ.೧)	ಚಂದ್ರಶೇಖರ ನಾಗಣಾಪುರ	ಗೆಳೆಯರ ಪ್ರಕಾಶನ, ಚಿಕ್ಕಮಗಳೂರು	೨೦೦೨
೭	ಕರ್ನಾಟಕದ ಗಂಧರ್ವರು	ಗಿರೀಶ ಜೋಶಿ	ಅಲ್ಲಮ ಪ್ರಭು ಜನಕಲ್ಯಾಣ ಸಂಸ್ಥೆ, ಚಿಂಚಣಿ	೨೦೦೮
೮	ಕನ್ನಡ ಜಗದ್ಗುರು	ಚಂದ್ರಶೇಖರ ವಸ್ತ್ರದ	ಅಲ್ಲಮ ಪ್ರಭು ಜನಕಲ್ಯಾಣ ಸಂಸ್ಥೆ, ಚಿಂಚಣಿ	೨೦೦೩
೯	ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ	ಶಂ.ಭಾ. ಜೋಶಿ	ಸಮಾಜ ಬುಕ್ ಡಿಪೋ, ಧಾರವಾಡ	೧೯೬೨
೧೦	ಕಿರಿಯರ ಕರ್ನಾಟಕ	ಪ್ರೊ. ಎಲ್.ಎಸ್. ಶೇಷಗಿರಿರಾವ್	ಕನ್ನಡ ವಿಶ್ವವಿದ್ಯಾಲಯ, ಹಂಪಿ	೧೯೯೪
೧೧	ಜ್ಞಾನ ಒಂದು ಇದ್ದ ಮ್ಯಾಲೆ ಮಾನಕೇನ ಕಡ್ಮಿ ಇಲ್ಲ	ಪಿ.ಜಿ. ಕೆಂಪಣ್ಣವರ (ಸಂ)	ಅಲ್ಲಮ ಪ್ರಭು ಜನಕಲ್ಯಾಣ ಸಂಸ್ಥೆ, ಚಿಂಚಣಿ	೨೦೦೭
೧೨	ದಾಸೋಹ	ರಾಮಕೃಷ್ಣ ಮರಾಠೆ	ರುದ್ರಾಕ್ಷಿ ಮಠ, ನಾಗನೂರ, ಬೆಳಗಾವಿ	೨೦೦೭
೧೩	ಪರಿಪೂರ್ಣದೆಡೆಗೆ	ಡಾ. ಎಚ್. ತಿಪ್ಪೆರುದ್ರ ಸ್ವಾಮಿ	ಶ್ರೀ ಸಿದ್ಧಗಂಗಾ ಪ್ರಕಾಶನ, ಸಿದ್ಧಗಂಗಾ ಮಠ, ತುಮಕೂರು	೧೯೭೨
೧೪	ಬೆಳಗಾವಿ ಜಿಲ್ಲೆಯ ಸಾಹಿತ್ಯ ದರ್ಶನ	ಪಿ.ಜಿ. ಕೆಂಪಣ್ಣವರ (ಸಂ)	ಅಲ್ಲಮ ಪ್ರಭು ಜನಕಲ್ಯಾಣ ಸಂಸ್ಥೆ, ಚಿಂಚಣಿ	೨೦೦೪

ಕ್ರಸಂ.	ಕೃತಿ	ಲೇಖಕರು	ಪ್ರಕಾಶನ	ವರ್ಷ
೧೫	ವೀರಶೈವ ಅಧ್ಯಯನ ಸಂಸ್ಥೆ	ಜಿ.ಎಂ. ಹೆಗಡೆ	ವೀರಶೈವ ಅಧ್ಯಯನ ಅಕ್ಯಾಡೆಮಿ, ನಾಗನೂರ, ರುದ್ರಾಕ್ಷಿಮಠ, ಬೆಳಗಾವಿ	–
೧೬	ಶರಣ ಚರಿತಾಮೃತ	ಸಿದ್ಧಯ್ಯ ಪುರಾಣಿಕ	ವಯಸ್ಕರ ಶಿಕ್ಷಣ ಸಮಿತಿ	೧೯೬೦
೧೭	ಶೂನ್ಯ ಸಂಪಾದನೆಯನ್ನು ಕುರಿತು	ಎಂ. ಚಿದಾನಂದ ಮೂರ್ತಿ	ಸ್ನೇಹ ಪ್ರಕಾಶನ, ವಿಜಯನಗರ, ಬೆಂಗಳೂರು	೧೯೯೦
೧೮	ಗುರುಶಾಂತೇಶ್ವರ ದೀಪ್ತಿ	ಡಿ.ವಿ. ಪುರಾಣಿಕ	ಶ್ರೀ ಗುರುಶಾಂತೇಶ್ವರ ಜನಕಲ್ಯಾಣ ಪ್ರತಿಷ್ಠಾನ, ಹುಕ್ಕೇರಿ	೨೦೧೩
೧೯	ಶ್ರೀ ದುರದುಂಡೇಶ್ವರ ಸಿದ್ಧಸಂಸ್ಥಾನ ಮಠ ಒಂದು ಅಧ್ಯಯನ	ಪ್ರಭಾ ಬೋರಗಾಂವಕರ	ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಶನೂರ	೨೦೦೧
೨೦	ಸಮಗ್ರ ವಚನ ಸಂಪುಟ	ಎಂ.ಎಂ. ಕಲಬುರ್ಗಿ (ಜನಪ್ರೀಯ ಆವೃತ್ತಿ)	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು	೧೯೯೩
೨೧	ಸಾರಂಗಶ್ರೀ	ಎಂ.ಎಂ. ಕಲಬುರ್ಗಿ (ಸಂ)	ಪೂಜ್ಯಶ್ರೀ ಚನ್ನವೀರ ಸ್ವಾಮಿಜೀ ಪ್ರತಿಷ್ಠಾನ, ಸಾರಂಗ ಮಠ, ಸಿಂದಗಿ	೧೯೯೪

ಕ್ರಸಂ.	ಕೃತಿ	ಲೇಖಕರು	ಪ್ರಕಾಶನ	ವರ್ಷ
೧೫	ವೀರಶೈವ ಅಧ್ಯಯನ ಸಂಸ್ಥೆ	ಜಿ.ಎಂ. ಹೆಗಡೆ	ವೀರಶೈವ ಅಧ್ಯಯನ ಅಕ್ಯಾಡೆಮಿ, ನಾಗನೂರ, ರುದ್ರಾಕ್ಷಿಮಠ, ಬೆಳಗಾವಿ	–
೧೬	ಶರಣ ಚರಿತಾಮೃತ	ಸಿದ್ಧಯ್ಯ ಪುರಾಣಿಕ	ವಯಸ್ಕರ ಶಿಕ್ಷಣ ಸಮಿತಿ	೧೯೬೦
೧೭	ಶೂನ್ಯ ಸಂಪಾದನೆಯನ್ನು ಕುರಿತು	ಎಂ. ಚಿದಾನಂದ ಮೂರ್ತಿ	ಸ್ನೇಹ ಪ್ರಕಾಶನ, ವಿಜಯನಗರ, ಬೆಂಗಳೂರು	೧೯೯೦
೧೮	ಗುರುಶಾಂತೇಶ್ವರ ದೀಪ್ತಿ	ಡಿ.ಪಿ. ಪುರಾಣಿಕ	ಶ್ರೀ ಗುರುಶಾಂತೇಶ್ವರ ಜನಕಲ್ಯಾಣ ಪ್ರತಿಷ್ಠಾನ, ಹುಕ್ಕೇರಿ	೨೦೧೩
೧೯	ಶ್ರೀ ದುರದುಂಡೇಶ್ವರ ಸಿದ್ಧಸಂಸ್ಥಾನ ಮಠ ಒಂದು ಅಧ್ಯಯನ	ಪ್ರಭಾ ಬೋರಗಾಂವಕರ	ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀ ವಿರಕ್ತಮಠ, ದೇಶನೂರ	೨೦೦೧
೨೦	ಸಮಗ್ರ ವಚನ ಸಂಪುಟ	ಎಂ.ಎಂ. ಕಲಬುರ್ಗಿ (ಜನಪ್ರೀಯ ಆವೃತ್ತಿ)	ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು	೧೯೯೩
೨೧	ಸಾರಂಗಶ್ರೀ	ಎಂ.ಎಂ. ಕಲಬುರ್ಗಿ (ಸಂ)	ಪೂಜ್ಯಶ್ರೀ ಚನ್ನವೀರ ಸ್ವಾಮಿಜೀ ಪ್ರತಿಷ್ಠಾನ, ಸಾರಂಗ ಮಠ, ಸಿಂದಗಿ	೧೯೯೪

ನಿಘಂಟುಗಳು

೧. ಬೆಲಗಮ್ ಡಿಸ್ಟ್ರೀಕ್ಟ್ ಗೆಜಿಟಿಯರ್ (ಇಂಗ್ಲೀಷ)
೨. ಅಮರಕೋಶ
೩. ಸಂಕ್ಷಿಪ್ತ ನಿಘಂಟು
೪. ಆಪ್ಟೇ ನಿಘಂಟು

ಪತ್ರಿಕೆಗಳು

೧. ಹಸಿರು ಕ್ರಾಂತಿ
೨. ಕನ್ನಡಾಧಿಪತಿ
೩. ಸಂಯುಕ್ತ ಕರ್ನಾಟಕ
೪. ವಿಜಯ ಕರ್ನಾಟಕ
೫. ಪ್ರಜಾವಾಣಿ
೬. ಉದಯವಾಣಿ
೭. ಲೋಕ ದರ್ಶನ
೮. ಕನ್ನಡಪ್ರಭ

****